ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಚರಿತ್ರೆ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನ ವಿದ್ಯಾರ್ಥಿ :
ಶಿವಕುಮಾರ
ರಿ. ಸಂ: **KRSH00565**

ಮಾರ್ಗದರ್ಶಕರು :
ಡಾ. ಹೆಚ್.ಎಸ್. ಬಸವೇಗೌಡ
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

ಅಧ್ಯಯನ ಕೇಂದ್ರ :
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ)
ಮಂಡ್ಯ.

983

ಇತಿಹಾಸ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ.

2011–12

ಶಂ.ಶಂ.ತ. ಅಗಸ್ಸಿ

983

AKSHARA GRANTHALAYA

ACC.NO. 048791

983

ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಚರಿತ್ರೆ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನ ವಿದ್ಯಾರ್ಥಿ :
ಶಿವಕುಮಾರ
ರಿ. ನಂ: **KRSH00565**

ಮಾರ್ಗದರ್ಶಕರು :
ಡಾ. ಹೆಚ್.ಎಸ್. ಬಸವೇಗೌಡ
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

ಅಧ್ಯಯನ ಕೇಂದ್ರ :
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ)
ಮಂಡ್ಯ.

ಇತಿಹಾಸ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ.

2011–12

934.2
KUM g
048791

983

ಸಂಶೋಧನಾ ವಿದ್ಯಾರ್ಥಿಯ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ **ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2011–12ನೇ** ಸಾಲಿಗೆ ಇತಿಹಾಸ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ"** ವಿಷಯವನ್ನು ಆಯ್ಕೆ ಮಾಡಿಕೊಂಡು **ಡಾ. ಹೆಚ್.ಎಸ್. ಬಸವೇಗೌಡ** ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

(ಶಿವಕುಮಾರ)
ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ,
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ
(ಕನ್ನಡ ವಿ.ವಿ. ಹಂಪಿ – ಮಾನ್ಯತೆ ಪಡೆದಿದೆ)

ದಿನಾಂಕ: 25-06-2012.
ಸ್ಥಳ : ಮಂಡ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

"ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಶ್ರೀ. **ಶಿವಕುಮಾರ** ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತಿದ್ದೇನೆ.

ಸ್ಥಳ : ಮಂಡ್ಯ
ದಿನಾಂಕ: 25 . 06 - 12

H. S. B. G.
(ಹೆಚ್.ಎಸ್. ಬಸವೇಗೌಡ)

Dr. H. S. BASAVEGOWDA
M.A., M.Ed., M.Phil., Ph.D.
Assistant Professor
H.O.D., Dept. of History
Govt. College for Women
Maddur, Mandya Dist.-571 428.

ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಪರಿವಿಡಿ

ಅಧ್ಯಾಯ		ಪು. ಸಂ.

ಛಾಯಾಚಿತ್ರಗಳ ಪಟ್ಟಿ

ಅಧ್ಯಾಯ–1

ಪೀಠಿಕೆ, ಉದ್ದೇಶ, ವ್ಯಾಪ್ತಿ ಮತ್ತು ಶಾಸನಗಳ ಸಮೀಕ್ಷೆ

ಅಧ್ಯಾಯ–1

ಪೀಠಿಕೆ, ಉದ್ದೇಶ, ವ್ಯಾಪ್ತಿ ಮತ್ತು ಶಾಸನಗಳ ಸಮೀಕ್ಷೆ

1.1 ಪೀಠಿಕೆ :

> "ಶಾಸನಗಳು ಪ್ರಮುಖವಾಗಿ ಒಂದು ಕಾಲದಲ್ಲಿ ನಡದ ವ್ಯವಹಾರಗಳ ಲಿಖಿತ ದಾಖಲೆಗಳು ನಾಡಿನ ರಾಜಕೀಯ, ಸಾಂಸ್ಕೃತಿ ಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಂಶಗಳನ್ನು ಅರ್ಥಮಾಡಿಕೊಳ್ಳುವ ಮೂಲ ಸಾಮಗ್ರಿಗಳಾಗಿವೆ"[1]
> – ಸಿ. ನಾಗಭೂಷಣ.

ಸಂಸ್ಕೃತಿಯು ಸದಾ ಜೀವನ್ಮುಖಿಯಾಗಿ ಹರಿಯುವ ನದಿಯಂತೆ. ಶತಮಾನದ ಉದ್ದಕ್ಕೂ ಈ ಪ್ರವಾಹದ ಹರಿವನ್ನು ಶಾಸನಗಳಲ್ಲಿ ಗುರುತಿಸಬಹುದು. ಕರ್ನಾಟಕದಲ್ಲಿ ಇದುವರೆಗೆ ದೊರೆತಿರುವ 25000 ಶಾಸನಗಳಲ್ಲಿಯು ಸಾಂಸ್ಕೃತಿಕ ಇತಿಹಾಸವನ್ನು ಗುರುತಿಸಬಹುದು. ಬಹುತೇಕ ಶಾಸನಗಳು ಮೌರ್ಯರು, ಶಾತವಾಹನರು, ಪಲ್ಲವರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರಿನ ಒಡೆಯರು ಹಾಗೂ ಆಡಳಿತಗಾರರು, ಪಾಳೇಗಾರರು ಮತ್ತು ಶ್ರೀಮಂತರುಗಳಿಂದ ಬರೆಯಿಸಲ್ಪಟ್ಟಿವೆ.

ಕರ್ನಾಟಕದ ಇತಿಹಾಸ ಹೆಚ್ಚಾಗಿ ಈ ನಾಡನ್ನು ಆಳಿದ ರಾಜಮನೆತನಗಳ ವಿವರಗಳನ್ನು ಹೊಂದಿರುತ್ತದೆ. ಆದರೆ ಕೆಲವು ಸಾಂಸ್ಕೃತಿಕ ಇತಿಹಾಸದ ಗ್ರಂಥಗಳು ರಾಜಮಹಾರಾಜರುಗಳಿಗೆ ಸೀಮಿತವಾಗಿವೆ. ಜನಸಾಮಾನ್ಯರ ಬದುಕನ್ನು ಗಣನೀಯ ಭಾಗವಾಗಿ ಪರಿಗಣಿಸಿ ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಜೀವನ ಮೌಲ್ಯಗಳು ಮತ್ತು ಬದುಕಿನ ಸಮಸ್ಯೆಗಳನ್ನು ಅಧ್ಯಯನಮಾಡುವುದಕ್ಕೆ ಸಾಂಸ್ಕೃತಿಕ ಇತಿಹಾಸ ಎಂದು ಕರೆಯಬಹುದು. ಈ ಹಿನ್ನೆಲೆಯಲ್ಲಿ ಒಂದು ಪ್ರದೇಶದ ಸಂಸ್ಕೃತಿಯನ್ನು ನಿಖರವಾಗಿ ಅರಿಯಲು ಶಾಸನಗಳು ಸಹಾಯಕಾರಿಯಾಗಿವೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸುಮಾರು 76 ಗ್ರಾಮಗಳಲ್ಲಿ ಶಾಸನಗಳು ಪತ್ತೆಯಾಗಿವೆ. ಇವುಗಳು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿವೆ.

ಪ್ರಾದೇಶಿಕ ಇತಿಹಾಸದ ಅಥವಾ ಕೆಳಸ್ತರದ ಇತಿಹಾಸದ ಮೂಲ ಬೇರು ಗ್ರಾಮೀಣ ಸಂಸ್ಕೃತಿಯಾಗಿದೆ. ಇದರಿಂದಲೇ ಮಹಾತ್ಮ ಗಾಂಧೀಜಿಯವರು ನಮ್ಮ ಸಂಸ್ಕೃತಿಯ ಮೂಲ ಗ್ರಾಮಗಳೆಂದು ಹೇಳಿದ್ದಾರೆ. ಶಾಸನಗಳು ಆಯಾ ಕಾಲದ ಸ್ಥಳೀಯ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಕಲೆ, ಸಾಹಿತ್ಯ ಹಾಗೂ ಹಲವಾರು ಕ್ಷೇತ್ರಗಳ ಚಟುವಟಿಕೆಗಳ ಬಗೆಗೆ ಮಾಹಿತಿ ನೀಡುತ್ತವೆ. ಪ್ರಾಚೀನ ಕೆಳಸ್ತರದ ಇತಿಹಾಸವನ್ನು ಸಂಸ್ಕೃತಿಯನ್ನು ವಿವರಿಸುವಲ್ಲಿ ಶಾಸನಗಳು ಮಹತ್ವಪೂರ್ಣ ಆಧಾರಗಳಾಗಿವೆ.

1.2 ಭೌಗೋಳಿಕ ಲಕ್ಷಣ :

ಕರ್ನಾಟಕ ರಾಜ್ಯದ 27 ಜಿಲ್ಲೆಗಳಲ್ಲಿ ದಕ್ಷಿಣ ಭಾಗದ ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ (ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು, ಕೊಳ್ಳೆಗಾಲ) ಗುಂಡ್ಲುಪೇಟೆ ಕೂಡ ಒಂದು. ಇದು ಐತಿಹಾಸಿಕ ಪ್ರದೇಶವಾಗಿದ್ದು. ಸುಮಾರು 1406.2 ಚದುರ ಮೈಲಿಗಳ ವಿಸ್ತಾರವನ್ನು ಹೊಂದಿದ್ದು, ಪೂರ್ವ ಉತ್ತರ ರೇಖಾಂಶ 76°43'49"-76°51'27" ಹಾಗೂ ಉತ್ತರ ಅಕ್ಷಾಂಶ 11°35'37" - 12°00'22" ವರೆಗೆ ಹರಡಿಕೊಂಡಿದೆ. ಸಮುದ್ರಮಟ್ಟಕ್ಕಿಂತ ಸುಮಾರು 2619 ಅಡಿ ಎತ್ತರವಾಗಿದೆ. ತಾಲ್ಲೂಕು ನಾಲ್ಕು ಹೋಬಳಿ ಕೇಂದ್ರಗಳನ್ನು ಹೊಂದಿದೆ (ಹಂಗಳ, ಕಸಬಾ, ಬೇಗೂರು, ತೆರಕಣಾಂಬಿ) ಒಟ್ಟು 181 ಗ್ರಾಮಗಳಿವೆ. ಇದರಲ್ಲಿ 160 ಗ್ರಾಮಗಳಲ್ಲಿ ಜನವಸತಿ ಕಂಡುಬರುತ್ತದೆ.[2]

ಗುಂಡ್ಲುಪೇಟೆ ತಾಲ್ಲೂಕು ಕರ್ನಾಟಕದಿಂದ ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಆಯಕಟ್ಟಿನ ಸ್ಥಳದಲ್ಲಿದೆ. ಇದರಿಂದಾಗಿ ಅನಾದಿಕಾಲದಿಂದಲೂ ವ್ಯಾಪಾರ ವಹಿವಾಟುಗಳು ಈ ಭಾಗದಲ್ಲಿ ಹೆಚ್ಚಾಗಿ ನಡೆಯುತ್ತವೆ. ತಾಲ್ಲೂಕಿನ ದಕ್ಷಿಣ ಭಾಗವು ತಮಿಳುನಾಡು ಮತ್ತು ಕೇರಳದ ನೀಲಗಿರಿ ಬೆಟ್ಟಗುಡ್ಡಗಳ ಹಾಗೂ ಉತ್ತರಕ್ಕೆ ಹೆಗ್ಗಡದೇವನಕೋಟೆ ತಾಲ್ಲೂಕು, ನಂಜನಗೂಡು ತಾಲ್ಲೂಕು ಮತ್ತು ಚಾಮರಾಜನಗರ ತಾಲ್ಲೂಕಿನ ಭಾಗವನ್ನು ಹೊಂದಿದ್ದು ವಿಶಿಷ್ಟವಾದ ಮಳೆನೆರಳಿನ ಪ್ರದೇಶವಾಗಿದೆ. ಜೊತೆಗೆ ಸೋಲಿಗರ ಸಂಸ್ಕೃತಿ, ಜಾನಪದ ಸಂಸ್ಕೃತಿಗಳ ತಾಣವೂ ಆಗಿದೆ. ನೀಲಗಿರಿ ಸಾಲಿನಲ್ಲಿ ಗೋಪಾಲಸ್ವಾಮಿ ಬೆಟ್ಟವಿದ್ದು, 'ಹಿಮಗಿರಿ' ಎಂದು ಪ್ರಸಿದ್ಧಿಯಾಗಿದೆ. (ದೇವರ ತಲೆಗೆ ವರ್ಷವಿಡಿ ಹಿಮಬೀಳುವುದರಿಂದ ಮತ್ತು ಬೆಟ್ಟವು ಬಹುತೇಕ ಹಿಮದಿಂದ ಕೂಡಿರುವುದರಿಂದ ಹಿಮಗಿರಿ ಎಂದು ಕರೆಯಲಾಗಿದೆ).

1.3 ಅಧ್ಯಯನದ ಉದ್ದೇಶ :

ಕರ್ನಾಟಕ ಇತಿಹಾಸ ರಚನೆಯಲ್ಲಿ ಶಾಸನಗಳು ಮಹತ್ವದ ಆಧಾರವಾಗಿವೆ, ಈ ತಾಲ್ಲೂಕಿನ ಇತಿಹಾಸವನ್ನು ಶಾಸನಗಳ ದೃಷ್ಟಿಕೋನದಲ್ಲಿ ನೋಡಬೇಕಾಗಿದೆ. ಏಕೆಂದರೆ ಈವರೆಗೆ ತಾಲ್ಲೂಕಿನ ವಿವರ ಹೊಂದಿರುವ ಸಾಹಿತ್ಯ ಗ್ರಂಥಗಳು ಹೇರಳ ಪ್ರಮಾಣದಲ್ಲಿದ್ದರು ಶಾಸನಗಳಲ್ಲಿರುವ ಸಾಂಸ್ಕೃತಿಕ ವಿಚಾರವನ್ನು ವಸ್ತುನಿಷ್ಠವಾಗಿ ನೋಡಬೇಕಾಗಿದೆ. ಆದ್ದರಿಂದ ಇದೇ ತಾಲ್ಲೂಕಿನ ಇತಿಹಾಸದ ವಿದ್ಯಾರ್ಥಿಯಾದ ನಾನು ತಾಲ್ಲೂಕಿನ ಇತಿಹಾಸವನ್ನು ತಿಳಿಯುವುದು ಕರ್ತವ್ಯವಾಗಿದೆ. ಶಾಸನಗಳ ನಿರ್ಲಕ್ಷ ದೃಷ್ಟಿಯಿಂದ ನೋಡಿದರೆ ಇತಿಹಾಸ ತಿಳಿಯದೆ ಮರೆಯಾಗಬಹುದು.

ಪ್ರಸ್ತುತ ಅಧ್ಯಯನದಲ್ಲಿ ಈ ತಾಲ್ಲೂಕಿನ ಶಾಸನಗಳಲ್ಲಿರುವ ಇತಿಹಾಸ ಮತ್ತು ಸಾಂಸ್ಕೃತಿಕ ಅಂಶಗಳ ವಿವರಿಸುವ ಪ್ರಯತ್ನ ಮಾಡಲಾಗಿದೆ. ಈ ಭಾಗದ ರಾಜಕೀಯ,

ಧಾರ್ಮಿಕ ಪಂಗಡ ಅವರ ನಂಬಿಕೆಗಳು, ಜೀವನ ನಡೆಸಲು ಅನುಸರಿಸಿದ ಕಸುಬುಗಳನ್ನು ವಿವರಿಸಲಾಗಿದೆ ಹಾಗೂ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಸಾಂಸ್ಕೃತಿಕ ದೃಷ್ಟಿಕೋನದಿಂದ ಶಾಸನಗಳನ್ನು ಅಧ್ಯಯನ ಮಾಡಲಾಗಿದೆ.

1.4 ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಅಧ್ಯಯನದಲ್ಲಿ ಶಾಸನಗಳಷ್ಟೆ ಅಲ್ಲದೇ ವೀರಗಲ್ಲು, ಮಾಸ್ತಿಗಲ್ಲುಗಳನ್ನು ಅಧ್ಯಯನಕ್ಕೆ ಬಳಸಲಾಗಿದೆ ಹಾಗೂ ಹಲವಾರು ಸಾಹಿತ್ಯ ಕೃತಿಗಳು ಬಳಸಲಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನ ಬಹುತೇಕ 76 ಹಳ್ಳಿಗಳಲ್ಲಿ ಶಾಸನಗಳು ದೊರೆತಿದ್ದು ಗಂಗರಿಂದ ಮೈಸೂರು ಒಡೆಯರ ಕಾಲದವರೆಗಿನ 224 ಶಾಸನಗಳು ಪ್ರಾಥಮಿಕ ಆಧಾರಗಳನ್ನು ಒದಗಿಸುತ್ತವೆ. ಈ ಶಾಸನಗಳ ಸಂಖ್ಯೆ ತಾಲ್ಲೂಕಿನ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಹಿರಿಮೆಯನ್ನು ಸೇರಿಸಿಕೊಂಡು ಮಾಹಿತಿ ಸಂಗ್ರಹಣೆಗಿಂತಲೂ ವಿಶ್ಲೇಷಣೆಗೆ ಹೆಚ್ಚಿನ ಗಮನಕೊಡಲಾಗಿದೆ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣವನ್ನು ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ.

ಕರ್ನಾಟಕದಾದ್ಯಂತ ಶಾಸನಗಳ ಪರಿವೀಕ್ಷಣೆ ಕಾರ್ಯವು ಸಂಪೂರ್ಣಗೊಂಡಿದೆ ಎಂದು ಹೇಳಲು ಸಾಧ್ಯವಿಲ್ಲ. ಬಹಳಷ್ಟು ಭಾಗದ ಶಾಸನ ಸಂಪೂರ್ಣ ಅಧ್ಯಯನ ಮತ್ತು ಇತಿಹಾಸ ರಚನೆಯಲ್ಲಿ ಬಳಕೆಯಾಗಿಲ್ಲ ಆದ್ದರಿಂದ ಶಾಸನಗಳ ಅಕ್ಷಯ ಪಾತ್ರೆಯಿಂದ ಕೇವಲ ತಾಲ್ಲೂಕಿನ ವಿಚಾರಗಳನ್ನು ಈ ಅಧ್ಯಯನದಲ್ಲಿ ತೆಗೆದುಕೊಂಡು ಶಾಸನಗಳ ಕೊಡುಗೆಯನ್ನು ದಾಖಲುಮಾಡುವ ಪ್ರಯತ್ನ ಮಾಡಲಾಗಿದೆ. ಕರ್ನಾಟಕದ ಮಟ್ಟಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಶಾಸನಗಳೇ ಸಿಂಹಪಾಲು ಹೊಂದಿರುವುದರಿಂದ ಈ ಅಧ್ಯಯನದ ವ್ಯಾಪ್ತಿಯನ್ನು ಶಾಸನಗಳಿಗೆ ಸೀಮಿತಗೊಳಿಸಲಾಗಿದೆ.

1.5 ಶಾಸನಗಳ ಅರ್ಥ ಮತ್ತು ಸಮೀಕ್ಷೆ :

ಶಾಸನ ಎಂಬ ಸಂಸ್ಕೃತ ಪದಕ್ಕೆ 'ಆಜ್ಞೆ' (ರಾಜಾಜ್ಞೆ) ಎಂಬುದು ಮೂಲಾರ್ಥವಾಗಿದೆ. ಇದಕ್ಕೆ ಪೂರಕವಾಗಿ ಕೌಟಿಲ್ಯನು ತನ್ನ ಅರ್ಥಶಾಸ್ತ್ರ ಗ್ರಂಥದಲ್ಲಿ 'ಶಾಸನ ಎಂಬ ಪದ ರಾಜರ ಆಜ್ಞೆಗಳನ್ನು ತಿಳಿಸುವ ಬರಹಗಳನ್ನು ಹೇಳತ್ತದೆ'[3] ಎಂದಿದ್ದಾನೆ. ಶಾಸನ ಶಬ್ದಕ್ಕೆ ಈಗಲೂ ಕಾನೂನು ಎಂಬ ಅರ್ಥ ಪ್ರಚಲಿತವಾಗಿರುವುದನ್ನು ಗಮನಿಸಬಹುದು. ಶಾಸನ ಎಂಬುದು ಮೂಲತಃ ದಾನ ಸಂಬಂಧವಾದ ರಾಜಾಜ್ಞೆಯಾಗಿತ್ತು. ದಾನವಾಗಿ ಕೊಟ್ಟ ಭೂಮಿಗೆ ತೆರಿಗೆಯ ವಿನಾಯಿತಿಯನ್ನು ಹೇಳುವ ಆಜ್ಞೆಯನ್ನೂ ಹೊಂದಿದೆ. ಎಂ.ಬಿ.ನೇಗಿನಹಾಳ ಹೇಳುವಂತೆ 'ಶಾಸನ' ಎಂಬ ಪದಕ್ಕೆ ನಾನಾರ್ಥಗಳಿರುವವಾದರೂ ಈ ದಾಖಲೆಗಳ ಸಂದರ್ಭದಲ್ಲಿ ಅದಕ್ಕೆ ರಾಜಾಜ್ಞೆ ಎಂಬ ವಿಶಿಷ್ಟಾರ್ಥ ಅನ್ವಯವಾಗುತ್ತದೆ. ಇದನ್ನು

ಬರೆಯಿಸಿದವರು ಕೂಡ ಆಗೀಗ ಇದನ್ನು 'ಶಾಸನ' ಎಂದೇ ಹೆಸರಿಸಿದ್ದಾರೆ. ಇದಲ್ಲದೆ ಲಿಪಿ, ಧರ್ಮಲಿಪಿ ಲೇಖ, ಶಿಲಾಲೇಖ ಕೈಬರಹ, ತಾಮ್ರಪಟ್ಟಿಕಾ ತಾಮ್ರಪಟ, ತಾಮ್ರಶಾಸನ, ಇತ್ಯಾದಿ ನಾಮಾಂತರಗಳೂ ಶಾಸನಗಳಿಗೆ ಇವೆ.

ಕರ್ನಾಟಕ ಶಾಸನ ಶಾಸ್ತ್ರದ ಸೀಮಾ ಪುರುಷರು ಎಂದು ಜೆ.ಎಫ್.ಫ್ಲೀಟ್ ಮತ್ತು ಬಿ.ಎಲ್.ರೈಸ್‌ರನ್ನು ಕರೆಯಲಾಗಿದೆ. ಫ್ಲಿಟ್ ಪ್ರಕಾರ ಇವು ವಂಶಾವಳಿಗಳಿಗಿಂತ ಸಂಪರ್ಕವಾದ ದಾಖಲೆಗಳೆಂದೂ ರಾಜಕೀಯ ಚರಿತ್ರೆಯ ರೂಪರೇಖೆಗಳು ಇವುಗಳಲ್ಲಿ ಇರುತ್ತಿದ್ದುವೆಂದೂ ವಿವರಿಸಿದ್ದಾರೆ.[4] ಗುಂಡ್ಲುಪೇಟೆ ತಾಲ್ಲೂಕಿನ ಆಡಳಿತ ನಡೆಸಿದ ಗಂಗರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೆ ಈ ಭಾಗವನ್ನು ಆಳ್ವಿಕೆ ನಡೆಸಿದ ರಾಜಮನೆತನಗಳ ಹಾಗೂ ಶ್ರೀಮಂತರು ಹೊರಡಿಸಿದ 224 ಶಾಸನಗಳು ಈಗಾಗಲೇ ದೊರೆತಿದ್ದು ಇವುಗಳು 76 ಗ್ರಾಮಗಳಲ್ಲಿ ಪತ್ತೆಯಾಗಿವೆ. ಇವುಗಳಲ್ಲಿ ಗಂಗರ ಕಾಲದ ಸುಮಾರು 11 ಶಾಸನಗಳು ಹೊಯ್ಸಳರ ಕಾಲದ ಸುಮಾರು 20 ಶಾಸನಗಳು, ವಿಜಯನಗರ ಕಾಲದ ಸುಮಾರು 74 ಶಾಸನಗಳು, ಉಮ್ಮತ್ತೂರಿನ ಪಾಳೇಗಾರರ ಕಾಲದ ಸುಮಾರು 16 ಶಾಸನಗಳು, ತೆರಕಣಾಂಬಿ ಪಾಳೇಗಾರರ 15 ಶಾಸನಗಳು, ಮೈಸೂರು ಒಡೆಯರ ಕಾಲದ ಕೆಲವು ಶಾಸನಗಳು ದೊರೆತಿವೆ. ಇವುಗಳಲ್ಲಿ 18 ಶಾಸನಗಳು ತಮಿಳು ಭಾಷೆಯ ಶಾಸನಗಳು, 4 ಸಂಸ್ಕೃತ ಭಾಷೆಯ ಶಾಸನಗಳನ್ನು ಗುರುತಿಸಲಾಗಿದೆ.

ಭಾಷೆಯ ದೃಷ್ಟಿಯಿಂದ ನೋಡಿದಾಗ ಕೆಲವು ಶಾಸನಗಳು ಭಾಗಶಃ ತಮಿಳು ಭಾಗಶಃ ಸಂಸ್ಕೃತದಲ್ಲೂ ಉಳಿದವು ಪೂರ್ಣ ಪ್ರಮಾಣದ ಹಳಗನ್ನಡದಲ್ಲೂ ಕಂಡುಬರುತ್ತವೆ.[5] ನಳೂರುನ ವೀರಗಲ್ಲು ಶಾಸನದಲ್ಲಿ ಪೂರ್ಣಪ್ರಮಾಣದ ಹಳಗನ್ನಡ ಭಾಷೆಯ ಬರವಣಿಗೆಯನ್ನು ಗುರುತಿಸಬಹುದಾಗಿದೆ.[6] ಮತ್ತೊಂದು ವಿಷಯವೆಂದರೆ ತಾಲ್ಲೂಕಿನಲ್ಲಿ ದೊರೆತಿರುವ ಶಾಸನಗಳಲ್ಲಿ ಕೆಲವು ಒಂದೇ ಪದದ ಅಥವಾ ಒಂದೇ ಸಾಲಿನಿಂದ ಕೂಡಿವೆ ಹಾಗೆಯೇ ತ್ರಿಯಂಬಕಪುರದ ನಾಲ್ಕನೆಯ ತಾಮ್ರಶಾಸನ 114 ಸಾಲುಗಳುಳ್ಳ ಅತೀ ದೊಡ್ಡ ಶಾಸನವು ತಾಲ್ಲೂಕಿನಲ್ಲಿ ದೊರೆತಿದೆ.

ಶಾಸನಗಳನ್ನು ಕೆತ್ತಿಸುವಾಗ ತಮ್ಮ ರಾಜಮನೆತನಗಳ ಹೆಸರು ಶಾಶ್ವತವಾಗಿರಲೆಂದು ಅವುಗಳ ಆರಂಭದಲ್ಲಿ ಸೂರ್ಯ, ಚಂದ್ರ, ಯಾದವ ವಂಶಗಳಿಂದ ನಿಷ್ಪತ್ತಿಗೊಳಿಸುವ ಪ್ರವೃತ್ತಿ ಕೆಲವು ಶಾಸನಗಳಲ್ಲಿ ಕಂಡುಬರುತ್ತದೆ. ಹಾಗೆಯೇ ಈ ಶಾಸನಗಳು ಸೂರ್ಯ ಚಂದ್ರರುಗಳು ಇರುವವರೆಗೂ ಶಾಶ್ವತವಾಗಿರಲೆಂದು ಬರೆಸಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಶಾಸನಗಳ ನಾಶಪಡಿಸಿದವರೂ ಪಂಚಮಹಾಪಾಪ ಹೊಂದುತ್ತಾರೆ ಮತ್ತು ಚಿಕ್ಕಕವಿಯ ಶಾಸನದಲ್ಲಿ ಹಸುವನ್ನು ಕೊಂದ ಶಾಪ, ವಾರಣಾಸಿಯನ್ನು ನಾಶ ಮಾಡಿದ ಪಾಪ ಹಾಗೂ 60000 ವರ್ಷಗಳ ಕಾಲ ಹುಳುವಾಗಿ ಜನ್ಮಪಡೆಯುತ್ತಾರೆ[7] ಎಂದೂ

ಉಲ್ಲೇಖಿಸಿರುವುದನ್ನು ಕೆಲವು ಶಾಸನಗಳೇ ಸಾಕ್ಷಿಯನ್ನು ಬರೆಸಿರುವುದನ್ನು ಕಾಣಬಹುದಾಗಿದೆ.

ಶಾಸನಗಳನ್ನು ಬರೆದವರು ಮತ್ತು ಉಲ್ಲೇಖಿತ ಅಧಿಕಾರಿಗಳೆಂದರೆ, ಸಭಾಪತಿ, ಹೆಗ್ಗಡೆಬಾಸಯ್ಯ, ಆನಂದಚಾರಿ, ಮಾಣಿಕ್ಯಚಾರಿ, ಮಲ್ಲನ ಮಗ ವೀರಣಾರ್ಯ, ಅಪ್ಪಾಜಿಜೋಯಿಸ್, ನೃಸಿಂಹದಾಸೋಜ, ಕೊಯಮತ್ತೂರು ಶುಭಾಚಾರಿ.

1.6 ಗ್ರಂಥಗಳ ಸಮೀಕ್ಷೆ :

ತಾಲ್ಲೂಕಿನ ಬಗ್ಗೆ ಈವರೆಗೆ ಪ್ರಕಟವಾಗಿರುವ ಮತ್ತು ಸಂಶೋಧಿತ ಕೃತಿಗಳೆಂದರೆ 'ಗುಂಡ್ಲುಪೇಟೆ ತಾಲ್ಲೋಕು ಒಂದು ಸಾಂಸ್ಕೃತಿಕ ಅಧ್ಯಯನ' – ಡಾ. ಪಳನಿಸ್ವಾಮಿ, 'ವಿಜಯನಗರ ಇತಿಹಾಸದಲ್ಲಿ ಗುಂಡ್ಲುಪೇಟೆ ಪ್ರದೇಶ ಒಂದು ಸಮಗ್ರ ಅಧ್ಯಯನ' – ಬಿ.ಸುರೇಶ್, 'ಕೌಂಡಿನ್ಯ', 'ತೆರಕಣಾಂಬಿ ಬೊಮ್ಮರಸ ವಿರಚಿತ ಜೀವಂಧರ ಚರಿತ್ರೆ', 'ನಳೂರು ಏಳುಹಳ್ಳಿ ಇಂಗುಳವಾಡಿ ಮಾಹದೇಶ್ವರ', 'ಶ್ರೀಗಂಧ', 'ಮಧ್ವಾನೇಶ್ವರ ಚರಿತ್ರೆ', 'ವನಶ್ರೀ', 'ಸ್ಕಂದಗಿರಿ'–ಜಿ.ಜಿ.ಮಂಜುನಾಥ್, 'ಪಡಗೂರು ದರ್ಶನ'. 'ಬೆರಂಬಾಡಿ ಕೆರೆತಡಿ ಮಾಹದೇಶ್ವರ', 'ಗುಂಡ್ಲುಪೇಟೆ ದಾನಿಗಳು', 'ಗುಂಡ್ಲುಪೇಟೆ ತಾಲ್ಲೋಕಿನ ವೀರಶೈವ ಮಠಗಳು'–ಪಿ.ಸಿ.ರಾಜಶೇಖರ್, 'ಗುಂಡ್ಲುಪೇಟೆ ತಾಲ್ಲೋಕು ದರ್ಶನ'–ಜಿ.ಎಸ್.ಭಟ್ಟ ಪ್ರಮುಖವಾದವುಗಳಾಗಿವೆ. ಈ ಕೃತಿಗಳು ರಾಜಕೀಯ, ಜಾನಪದ, ಧಾರ್ಮಿಕ ವಿಚಾರಗಳ ವಿವರಣೆಯನ್ನು ಹೊಂದಿವೆ. ಆದರೆ ಇವುಗಳಲ್ಲಿ ತಾಲ್ಲೋಕಿನ ಶಾಸನಗಳ ಸಾಂಸ್ಕೃತಿಕ ಇತಿಹಾಸದ ಬಗ್ಗೆ ಸ್ಥೂಲವಾದ ವಿವರಣೆ ದೊರೆಯುವುದಿಲ್ಲ. ತಾಲ್ಲೋಕಿನ ಇತಿಹಾಸದ ರಚನೆಗಿರುವ ಕೊರತೆಯನ್ನು ಶಾಸನಗಳ ಅಧ್ಯಯನದಿಂದ ಪೂರ್ಣಗೊಳಿಸಬಹುದು. ವಸ್ತುನಿಷ್ಠ ಇತಿಹಾಸದ ರಚನೆಯಲ್ಲಿ ಶಾಸನಗಳು ಮಹತ್ವದ ಆಧಾರಗಳಾಗಿವೆ. ಶಾಸನಗಳು ಆಡಳಿತ ನಡೆಸಿದ ಪ್ರಮುಖ ಅರಸರುಗಳ, ದಾನಿಗಳ, ಗಡಿಭಾಗಗಳ ಭೂಹಿಡುವಳಿಗಳ ಬಗ್ಗೆ ಮಾಹಿತಿ ನೀಡುತ್ತವೆ.

1.7 ಅಧ್ಯಯನ ವಿಧಾನ

ಈ ಅಧ್ಯಯನ ಸಂಪೂರ್ಣವಾಗಿ ಚಾರಿತ್ರಿಕ ವಿಧಾನವಾಗಿದ್ದು ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ ಮತ್ತು ಸಂಯೋಜನೆಗಳನ್ನು ಒಳಗೊಂಡಿದೆ. ಅಂತರಶಾಸ್ತ್ರೀಯ ವಿಚಾರಗಳಾದ ಹಾಗೂ ಶಾಸನಗಳ ಪ್ರಕಾರಗಳಾದ ಸ್ಮಾರಕಗಳು, ದೇವಾಲಗಳಲ್ಲಿ ಬಳಸಲಾಗಿದೆ. ಅಲ್ಲದೆ ಪ್ರಾಥಮಿಕ ಆಧಾರಗಳು, ಮಾಧ್ಯಮಿಕ ಆಧಾರಗಳು, ಸಮಕಾಲೀನ ದಾಖಲೆಗಳು, ನಿಯತಕಾಲೀಕಗಳನ್ನು ಬಳಸಿಕೊಳ್ಳಲಾಗಿದು. ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ, ಓರಿಯಂಟಲ್ ಲೈಬ್ರರಿ ಮೈಸೂರು, ಅರಮನೆ ಪತ್ರಗಾರ ಹಾಗೂ ಇನ್ನಿತರ ಗ್ರಂಥಾಲಯಗಳು, ಸಂದರ್ಶನಗಳ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಶಾಸನಗಳನ್ನು ಗಂಭೀರವಾಗಿ ಪರಿಗಣಿಸಿ, ಆದರೆ ಡಾ|| ಕೆ.ಎಂ.ನೀಲಕಂಠಶಾಸ್ತ್ರಿ ಹೇಳುವಂತೆ "ಕಾವ್ಯಗಳೆಲ್ಲ ಬರಿಯ ಕಟ್ಟು ಕಥೆಗಳೆಂದು ಅವುಗಳನ್ನು ಐತಿಹಾಸಿಕ ಅಧ್ಯಯನದಲ್ಲಿ ತಿರಸ್ಕರಿಸುವುದು, ಶಾಸನಗಳಲ್ಲಿ ತಾಮ್ರ ಪಟಗಳಲ್ಲಿ ಬರುವುದೆಲ್ಲವೂ ಅಕ್ಷರಶಃ ನಿಜವೆಂದು ಕಣ್ಣು ಮುಚ್ಚಿ ನಂಬಿಬಿಡವುದೂ ಎರಡೂ ದಡ್ಡತನಗಳೇ" ಎಂಬ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಂಡು ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳನ್ನು ಅಧ್ಯಯನ ಮಾಡಲಾಗಿದೆ. ಈ ಶಾಸನಗಳು ಸಾಂಸ್ಕೃತಿಕ ಇತಿಹಾಸದ ಅಧ್ಯಯನಕ್ಕೆ ಹೇಗೆ ಪೂರಕವಾಗಿವೆ ಮತ್ತು ಇತಿಹಾಸ ರಚನೆಯಲ್ಲಿ ಅವುಗಳ ಮಹತ್ವದ ಪಾತ್ರವನ್ನು ಕುರಿತು ವಿವರಿಸಲಾಗಿದೆ ಹಾಗೂ ಪ್ರಸ್ತುತ ಅಧ್ಯಯನದ ಮಹತ್ವವನ್ನು ಸಮೀಕರಿಸಲಾಗಿದೆ.

ಪ್ರಸ್ತುತ ಅಧ್ಯಯನವು ಶಾಸನದಲ್ಲಿ ಉಲ್ಲೇಖವಾಗಿರುವ ರಾಜಕೀಯ ವ್ಯವಸ್ಥೆಯನ್ನು ಒಳಗೊಂಡಿಕುತ್ತದೆ. ಸಾಮ್ರಾಜ್ಯಗಳು, ರಾಜಮಹಾರಾಜರು, ಸಾಮಂತರು, ಪಾಳೇಗಾರರುಗಳ ರಾಜ್ಯಾಡಳಿತ, ದಂಡನಾಯಕರು, ಮಂತ್ರಿಗಳು, ಅಧಿಕಾರಿಗಳು, ನ್ಯಾಯ ಪರಿಪಾಲಕರು, ಗ್ರಾಮಗಳ ಮುಖಂಡರು ಅವರ ಅಧಿಕಾರ ವ್ಯಾಪ್ತಿ, ಸೈನ್ಯ, ದಿಗ್ವಿಜಯಗಳು, ರಾಜಕೀಯ ಒಪ್ಪಂದಗಳು ಹೀಗೆ ರಾಜಕೀಯ ವಿಚಾರಗಳನ್ನು ಸಾಂಸ್ಕೃತಿಕ ದೃಷ್ಟಿಯಿಂದ ನೋಡಲಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಕುರಿತಂತೆ ಕೃಷಿ ಚಟುವಟಿಕೆಗಳು, ನೀರಾವರಿ, ಕೆರೆಗಳು, ವ್ಯಾಪಾರ ಮತ್ತು ವಾಣಿಜ್ಯ, ವರ್ತಕ ಶ್ರೇಣಿಗಳು, ಸಮುದಾಯಗಳು, ತೆರಿಗೆ ಹಾಗೂ ತೆರಿಗೆ ಅಧಿಕಾರಿಗಳ ವಿವರಗಳು, ವ್ಯಾಪಾರದಲ್ಲಿ ತೂಕ ಮತ್ತು ಅಳತೆಗೋಲುಗಳು, ಆರ್ಥಿಕ ಒಪ್ಪಂದಗಳು, ಮೊದಲಾದ ಆರ್ಥಿಕ ಮತ್ತು ಸಾಮಾಜಿಕ ಜನಜೀವನವನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಇವುಗಳ ಅಧ್ಯಯನಕ್ಕೆ ವೀರಗಲ್ಲುಗಳ ಮತ್ತು ಮಾಸ್ತಿಕಲ್ಲುಗಳನ್ನು ಬಳಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಧಾರ್ಮಿಕವಾಗಿ ವೈಷ್ಣವಧರ್ಮ, ಶೈವಧರ್ಮ, ಜೈನಧರ್ಮ, ವೀರಶೈವಧರ್ಮಗಳನ್ನು ಗುರುತಿಸಲಾಗಿದೆ. ಪಂಗಡಗಳು, ಧಾರ್ಮಿಕ ಸಂಸ್ಥೆಗಳ ದಾನಶಾಸನಗಳಲ್ಲಿ ಧಾರ್ಮಿಕ ಚಟುವಟಿಕೆ. ಸಾಮಾಜಿಕ ವ್ಯವಸ್ಥೆ ಬೆಳವಣಿಗೆಯಲ್ಲಿ ಮತಮಾನ್ಯಗಳ ಪ್ರಭಾವದ ಮಹತ್ವವನ್ನು ವಿವರಿಸಲಾಗಿದೆ.

ಒಟ್ಟಾರೆ ಗುಂಡ್ಲುಪೇಟೆ ತಾಲ್ಲೋಕಿನ ಪ್ರಾದೇಶಿಕತೆ, ಅದರ ಧರ್ಮ, ಆರ್ಥಿಕ ಜೀವನ, ಜೀವನ ಮೌಲ್ಯಗಳು, ಧಾರ್ಮಿಕ ಪಂಗಡಗಳು, ಆಚರಣೆಗಳು, ದೇವಾಲಯಗಳು, ಪ್ರವಾಸಿತಾಣಗಳ ಇತಿಹಾಸ ಹಾಗೂ ಸಮಾಜ ಸಂಸ್ಕೃತಿಯನ್ನು ವಿವರಿಸುವ ಉದ್ದೇಶದಿಂದ "ಗುಂಡ್ಲುಪೇಟೆ ತಾಲ್ಲೋಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯಲ್ಲಿ ಅಧ್ಯಯನ ಮಾಡಲಾಗಿದೆ.

ಅಡಿ ಟಿಪ್ಪಣಿಗಳು :

1. ಡಾ. ನಾಯಕರ ಹುಲುಗಪ್ಪ, 'ಶಾಸನಗಳ ಪ್ರಕಾರ ಮತ್ತು ಅವುಗಳ ಮಹತ್ವ', ಪು.6.
2. ಭೂ ಕಂದಾಯ ಮತ್ತು ಭೂ ಸಮೀಕ್ಷಣ ಇಲಾಖೆ, ಗುಂಡ್ಲುಪೇಟೆ.
3. ಸಿ.ಪಿ.ಕೆ, ಶಾಸನಶಾಸ್ತ್ರ ಪ್ರವೇಶ, ಪು.25.
4. ಅದೇ, ಪು.13.
5. ಡಾ. ಪಳನಿಸ್ವಾಮಿ, 'ಗುಂಡ್ಲುಪೇಟೆ ತಾಲ್ಲೂಕಿನ ಒಂದು ಸಾಂಸ್ಕೃತಿಕ ಅಧ್ಯಯನ', ಪು.25
6. ಬಾ.ರಾ. ಗೋಪಾಲ್, 'ಎಪಿಗ್ರಾಪಿಯ ಕರ್ನಾಟಕ, ಸಂಪುಟ-03', ಪು.575.
7. ಅದೇ, ಪು.583.

ಅಧ್ಯಾಯ–2

ರಾಜಕೀಯ ವ್ಯವಸ್ಥೆ

ಅಧ್ಯಾಯ–2

ರಾಜಕೀಯ ವ್ಯವಸ್ಥೆ

ಗುಂಡ್ಲುಪೇಟೆ ತಾಲ್ಲೂಕಿನ ಆಡಳಿತ ನಡೆಸಿದ ರಾಜಮಹಾರಾಜರುಗಳು ಮತ್ತು ಮಹಾಪ್ರಧಾನರು ರಾಜಧರ್ಮದ ಬಗೆಗೆ ಸುಸಂಸ್ಕೃತ ಕಲ್ಪನೆಯುಳ್ಳವರಾಗಿದ್ದರು. ಈ ಭಾಗದಲ್ಲಿ ಈವರೆಗೆ ದೊರೆತಿರುವ ಸುಮಾರು 224 ಶಾಸನಗಳಲ್ಲಿ ಇವರ ರಾಜ್ಯಭಾರದ ವೈಶಿಷ್ಟತೆಗಳು ಕಂಡುಬರುತ್ತವೆ ಹಾಗೂ ಅವರ ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿರುವುದು ಶಾಸನಗಳ ಅಧ್ಯಯನದಿಂದ ತಿಳಿಯಬಹುದು.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಆಡಳಿತ ನಡೆಸಿದ ಪ್ರಮುಖ ಅರಸರುಗಳೆಂದರೆ ಇವರೆಗೆ ದೊರೆತಿರುವ ಶಾಸನಗಳ ಪ್ರಕಾರ ಗಂಗರ ವಂಶದವರೆ ಮೊದಲಿಗರು. ಈ ವಂಶದ ಪ್ರಸಿದ್ಧ ದೊರೆ ಶ್ರೀಪುರುಷನ ಬಗ್ಗೆ ಶಾಸನಗಳಲ್ಲಿ ಉಲ್ಲೇಖಿಸಿದ್ದು ಕೆಲವು ಶಾಸನಗಳಲ್ಲಿ ಈತನ ಬಿರುದು ಕಡ್ದಾಣೆ ಎಂದು ದಾಖಲೆಯಾಗಿರುತ್ತದೆ. ಇದೇ ವಂಶದ ಮತ್ತೊಬ್ಬ ಅರಸನಾದ 2ನೇ ರಾಚಮಲ್ಲನ ಆಡಳಿತದ ಬಗ್ಗೆಯು ಶಾಸನಗಳಲ್ಲಿ ದಾಖಲೆಯಿದೆ. ಕೆಲವು ಶಾಸನಗಳು ಇಮ್ಮಡಿ ರಾಚಮಲ್ಲ ಸತ್ಯವಾಕ್ಯ ಎಂದು ಸಹ ದಾಖಲಿಸಿವೆ ಹಾಗೆಯೇ ಚೋಳ ಸಾಮ್ರಾಜ್ಯದ ಒಂದನೇಯ ರಾಜರಾಜಜೋಳ ಮತ್ತು ಮೂರನೇ ಕುಲೋತ್ತುಂಗರು ಆಡಳಿತ ನಡೆಸಿ ಕರ್ನಾಟಕದ ನೀಲಗಿರಿ ಭಾಗದ ಮೇಲೆ ನಿಯಂತ್ರಣ ಹೊಂದಿದ್ದರು ಎಂದು ತಿಳಿದು ಬರುತ್ತದೆ. ಕರ್ನಾಟಕದ ವಾಸ್ತುಶಿಲ್ಪ ಶೈಲಿಗೆ ಹೊಸರೂಪ ನೀಡಿದ ಹೊಯ್ಸಳ ಸಾಮ್ರಾಜ್ಯದ ಅರಸ ವಿಜಯನರಸಿಂಹ ಹಾಗೂ ಇಮ್ಮಡಿ ನರಸಿಂಹ ವೀರಸೋಮೇಶ್ವರ ಮುಮ್ಮಡಿ ನರಸಿಂಹ ಮುಮ್ಮಡಿ ಬಲ್ಲಾಳರ ವಿಚಾರಗಳನ್ನು ಶಾಸನಗಳು ಪ್ರಸ್ತಾಪಿಸುತ್ತವೆ.

ದಕ್ಷಿಣಭಾರತ ಪ್ರಬಲ ಸಾಮ್ರಾಜ್ಯಗಳಲ್ಲಿ ಒಂದಾದ ವಿಜಯನಗರ ಸಾಮ್ರಾಜ್ಯದ ಮೊದಲ ಮನೆತನವಾದ ಸಂಗಮ ವಂಶದ ಒಂದನೇ ಬುಕ್ಕರಾಯ, ಮುಮ್ಮಡಿ ಹರಿಹರ, ಮಲ್ಲಿಕಾರ್ಜುನ ತಮ್ಮಡಿ, ವೀರನರಸಿಂಹ, ಶ್ರೀಕೃಷ್ಣದೇವರಾಯ, ಅಚ್ಚುತರಾಯ, ಸದಾಶಿವರಾಯ ಅರವೀಡು ವಂಶದ ಶ್ರೀರಂಗರಾಯ ಎರಡನೇ ವೆಂಕಟಪತಿ, ಒಂದನೆಯ ಶ್ರೀರಂಗರಾಯ, ವೀರ ವೆಂಕಟಪತಿರಾಯ ಮೊದಲಾದ ವಿಜಯನಗರ ಸಾಮ್ರಾಜ್ಯದ ಅರಸರು ಆಡಳಿತ ನಡೆಸಿದ್ದಾರೆ. ಉಮ್ಮತ್ತೂರಿನ ಪಾಳೇಗಾರರುಗಳಾದ ಕುಮಾರ ಚಿಕ್ಕಣ್ಣ ವೀರಸೋಮರಾಯ ಒಡೆಯರು, ಚಿಕ್ಕ ಮಲೆಯ ಒಡೆಯ, ವೀರಬುಕ್ಕರಾಯ ಹಾಗೆಯೇ ಮೈಸೂರು ಒಡೆಯರ ಕಾಲದ ಕಂಠೀರವ ನರಸರಾಜ ಒಡೆಯರು, ಚಿಕ್ಕದೇವರಾಜ ಒಡೆಯರು, ಎರಡನೆಯ ಕೃಷ್ಣರಾಜ ಒಡೆಯರು, ಮುಮ್ಮಡಿ ಕೃಷ್ಣರಾಜರವರುಗಳು ಆಡಳಿತ ನಡೆಸಿರುವ ಬಗ್ಗೆ ವಿವರಗಳು ಶಾಸನಗಳಲ್ಲಿ ದೊರೆಯುತ್ತವೆ.

2.1 ಗಂಗರ ಕಾಲದ ಇತಿಹಾಸ :

ಕರ್ನಾಟಕದ ರಾಜಕೀಯ ಇತಿಹಾಸವು ನಂದ ಮತ್ತು ಮೌರ್ಯರಿಂದ ಆರಂಭವಾದರೂ ತಾಲ್ಲೂಕಿನ ಇತಿಹಾಸವು ಶಾಸನಗಳ ಆಧಾರದ ಮೇಲೆ ಗಂಗರಿಂದ ಆರಂಭವಗುತ್ತದೆ. 300 ವರ್ಷಗಳ ಕಾಲ ಆಡಳಿತ ನಡೆಸಿದ ಗಂಗರು ಗುಂಡ್ಲುಪೇಟೆ ತಾಲ್ಲೂಕಿನ ಭಾಗವನ್ನು 8ನೇ ಶತಮಾನದಿಂದ 11ನೇ ಶತಮಾನದವರೆಗೆ ಆಡಳಿತ ನಡೆಸಿರುವುದನ್ನು ತಿಳಿಯಬಹುದು. ಗಂಗ ವಂಶದ 25 ಜನ ಅರಸರು ಕರ್ನಾಟಕವನ್ನು ಆಡಳಿತ ನಡೆಸಿದ್ದಾರೆ. ಈ ಭಾಗವನ್ನು ಆಳಿದ ಶ್ರೀಪುರುಷ, ಇಮ್ಮಡಿ ರಾಚಮಲ್ಲ ಅಥವಾ ಇಮ್ಮಡಿ ಎರೆಯಪ್ಪ, ಸತ್ಯವಾಕ್ಯ, ಪೆರ್ಮಾನಡಿ, ಮುಮ್ಮಡಿ ರಾಚಮಲ್ಲರ ಆಡಳಿತವನ್ನು ವಿವರಿಸುವ 11 ಶಾಸನಗಳು ತಾಲ್ಲೂಕಿನಲ್ಲಿ ದೊರೆತಿವೆ.

ಗಂಗರ ಮೂಲ ಪುರುಷ ದಿಡಗ ಅಥವಾ ಕೊಂಗಣಿವರ್ಮನು ಉತ್ತರಭಾರತದಿಂದ ಬಂದವನು. ಮೈಸೂರಿನ ಪೂರ್ವದಲ್ಲಿ ನೆಲಸಿ ಕೋಲಾರದ ಪಾಲಾರ್‌ನದಿಯ ಪೂರ್ವದ ಬಾಣರಾಜ್ಯವನ್ನು ಜಯಿಸಿ[1] ಕೋಲಾರವನ್ನು (ಕವಳಾಲ) ರಾಜಧಾನಿಯಾಗಿ ಮಾಡಿಕೊಂಡು ಆಡಳಿತ ಆರಂಭಿಸಿದ್ದರು.

ಗಂಗ ವಂಶದ ಸ್ಥಾಪಕ ಕೊಂಗಣಿವರ್ಮ (ಸು. ಕ್ರಿ.ಶ. 350–400). ಇವನ ನಂತರ ಇತಿಹಾಸ ಪ್ರಸಿದ್ಧ ದೊರೆ ಎಂದರೆ ದುರ್ವಿನಿತನೇ ಮೊದಲಿಗನು. ಜಡವಾಗಿದ್ದ ಗಂಗ ಆಡಳಿತ ಕಾಲದಲ್ಲಿ ಪರಿವರ್ತನೆಯನ್ನು ಉಂಟು ಮಾಡಿದನು. ದುರ್ವಿನೀತ ಗಂಗರಿಗೆ ಸ್ವಾತಂತ್ರ್ಯ ಅಸ್ತಿತ್ವನೀಡಿ 50 ವರ್ಷಗಳ ಕಾಲ ರಾಜ್ಯಭಾರ ಮಾಡಿದನು.[2] ಶಾಸನಗಳು ದುರ್ವಿನೀತನನ್ನು 'ಪುನ್ನಾಟದೊರೆ' ಎಂದು ಕರೆದಿವೆ.[3]

ಶಿವಮಾರ (ಸು ಕ್ರಿ.ಶ. 676–726)ನ ಮೊಮ್ಮಗನಾದ ಶ್ರೀಪುರುಷ (ಸು. ಕ್ರಿ.ಶ. 726–788)ನ ಆಡಳಿತವು ಗಂಗರಾಜ್ಯಕ್ಕೆ ಹಿಂದೆಂದೂ ಇಲ್ಲದ ಮಹತ್ವವನ್ನು ಶ್ರೇಯ ಸಮೃದ್ಧಿಯನ್ನು ನೀಡಿದ ಚಿರಸ್ಮರಣೀಯ ರಾಜ್ಯಭಾರಮಾಡಿದನು. ಇವನು ಗುಂಡ್ಲುಪೇಟೆ ಆಡಳಿತ ನಡೆಸಿರುವ ಬಗ್ಗೆ ತಗ್ಗಲೂರು ಗ್ರಾಮದ ದಾನ ಶಾಸನ ತಿಳಿಸುತ್ತದೆ. 'ಶ್ರೀಪುರುಷ ಈ ಭೂಮಂಡಲವನ್ನು ಅಳುತ್ತಿದ್ದ ಸಂದರ್ಭದಲ್ಲಿ ಮಹಾಪಾಲಕನಾದ ಅವುಕ್ಕನು ದೇಣಿಗೆ ನೀಡಿದ್ದಾನೆ ಇದಕ್ಕೆ ಸಾಕ್ಷಿಯಾಗಿ ಅಮಚ್ಚಾರ್ ತೆಲಂಬಯಾರ್ ಇರುತ್ತಾರೆ ಎಂದಿದೆ.[4] ಹಾಗೆಯೇ ಇದೇ ಶಾಸನದ ಹಿಂದಿನ ಭಾಗದಲ್ಲೂ ಶ್ರೀಪುರುಷನ ಉಲ್ಲೇಖವಿರುವುದರಿಂದ ಆತನು ಈ ಭಾಗದ ಮೇಲೆ ನಿಯಂತ್ರಣ ಹೊಂದಿದನೆಂದು ತಿಳಿಯಬಹುದು.[5]

8ನೇ ಶತಮಾನದ ಕಮರಹಳ್ಳಿ ಶಾಸನದಲ್ಲಿ ಶ್ರೀಪುರುಷನ ಕಾಲದಲ್ಲಿ ಅಕ್ಕ ಕೈಲೂರು ಅವರ ಮಗ ಮದಪ್ಪಣ್ಣ ಅಧಿಕಾರಿಯು ದೈವಿಕಾರ್ಯ ನಡೆಸಲು ಗುಣಸಾಗರ ತಮ್ಮಡಿಗೆ ಭೂದಾನ ನೀಡಿರುವ ವಿವರಗಳನ್ನು ಒಳಗೊಂಡಿದ್ದು[6] ಹಾಗೆಯೇ ಈ ಶಾಸನದ ಹಿಂಭಾಗದಲ್ಲಿ ಮೇಲಿನ ದಾನದ ವಿಷಯವನ್ನು

ಮುಂದುವರಿಸುತ್ತ ಈ ಭಾಗದ ಮೇಲೆ ಶ್ರೀಪುರುಷನ ಆಡಳಿತವನ್ನು ಪರೋಕ್ಷವಾಗಿ ಪ್ರತಿನಿಧಿಸುತ್ತದೆ.[7]

ನಳೂರು ವೀರಗಲ್ಲಿನ ತಳದಲ್ಲಿರುವ ಬರವಣಿಗೆಯನ್ನು ಆಧರಿಸಿ 8ನೇ ಶತಮಾನಕ್ಕೆ ಸೇರಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಶಾಸನವು ಶ್ರೀಪುರುಷನನ್ನು 'ಕಡ್ದಾಣೆ ಎಂಬ ಬಿರುದಿನಿಂದ ಸಂಭೋದಿಸುತ್ತದೆ. ಹಾಗೆಯೇ ಸೈನ್ಯಾಧಿಕಾರಿಯಾಗಿದ್ದ ಸಿಂಗವೇಮ್ಮರಸನು ಕೊಂಗಳ್ಳಿಯನ್ನು ಜಯಿಸಿರುವುದನ್ನು ದಾಖಲಿಸಿದೆ.[8]

ದೇವರಹಳ್ಳಿಯಲ್ಲಿ ದೊರೆತಿರುವ ಶಾಸನ 8ನೇ ಶತಮಾನದಾಗಿದ್ದು ಶ್ರೀಪುರುಷನ ಅಡಳಿತಕ್ಕೆ ಸಂಬಂಧಿಸಿದ್ದಾಗಿದೆ. 70 ಸೈನಿಕರು ಮಾಡಿದ ಸಾಧನೆಗೆ ಗ್ರಾಮವನ್ನು ದಾನ ನೀಡುವಾಗ ಮೊದಲಬಾರಿಗೆ ಗಂಗರ ವಂಶಾವಳಿಯನ್ನು ವಿವರಿಸಿದ್ದಾರೆ. ಶಾಸನದಲ್ಲಿ ಗಂಗ ಮನೆತನದ ಸ್ಥಾಪಕ ಕೊಂಗಣಿವರ್ಮ, ಮಾಧವ, ವಿಷ್ಣುಗೋಪ, ಮಾಧವ ಅವನೀತ, ದುರ್ವಿನೀತ, ಶ್ರೀವಿಕ್ರಮ ಮತ್ತು ಶಿವಮಾರ ಅರಸರುಗಳನ್ನು ಕ್ರಮವಾಗಿ ವಂಶಾವಳಿಯಂತೆ ದಾಖಲಿಸಿದ್ದರೆ ಇದು ಗಂಗರ ವಂಶಾವಳಿಯ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದೆ.[9]

ಒಂದನೆಯ ಅಥವಾ ಎರೆಗಂಗ ನೀತಿಮಾರ್ಗನ (ಕ್ರಿ.ಶ. 843–870) ಮರಣಾನಂತರ ಅಧಿಕಾರಕ್ಕೆ ಬಂದ ಅವನ ಮಗ ಇಮ್ಮಡಿ ರಾಚಮಲ್ಲ ಸತ್ಯವಾಕ್ಯ ಪೆರ್ಮಾಡಿಯನ್ನು (ಕ್ರಿ.ಶ. 870–907) ಸದ್ಗುಣ ನಿಧಿಯೆಂದೂ, ಮಾಧಾತಾದಿ ಪ್ರಾಚೀನ ರಾಜರ್ಷಿಗಳಿಗೆ ಸಮಾನನೆಂದೂ ಗಂಗಕುಲ ಪ್ರದಿಪರನೆಂದೂ ಕರೆಗೂಡಿ ರಂಗಪುರ ಶಾಸನವು ಹೇಳಿದೆ.[10] ಚಿಕ್ಕಕಾಟಿಪಾಳು ಚಂದ್ರಶೇಖರ ದೇವಾಲಯದ 9ನೇಯ ಶತಮಾನಕ್ಕೆ ಸೇರಿದ ಶಾಸನದಲ್ಲಿ ಸತ್ಯವಾಕ್ಯ ಪೆರ್ಮಾಡಿ ಮತ್ತು ಭೂತರಸನು ನೆಲೆಗುರು ಎಂಬ ಹಳ್ಳಿಯನ್ನು ದಾನ ನೀಡಿರುವ ವಿಚಾರವಿದೆ.[11] ಮತ್ತು ವೆಮ್ಮಲಾಪುರದ ಶಾಸನವೂ ಸಹ ಇಮ್ಮಡಿ ರಾಚಮಲ್ಲನನ್ನು ಪೆರ್ಮಾಡಿ ಎಂದು ಕರೆದಿದೆ.[12]

ಗಂಗರ ಕೊನೆಯ ದೊರೆಗಳಲ್ಲಿ ಪ್ರಮುಖನಾಗಿರುವ ನಾಲ್ಕನೆಯ ರಾಚಮಲ್ಲ ಪಡಗೂರಿನ ಮಹಾಲಿಂಗೇಶ್ವರ ದೇವಸ್ಥಾನದ ಕ್ರಿ.ಶ. 986ರ ಶಿಲಾಶಾಸನ ನಾಲ್ಕನೆಯ ರಾಚಮಲ್ಲನಿಗೆ ಸೇರಿದೆ ಎಂಬುದನ್ನು ಕಾಲದ ಆಧಾರದ ಮೇಲೆ ಗುರುತಿಸಿದ್ದಾರೆ.[13] ಕ್ರಿ.ಶ 1013ರ ಬೆಳವಾಡಿಯ ದಾನಶಾಸನದಲ್ಲಿ ನೀತಿ ಮಾರ್ಗ ಪೆರ್ಮಾನಡಿ (ಕ್ರಿ.ಶ. 999) ಉಲ್ಲೇಖವಿದೆ.[14] ಹೀಗೆ ಗಂಗರ ಕಾಲಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ದೊರೆತಿದ್ದು ಇವುಗಳು ಆಕಾಲದ ರಾಜಕೀಯ ವ್ಯವಸ್ಥೆಯನ್ನು ವಿವರಿಸುವುದರ ಜೊತೆಗೆ ಸಾಂಸ್ಕೃತಿಕ ವಿವರಣೆಯನ್ನು ನೀಡುತ್ತದೆ.

2.2 ಚೋಳರ ಕಾಲದ ಇತಿಹಾಸ :

ದಕ್ಷಿಣ ಭಾರತದ ಉನ್ನತಿ ಕೇವಲ ಚೋಳರ ಪ್ರಾಬಲ್ಯದಿಂದಲೇ ಬೆಳೆಯಿತು ಹಾಗೂ ಈ ಕಾಲದಲ್ಲಿ ತಮಿಳು ಸಂಸ್ಕೃತಿ ಸಿದ್ದರೂಪು ಪಡೆದಿದ್ದನ್ನು ಕಾಣಬಹುದಾಗಿದೆ. ಗಂಗರ ನಂತರ ಗಂಗವಾಡಿ ಭಾಗವು ಚೋಳರ ಅಧೀನಗೊಂಡಾಗ ಗುಂಡ್ಲುಪೇಟೆ ತಾಲ್ಲೂಕಿನ ಭಾಗವು ಸಹ ಚೋಳರ ನಿಯಂತ್ರಣಕ್ಕೊಳಪಟ್ಟಿತ್ತು. ಕರ್ನಾಟಕದ ಕೆಲವು ಭಾಗಗಳ ಮೇಲೆ 11ನೇ ಶತಮಾನದಿಂದ 12ನೇ ಶತಮಾನದವರೆಗೆ ಚೋಳರು ತಮ್ಮ ನಿಯಂತ್ರಣ ಹೊಂದಿದ್ದರು.[15] ಕರ್ನಾಟಕದ ದಕ್ಷಿಣ ಭಾಗದ ಕೆಲವು ರಾಜ್ಯಗಳು ಕ್ರಿ.ಶ. 985ರಲ್ಲಿ ಪಟ್ಟಕ್ಕೆ ಬಂದ ರಾಜರಾಜ ಚೋಳ ಹಿಡಿತ ಸಾಧಿಸಿದ್ದನ್ನು ಹಾಗೂ ಕ್ರಿ.ಶ. 1004ರ ವೇಳೆಗೆ ಕುಡುಮಲೈ (ಕೊಡಗು ಜಿಲ್ಲೆ) ನಾಡಿನ ಮೇಲೆ ದಂಡೆತ್ತಿ ಉಡುಗೈಕೋಟೆಯನ್ನು ಆಕ್ರಮಿಸಿದ ಈ ದಂಡೆಯಾತ್ರೆ ನೇತೃತ್ವವಹಿಸಿದ್ದ ರಾಜೇಂದ್ರ ಕೊಡಗಿನ ಮಾಲಂಬಿಯ ಸುತ್ತಲಿನ ಏಳು ಸಾವಿರ ಸೀಮೆಗೆ ಕೊಂಗಾಳ್ವರನ್ನು ಅಧಿಪತಿಯಾಗಿ ನೇಮಕ ಮಾಡಿದನು. ಈ ಸಮಯದಲ್ಲಿ ಗಂಗವಾಡಿ ಚೋಳರ ವಶವಾಯಿತು. ಇದರಿಂದ ರಾಜರಾಜಚೋಳ 'ಮುದಿಗೊಂಡ ಚೋಳ' ಎಂದು ಬಿರುದು ಹೊಂದಿದ್ದನು.[16]

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಚೋಳರ ಕಾಲಕ್ಕೆ ಸಂಬಂಧಿಸಿದ ಒಟ್ಟು 8 ಶಾಸನಗಳು ದೊರೆತಿವೆ ಇದರಲ್ಲಿ 5 ಶಿಲಾಶಾಸನಗಳು, 3 ತಾಮ್ರ ಶಾಸನಗಳು ಮತ್ತು ದಾನಶಾಸನಗಳಿವೆ. ಇವುಗಳಲ್ಲಿ ಎರಡು ತಮಿಳು ಶಾಸನಗಳಾಗಿವೆ. ಹಾಗೆಯೇ ತಲವನಪುರ (ತಲಕಾಡು) ನಗರವನ್ನು 'ರಾಜರಾಜಪುರ'ವೆಂದು ಕರೆದ ಬಗ್ಗೆ ಸುಮಾರು ಕ್ರಿ.ಶ. 1029ರ ಗುಂಡ್ಲುಪೇಟೆ ಶಾಸನದಲ್ಲಿ ದಾಖಲೆಯಿದೆ.

ಚಿಕ್ಕಕಾಟಿ ಗ್ರಾಮದ ಕ್ರಿ.ಶ. 1049ರ ಶಿಲಾಶಾಸನ ಚೋಳರ ಕಾಲಕ್ಕೆ ಸೇರಿದ್ದಾಗಿದೆ.[17] ಇದು ಚಂದ್ರಶೇಖರ ದೇವಾಲಯದ ಪೂಜಾಕಾರ್ಯ ನಡೆಸಲು ಚೋಳರ ಒಂದನೇ ರಾಜರಾಜಾಧಿ ರಾಜದೇವ ಹೊರಡಿಸಿರುವ ಶಾಸನವಾಗಿದೆ ಹಾಗೂ ಕಿಲಸೂರಿನ 12ನೇ ಶತಮಾನದ ಚೋಳಶಾಸನ ರಾಜೇಂದ್ರ ಚೋಳನ 33ನೇ ವರ್ಷದ ಆಡಳಿತದಲ್ಲಿ ಪ್ರಕಟವಾಗಿದ್ದು ತಮಿಳುಭಾಷೆಯ ಲಿಪಿಯಿಂದ ಕೂಡಿದೆ.[18] ಕುಡುಗುನಾಡಿನ ಗಂಗೈಕೊಂಡ ಕೊಳವಾಲ್‌ನಾಡು ವಿಭಾಗದ ಮದಿಗೊಂಡ ಚೋಳಮಂಡಲಂಗೆ ಸೇರಿದ ವಿವರವಿದೆ ಹಾಗೂ ಒಂದನೆಯ ರಾಜೇಂದ್ರ ಚೋಳನನ್ನು ಚೋಳಗಂಗದೇವ ಎಂದು ದಾಖಲಿಸಿದೆ.[19] ಬೆಳಚವಾಡಿಯ ಚೋಳರ ಕಾಲದ 10ನೇ ಶತಮಾನದ ಶಾಸನದಲ್ಲಿ 'ಸೆರೆನಾಡು' ಎಂಬ ಪದದ ಪ್ರಸ್ತಾಪವಾಗಿದೆ. ಇದು ನಾಡುಗಳನ್ನು ಪ್ರಾಂತ್ಯಗಳಾಗಿ ವಿಂಗಡಿಸಿದ ಸಂಗತಿ ತಿಳಿಸುತ್ತದೆ.[20] ಹಾಗೆಯೇ ಹಂಗಳ ಗ್ರಾಮದ ಶಾಸನ ಸಂಖ್ಯೆ 203, 204, 205, ಶಾಸನಗಳು ಚೋಳರ ಆಡಳಿತ ನಡೆಸಿದ ವಿವರಗಳನ್ನು ಹೊಂದಿವೆ.[21]

ದಕ್ಷಿಣಭಾರತದಲ್ಲಿ ಆಡಳಿತ ನಡೆಸಿರುವ ಚೋಳರು ಈ ಭಾಗದ ಮೇಲೆ ನಿಯಂತ್ರಣ ಹೊಂದಿದ್ದರು. ಇಲ್ಲಿನ ರಾಜಕೀಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆಂದು ಹೇಳಬಹುದು.

2.3 ಹೊಯ್ಸಳರ ರಾಜಕೀಯ ಇತಿಹಾಸ :

ಗಂಗವಾಡಿಯ ಚೋಳರನ್ನು ಸೋಲಿಸಿ ಹೊಯ್ಸಳರು ಅಧಿಕಾರಕ್ಕೆ ಬಂದರು ಕ್ರಿ.ಶ. 1078ರ ಒಂದು ಶಾಸನದಲ್ಲಿ 'ದ್ವಾರಾವತೀಪುರವಾರಾಧೀಶ್ವರರೆಂದು' ಅಂದರೆ ಗುಜರಾತಿನ ದ್ವಾರಕೆಯಿಂದ ಬಂದವರು ಎಂದು ಹೇಳಿಕೊಂಡಿದ್ದಾರೆ. ದ್ವಾರಸಮುದ್ರವನ್ನು ರಾಜಧಾನಿ ಮಾಡಿಕೊಂಡು 11ನೇ ಶತಮಾನದಿಂದ 14ನೇ ಶತಮಾನಗಳವರೆಗೆ ಕರ್ನಾಟಕದಲ್ಲಿ ಆಡಳಿತ ನಡೆಸಿದ್ದರು.[22] ಇವರ 300 ವರ್ಷಗಳ ಆಡಳಿತದಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಭಾಗದಲ್ಲಿ ಸುಮಾರು ಕ್ರಿ.ಶ. 1157 ರಿಂದ ಕ್ರಿ.ಶ. 1332ರವರೆಗೆ ಆಡಳಿತ ನಡೆಸಿದ್ದಾರೆ. ಈ ಭಾಗದಲ್ಲಿ ಹೊಯ್ಸಳರಿಗೆ ಸಂಬಂಧಿಸಿದ 20 ಶಾಸನಗಳು ದೊರೆತಿದ್ದು ಇವುಗಳು 12ನೇ ಶತಮಾನದಿಂದ ಇವರ ನಿಯಂತ್ರಣವನ್ನು ನಿರೂಪಿಸುತ್ತವೆ. ಇದರಲ್ಲಿ 6 ತಮಿಳು ಶಾಸನಗಳು ದೊರೆತಿವೆ. ಚೋಳರ ಪ್ರಭಾವದಿಂದ ಗುಂಡ್ಲುಪೇಟೆ ಭಾಗದಲ್ಲಿ ತಮಿಳು ಭಾಷೆ ಆಡಳಿತ ಭಾಷೆಯಾಗಿತ್ತು. ನಂತರ ಹೊಯ್ಸಳರು ಕೂಡ ತಮಿಳು ಭಾಷೆಯಲ್ಲೆ ಶಾಸನಗಳನ್ನು ಹೊರಡಿಸಿದ್ದಾರೆ.

ಹೊಯ್ಸಳರ ಕಾಲದಲ್ಲಿ ಅತ್ಯಂತ ಪ್ರಾಬಲ್ಯಕ್ಕೆ ಬಂದಿದ್ದ ವಿಷ್ಣುವರ್ಧನನ ಕಾಲದ ಬಗ್ಗೆ ಈ ತಾಲ್ಲೂಕಿನಲ್ಲಿ ಯಾವುದೇ ಶಾಸನಗಳು ದೊರೆತಿಲ್ಲ. ಆದರೆ ವಿಷ್ಣುವರ್ಧನನ ಮಗನಾದ ಒಂದನೆಯ ನರಸಿಂಹನ (ಸುಮಾರು ಕ್ರಿ.ಶ. 1142–1173) (ವಿಜಯನರಸಿಂಹ ಪ್ರತಾಪಸಿಂಹ) ಬಗ್ಗೆ ಶಾಸನಗಳು ದೊರೆತಿವೆ. ಇದರಿಂದ ಹೊಯ್ಸಳ ಕಾಲದ ಅರಸರಲ್ಲಿ ಒಂದನೇ ನರಸಿಂಹ ಮೊದಲಿಗನಾಗಿದ್ದಾನೆ. ಇವನನ್ನು ಉಲ್ಲೇಖಿಸುವ ಶಾಸನಗಳೆಂದರೆ ಗೋಪಾಲಪುರ ಗ್ರಾಮದ ವೀರಗಲ್ಲು ಕ್ರಿ.ಶ. 1157ರ ಶಾಸನ ಹೊಯ್ಸಳರ ಒಂದನೇಯ ನರಸಿಂಹನ ಕಾಲದ 'ಮಹಾಪಸಾಯಿತೆ ವಾಮಣ ಮಲ್ಲಣ್ಣ ಕೊಂಗಿಗೆ ದಾಳಿಯಿಟ್ಟ ವಿಷಯವನ್ನು ದಾಖಲಿಸುತ್ತದೆ.[23] ನಿಟ್ರ ಗ್ರಾಮದ ಶಾಸನದಲ್ಲಿ ಕ್ರಿ.ಶ. 1163ರ ಕಾಲದ ಗಂಗರ ಅರಸ ವಿಷ್ಣುವರ್ಧನನ ಮಗ ವೀರನರಸಿಂಹನ ಉಲ್ಲೇಖವಿದ್ದು[24] ಇದು ಒಂದನೇ ನರಸಿಂಹನ ಕಾಲವನ್ನು ಗುರುತಿಸುತ್ತದೆ ಹಾಗೆಯೇ ಒಂದನೇ ನರಸಿಂಹನ ಸೇನಾಧಿಪತಿ ಮಹಾಪ್ರಧಾನ ಸರ್ವಾಧಿಕಾರಿ ಮಲ್ಲಿಕಾರ್ಜುನ ದಣ್ಣಾಯಕನನು ಕೊಡುಗೆ ನೀಡಿರುವುದನ್ನು ವಿವರಿಸುತ್ತದೆ.[25] ಬೆಳಚಲವಾಡಿಯ ಕ್ರಿ.ಶ.1174ರ ರಾಮಲಿಂಗ ದೇವಸ್ಥಾನದ ಶಾಸನ ಹೊಯ್ಸಳ ಕಾಲದ ದ್ವಾರಸಮುದ್ರದ ಮಹಾಮಂಡಲೇಶ್ವರನಾದ ವೀರನರಸಿಂಹದೇವನ ಮಹಾಪ್ರಧಾನ ಸರ್ವಾಧಿಕಾರಿ ಹೆರ್ಗ್ಗಡೆ ಕಲ್ಲಿಯನು ದಾನ ನೀಡಿರುವ ವಿವರಗಳನ್ನು ತಿಳಿಸುತ್ತದೆ.[26]

ಡಾ. ಡೆರೆಟ್‌ರವರ ಪ್ರಕಾರ ಹೊಯ್ಸಳರ ವಂಶದಲ್ಲಿ ಅದ್ವಿತೀಯನಾದ ಅರಸ ವೀರಬಲ್ಲಾಳ ಅಥವಾ ಇಮ್ಮಡಿ ಬಲ್ಲಾಳನು ಸಾಮ್ರಾಜ್ಯ ವಿಸ್ತರಿಸಿದನು. ತಂದೆ ವಿಜಯನರಸಿಂಹ ಕಾಲದಲ್ಲಿ ಸಹ-ರಾಜನಾಗಿ ರಾಜ್ಯಭಾರದಲ್ಲಿ ನೆರವಾಗಿದ್ದು ಕೊನೆಗೆ ದಂಗೆಯೆದ್ದು ರಾಜ್ಯವನ್ನು ವಶಪಡಿಸಿಕೊಂಡು ಕ್ರಿ.ಶ.1173ರಲ್ಲಿ ಸಿಂಹಾಸನವೇರಿದನು.[27] ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇವನ ಆಡಳಿತವನ್ನು ಶಾಸನಗಳು ಕ್ರಿ.ಶ.1188ರ ನಂತರವಷ್ಟೇ ಉಲ್ಲೇಖಿಸುತ್ತವೆ.

ಬೆರಟಹಳ್ಳಿಗೆ ಸೇರಿದ ತಮಿಳು ಶಾಸನ ಗಾವುಂಡ ಇಮ್ಮಡಿ ಬಲ್ಲಾಳನ ಆಡಳಿತವನ್ನು ನಡೆಸಿರುವ ಬಗ್ಗೆಯು ವಿವರಿಸುತ್ತದೆ.[28] ಇದು ಇವನನ್ನು ಸ್ವತಂತ್ರ ಅರಸ ಎಂದು ಗುರುತಿಸಲು ಸಹಾಯಕವಾಗಿದೆ ಹಾಗೆಯೇ 'ಬಡಗ ಹೆದ್ದೊಲೆ ಪರ್ಯ್ಯಂಸ ಸಾಧಿಸಿ' ಎಂಬ ಮಾಹಿತಿಯನ್ನು ಈ ಶಾಸನ ಹೊಂದಿದೆ.[29] ಈ ಶಾಸನವು ದ್ವಾರಸಮುದ್ರದಿಂದ ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ ಆತನ ಅಧಿಕಾರಿ ಕಮಾರದಣ್ಣಾಯಕ ಕುಡುಗುನಾಡು 300 ಪ್ರದೇಶವನ್ನಾಳುತ್ತಿದ್ದ ಸಂಗತಿಯನ್ನು ಹೊಂದಿದೆ.[30] ಜೊತೆಗೆ ಮಹಾಪ್ರಧಾನ ಕುಮಾರ ಲಕ್ಷ್ಮಣ ದಣ್ಣಾಯಕ ಆಡಳಿತ ನಡೆಸುತ್ತಿದ್ದನು. ವೀರಬಲ್ಲಾಳನ ನಂತರ ಅವನ ಮಗ ಇಮ್ಮಡಿ ನರಸಿಂಹ ಹೊಯ್ಸಳ ಸಾಮ್ರಾಜ್ಯದ ಅಧಿಕಾರ ವಹಿಸಿಕೊಂಡನು. ಇಮ್ಮಡಿ ನರಸಿಂಹನಿಗೆ ವೀರನರಸಿಂಹ ಎಂಬ ಮತ್ತೊಂದು ಹೆಸರು ಸಹ ಇದೆ. ಹಾಗೂ ಸ್ವತಂತ್ರ್ಯ ರಾಜನಾಗಿಯೇ ರಾಜ್ಯಭಾರ ಮಾಡಿದನೆಂಬುದು ಅವನ ಬಿರುದುಗಳಿಂದ ವ್ಯಕ್ತವಾಗುವುದು. ಅವನ ಶಾಸನಗಳಲ್ಲಿ ಕಂಡುಬರುವ 'ಸಮಸ್ತಭುವನಾಶ್ರಯ' 'ಶ್ರೀಪೃಥ್ವಿವಲ್ಲಭ' 'ಮಹಾರಾಜಾಧಿರಾಜ ಪರಮೇಶ್ವರ' ಮುಂತಾದ ಬಿರುದಾವಳಿಗಳು ಅವನ ಸ್ವಾತಂತ್ರ್ಯ ಸ್ಥಿತಿಯನ್ನು ಸೂಚಿಸುತ್ತವೆ.[31]

ಕಲ್ಲಹಳ್ಳಿಯ ಕ್ರಿ.ಶ. 1221ರ ಶಾಸನ[32] ಹೊಯ್ಸಳ ಎರಡನೇ ನರಸಿಂಹನ ಆಡಳಿತವನ್ನು ಸಾಕ್ಷೀಕರಿಸುವುದರ ಜೊತೆಗೆ ಕೊಡುಗುನಾಡಿನ ಮಹಾಪ್ರಧಾನ ಶ್ರೀರಂಗ ದಣ್ಣಾಯಕನ ಆಡಳಿತವನ್ನು ತಿಳಿಸುತ್ತದೆ.[33] ಹಾಗೆಯೇ ಕೆಲಸೂರಿನ ಕ್ರಿ.ಶ. 1229ರ ವೀರನರಸಿಂಹದೇವನ ಶಾಸನ ಗೋಪಯ್ಯ ಮತ್ತು ರಂಗಣ್ಣನ ಮಹಾಪ್ರಧಾನರು ನೀಡಿರುವ ದಾನಗಳನ್ನು ವಿವರಿಸುತ್ತದೆ.[34] ಮೇಲಿನ ಎಲ್ಲಾ ಶಾಸನಗಳು ಹೊಯ್ಸಳರ ಇಮ್ಮಡಿ ನರಸಿಂಹನು ಈ ಭಾಗದಲ್ಲಿ ಆಡಳಿತ ನಡೆಸಿರುವ ವಿಷಯವನ್ನು ಬಲಪಡಿಸುತ್ತದೆ. ಎರಡನೆಯ ನರಸಿಂಹನ ನಂತರ ಸೋಮೇಶ್ವರ (ಸು. ಕ್ರಿ.ಶ. 1235-1254) ಅಧಿಕಾರಕ್ಕೆ ಬಂದು ಗುಂಡ್ಲುಪೇಟೆ ಭಾಗದ ಮೇಲೆ ನಿಯಂತ್ರಣ ಹೊಂದಿದ್ದನು ಎಂಬುದನ್ನು ಶಾಸನಗಳು ದೃಢಪಡಿಸುತ್ತವೆ. ಸೇಗೋಡಿಯ ಕ್ರಿ.ಶ. 1244ರ ಹೊಯ್ಸಳ ಶಾಸನ ವೀರ ಸೋಮೇಶ್ವರನು ಈ ಭಾಗದಲ್ಲಿ ಆಡಳಿತ ನಡೆಸಿರುವ ವಿವರ ನೀಡುತ್ತದೆ. ಈ ಶಾಸನ ತಮಿಳು ಭಾಷೆಯ ಶಾಸನವಾಗಿದೆ.[35] ಬಲ್ಲಹಳ್ಳಿಯ ಕ್ರಿ.ಶ. 1244-1245ರ ತಮಿಳು ಭಾಷೆಯ ಶಾಸನದಲ್ಲೂ ಸಹ ಮೂರನೇ ಸೋಮೇಶ್ವರನ

ಆಡಳಿತ ಕಾಲದ 'ಪೆರಿಂಯ ಪೇರ್ಗಡಿದೇವನ' ಆಡಳಿತದ ದಾಖಲೆಯಿದೆ[36] ಬಂಡೀಪುರದ ತಮಿಳು ಶಾಸನ ಕ್ರಿ.ಶ. 1249ರ ಕಾಲವಾಗಿದ್ದು ಹೊಯ್ಸಳ ಮೂರನೇ ಸೋಮೇಶ್ವರನನ್ನು ವೀರ ಸೋಮೇಶ್ವರ ಎಂದು ಕರೆದಿದೆ.[37] ಇದು ನೀಲಗಿರಿ ಬೆಟ್ಟದ ಸಾಲುಗಳ ಮೇಲೆ ಹೊಯ್ಸಳ ಅರಸರು ನಿಯಂತ್ರಣ ಹೊಂದಿದ್ದರು ಎಂಬುದನ್ನು ಮತ್ತು ಇದು ಗಡಿಭಾಗವಾಗಿದ್ದನ್ನು ಸೂಚಿಸುತ್ತದೆ. ಹಾಗೆಯೇ ಬೆರಟಹಳ್ಳಿಯ ಶಾಸನವು ಮಹಾಪ್ರಧಾನ ಸಂಕರಗೌಡ್ರು ಹೊರತಂದಿರುವುದಾಗಿದ್ದು 13ನೇ ಶತಮಾನದ್ದಾಗಿದೆ. ವೀರಸೋಮೇಶ್ವರನ ಬಗ್ಗೆ ವಿವರವಿರುವ ಈ ಶಾಸನ ಈತನನ್ನು ಶ್ರೀಪೃಥ್ವಿವಲ್ಲಭ, ಮಹಾರಾಜಾಧಿರಾಜ, ರಾಜಪರಮೇಶ್ವರ, ಸಮುಕ್ತಚುಡಾಮಣಿ, ಮಲೆಪೆರೊಳುಗಂಡ, ಮಲೆರಾಜರಾಜ, ಚೋಳರಾಜ್ಯ ಪ್ರತಿಷ್ಠಾಪನಚಾರಿ, ವೀರಸೋಮೇಶ್ವರ ಎಂದು ಸಂಭೋಧಿಸಿದೆ.[38]

ವೀರ ಸೋಮೇಶ್ವರ ಕ್ರಿ.ಶ. 1254ರಲ್ಲಿ ಮರಣ ಹೊಂದಿದ್ದಾಗ ಹೊಯ್ಸಳ ಸಾಮ್ರಾಜ್ಯದ ಮುಮ್ಮಡಿ ನರಸಿಂಹ ಮತ್ತು ರಾಮನಾಥನಿಗೆ ಹಂಚಿಕೆಯಾಯಿತು. ರಾಮನಾಥನಿಗೆ (ಸುಮಾರು ಕ್ರಿ.ಶ. 1254–1295) ಕಣ್ಣನೂರು ಭಾಗವು ಮುಮ್ಮಡಿ ನರಸಿಂಹನಿಗೆ ಕುಡುಗುನಾಡು ಮತ್ತು ತಮಿಳು ಪ್ರಾಂತ್ಯಗಳ ಅಧಿಕಾರ ಹೊಂದಿದ್ದನು.[39] ಇದಕ್ಕೆ ಸಾಕ್ಷಿಯಾಗಿ ಗುಂಡ್ಲುಪೇಟೆಯಲ್ಲಿ ಮುಮ್ಮಡಿ ನರಸಿಂಹನಿಗೆ ಸೇರಿದ ಒಂದು ಶಾಸನ ದೊರೆತಿದೆ. ಇದು ಹಂಗಳ ಗ್ರಾಮದ ವರದರಾಜಸ್ವಾಮಿ ದೇವಸ್ಥಾನದ ಉತ್ತರ ದಿಕ್ಕಿನ ಗೋಡೆಯ ಮೇಲಿದ್ದು ತಮಿಳು ಶಾಸನವಾಗಿರುವ ಇದು ಕ್ರಿ.ಶ. 1275ರ ಹೊಯ್ಸಳ ಪ್ರಸಿದ್ಧ ಅರಸ ಮೂರನೇ ವೀರನರಸಿಂಹನ ಕಾಲವನ್ನು ಸೂಚಿಸುತ್ತದೆ.[40] ಇದು ಕುಡುಗುನಾಡಿನಲ್ಲಿ ಮೂರನೇ ನರಸಿಂಹನ ದಾನವನ್ನು ವಿವರಿಸುತ್ತದೆ. ಮೂರನೇ ವೀರನರಸಿಂಹರ ನಂತರ ಅವನ ಮಗ ಮೂರನೆಯ ಬಲ್ಲಾಳನು ಸಮಗ್ರ ಹೊಯ್ಸಳ ರಾಜ್ಯಕ್ಕೆ ಅಧಿಪತಿಯಾಗಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವವರೆಗೂ ದಕ್ಷಿಣ ಕರ್ನಾಟಕ ಭಾಗದಲ್ಲಿ ತನ್ನ ಅಧಿಪತ್ಯ ಸ್ಥಾಪಿಸಿದ್ದನು. ಇವನ ಆಡಳಿತವನ್ನು ಈ ತಾಲ್ಲೂಕಿನಲ್ಲಿ ಗುರುತಿಸುವ ಶಾಸನಗಳೆಂದರೆ, ಮೊದಲನೆಯದು ಅಲತ್ತೂರು ಗ್ರಾಮದ ಕ್ರಿ.ಶ.1205ರ ಶಾಸನ. ಇದು ಹೊಯ್ಸಳರ ಮೂರನೇ ವೀರಬಲ್ಲಾಳನ ಕಾಲದ್ದಾಗಿದ್ದು ಮಹಾಪ್ರಧಾನ ಪೆರುಮಾಳದೇವ ದಣ್ಣಾಯಕನು ಪೃಥ್ವಿರಾಜ್ಯಗೆಯ್ಯುತಿದ್ದನೆಂಬ ವಿವರಗಳನ್ನು ನೀಡುತ್ತದೆ.[41]

ತ್ರಿಯಂಬಕಪುರದ ಕ್ರಿ.ಶ. 1310ರ ಶಾಸನ ಮಾಧವ ದಣ್ಣಾಯಕನ ಹೆಸರು ಪ್ರಸ್ತಾಪಿಸಿ ವೈಷ್ಣವರಿಗೆ ತೆರಕಣಾಂಬಿಯ ಅಥವಾ ಪೆರುವಲ್ಲಪುರವನ್ನು ದಾನ ಮಾಡಿರುವ ವಿಷಯವನ್ನು ಹಾಗೂ ಗೋವಿಂದದಾಸ ಮತ್ತು ಶ್ರೀರಮಗದಾಸ ಎಂಬ ಇಬ್ಬರು ಅಧಿಕಾರಿಗಳ ಹೆಸರುಗಳನ್ನು ಹೊಂದಿರುತ್ತದೆ.[42] ಇದು ಕುಡುಗುನಾಡಿನ ಮೇಲೆ ಹೊಯ್ಸಳರ ಪ್ರಭಾವವನ್ನು ಈ ಶಾಸನ ಗುರುತಿಸುತ್ತದೆ (ಚಿತ್ರ–1). ಕಣ್ಣೇಗಾಲದ ಕ್ರಿ.ಶ. 1315ರ ಶಾಸನದಲ್ಲಿ ಶ್ರೀಪೆರುವಳ ದಣ್ಣಾಯಕ ಪುತ್ರ ಮಾಧವ

ದಣ್ಣಾಯಕನ ವಿವರವಿದ್ದು[43] ಈ ಭಾಗದಲ್ಲಿ ಅವನ ಆಡಳಿತದ ನಿಯಂತ್ರಣ ಹೊಂದಿದ್ದನೆಂದು ತಿಳಿಯಬಹುದಾಗಿದೆ. ವೀರಬಲ್ಲಾಳದೇವನ ಆಡಳಿತದ ಮಹಾಪ್ರಧಾನ ಮತ್ತು ದಂಡನಾಯಕನಾದ ಮಾಧವ ದಣ್ಣಾಯಕನ ದಾಖಲೆ ಹೊಂದಿರುವ ಕ್ರಿ.ಶ. 1318ರ ಬೊಮ್ಮಲಾಪುರದ ಶಾಸನ ದೊರೆತಿದೆ.[44] ಎರೆಯೂರಿನ ಶಾಸನವು ಸಹ ವೀರಬಲ್ಲಾಳನ ಉಲ್ಲೇಖ ಹೊಂದಿದೆ.[45] ಹಾಗೆಯೇ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹೊಯ್ಸಳರ ಪ್ರಭಾವವನ್ನು ಮತ್ತು ಆಡಳಿತವನ್ನು ಹಾಗೂ ಸಾಂಸ್ಕೃತಿಕ ವಿವರಗಳನ್ನು ಹೊಂದಿರುವ ಹಲವು ಶಾಸನಗಳು ದೊರೆಯುತ್ತವೆ.

2.4 ವಿಜಯನಗರ ಕಾಲದ ಇತಿಹಾಸ :

ದೆಹಲಿಯ ಸುಲ್ತಾನರ ಸೇನೆಗಳ ದಾಳಿಯು ಕರ್ನಾಟಕ ರಾಜಮನೆತನವಾದ ಹೊಯ್ಸಳರನ್ನು ನಾಶಪಡಿಸಿದ ಮೇಲೆ ದಕ್ಷಿಣ ಭಾರತದಲ್ಲಿ ಪ್ರಬಲ ಕೇಂದ್ರಸತ್ತೆಯೊಂದೂ ಇಲ್ಲದ ನಿರ್ವಾತ ಸ್ಥಿತಿಯನ್ನು ತುಂಬಲು ವಿಜಯನಗರ ಸ್ಥಾಪನೆಯಾಯಿತು. ಹರಿಹರ ಬುಕ್ಕ ಕ್ರಿ.ಶ. 1336ರಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆಗ ಹೊಯ್ಸಳ ಸಾಮ್ರಾಜ್ಯ ದುರ್ಬಲವಾಗುತ್ತ ಸಾಗಿತ್ತು ಬಹುಶಃ ಹರಿಹರನನ್ನು ಮೂರನೇ ಬಲ್ಲಾಳನು ತನ್ನ ರಾಜ್ಯದ ಉತ್ತರ ಭಾಗಗಳ ಆಡಳಿತಗಾರನನ್ನಾಗಿ ನೇಮಿಸಿದ್ದು ಕ್ರಿ.ಶ. 1343ರಲ್ಲಿ 3ನೇ ಬಲ್ಲಾಳನು ತೀರಿಕೊಂಡಾಗ ಹರಿಹರನು ಸ್ವತಂತ್ರ್ಯನಾಗಿರಬೇಕು.[46] ದಕ್ಷಿಣ ಭಾರತದಲ್ಲಿ ಪ್ರಾಬಲ್ಯಕ್ಕೆ ಬಂದ ಹಿಂದೂ ಸಾಮ್ರಾಜ್ಯವಾದ ವಿಜಯನಗರದ ಅರಸರು ರಾಜನೀತಿ ಮತ್ತು ಸೈನಿಕ ಬಲದ ಸಾಮರ್ಥ್ಯದಿಂದ 14 ರಿಂದ 17ನೇ ಶತಮಾನದವರೆಗೆ ಪ್ರಾಬಲ್ಯವನ್ನು ಹೊಂದಿದ್ದರು. ಸು.ಕ್ರಿ.ಶ. 1372 ರಿಂದ ಕ್ರಿ.ಶ. 1665ರ ಅವಧಿಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಭಾಗದಲ್ಲಿ ವಿಜಯನಗರದ ಅರಸರು ಆಡಳಿತ ನಡೆಸಿರುವುದನ್ನು ಇಲ್ಲಿ ದೊರೆತಿರುವ 74 ಶಾಸನಗಳು ವಿವರಿಸುತ್ತವೆ.[47]

ಬೆಟ್ಟಹಳ್ಳಿಯ ಕ್ರಿ.ಶ. 1368-1369ರ ಶಾಸನ ವಿಜಯನಗರದ ಅರಸರು ಈ ಭಾಗದಲ್ಲಿ ಆಡಳಿತ ನಡೆಸಿರುವುದನ್ನು ವಿವರಿಸುವ ಮೊದಲ ಶಾಸನವಾಗಿದೆ. ಈ ಶಾಸನದಲ್ಲಿ ವಿಜಯನಗರದ ಅರಸರುಗಳಾದ ಬುಕ್ಕರಾಯ, ಚಿಕ್ಕಕಂಪಣ ಮತ್ತು ಕುಮಾರ ನಂಜಣ್ಣರು ಆಡಳಿತ ನಡೆಸಿರುವ ಬಗ್ಗೆ ದಾಖಲೆ ನೀಡುತ್ತದೆ.[48] ಗುಂಡ್ಲುಪೇಟೆ ನಗರದ ರಾಮೇಶ್ವರ ದೇವಸ್ಥಾನದ ಶಾಸನ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವೀರಬುಕ್ಕರಾಯನ ಮಗ ಚಿಕ್ಕಕಂಪಣ್ಣ ಒಡೆಯನು ಆಳುತ್ತಿದ್ದ ನಂತರ ಇವನ ಮಗ ನಂಜಣ್ಣ ಒಡೆಯ ಅಧಿಕಾರಕ್ಕೆ ಬಂದ ವಿವರ ಹೊಂದಿದೆ ಮತ್ತು ಕೊಡುಗೆ ಶಾಸನವಾಗಿರುವ ಇದು ಗುಂಡ್ಲುಪೇಟೆ ಪೂರ್ಣ ಹೆಸರಾದ 'ಪ್ರಸನ್ನ ವಿಜಯಪುರ' ಅಥವಾ 'ವಿಜಯಪುರ' ಎಂದು ಉಲ್ಲೇಖಿಸಿದೆ ಹಾಗೂ ಈ ಹೆಸರನ್ನು ಪುರಾಣಗಳಲ್ಲೂ ಕಾಣಬಹುದಾಗಿದೆ. ಒಟ್ಟಾರೆ ಈ ಶಾಸನವು ದೇವಸ್ಥಾನದ ನರ್ತಕಿಯ ಸೇವೆಗೆ ಸಂಬಂಧಿಸಿದೆ.[49] ಇದೇ ದೇವಸ್ಥಾನದ ಮತ್ತೊಂದು ಶಿಲಾಶಾಸನ

14ನೇ ಶತಮಾನಕ್ಕೆ ಸೇರಿದ್ದು "ಬುಕ್ಕಚಕ್ರೇಶ್ವರ" ನೀಡಿರುವ ಕೊಡಗೆ ಶಾಸನವಾಗಿದೆ ಇದರಿಂದ ಇವನ ಆಡಳಿತವನ್ನು ಗುರುತಿಸಬಹುದು.[50]

ಚಿಕ್ಕಕಂಪಣ್ಣ ಒಡೆಯನ ನಂತರ ಅವನ ಮಗ ನಂಜಣ್ಣಒಡೆಯನು ಗುಂಡ್ಲುಪೇಟೆ ತಾಲ್ಲೂಕಿನ ಭಾಗದಲ್ಲಿ ಆಡಳಿತ ನಡೆಸಿದ್ದರು ಎಂಬ ಬಗ್ಗೆ ಎರಡು ಶಾಸನಗಳು ವಿವರವನ್ನು ನೀಡುತ್ತವೆ. ಮೊದಲನೆಯದು ಮಡೆಹಳ್ಳಿ ಗ್ರಾಮದ ಶಿಲಾಶಾಸನ· ಕ್ರಿ.ಶ. 1374ರದಾಗಿದ್ದು ವೀರಬುಕ್ಕರಾಯನ ಮೊಮ್ಮಗ ನಂಜನ ಒಡೆಯನ ಹೆಸರಿನಲ್ಲಿ ಮಡೆಹಳ್ಳಿ ನಿರ್ಮಿಸಿರುವ ವಿಚಾರವನ್ನು ನೀಡುತ್ತದೆ.[51] ಇಮ್ಮಡಿ ಹರಿಹರನು ಒಂದನೆಯ ಬುಕ್ಕನ ಮಗನಾಗಿದ್ದು ಕ್ರಿ.ಶ. 1378ರಲ್ಲಿ ಪಟ್ಟಕ್ಕೆ ಬಂದನು. ಇತ್ತೀಚೆಗಿನ ಸಂಶೋಧನೆಯಲ್ಲಿ ವಿಜಯನಗರದ ನಿಜವಾದ ಸಂಸ್ಥಾಪಕ ಇಮ್ಮಡಿ ಹರಿಹರ ಎಂದು ಹೇಳಲಾಗಿದೆ. ಇವರು ಗುಂಡ್ಲುಪೇಟೆ ತಾಲ್ಲೂಕಿನ ಆಡಳಿತ ನಡೆಸಿರುವ ಬಗ್ಗೆ ಹಾಗೂ ಗೋಪಾಲಪುರ ಗ್ರಾಮದ ಶಿಲಾಶಾಸನವು ಕ್ರಿ.ಶ. 1380 ಚಿಕ್ಕ ಕಂಪಣ್ಣ ಒಡೆಯನ ಮಗ ನಂಜಣ್ಣ ಒಡೆಯನು ಹೊರ ತಂದಿರುವ ಶಾಸನ.[52] ಇವರುಗಳ ದಾನವನ್ನು ದಾಖಲಿಸುತ್ತದೆ. ತ್ರಿಯಂಬಕಪುರದ ಮೊದಲನೆಯ ತಾಮ್ರಶಾಸನ ವಿಜಯನಗರದ ವಂಶಾವಳಿಯನ್ನು ವಿವರಿಸುವ ಸು. ಕ್ರಿ.ಶ. 1417ರ ಶಾಸನವಾಗಿದೆ. ವಿಜಯನಗರದ ಸಂಗಮ ಮತ್ತು ಅವನ ಮಕ್ಕಳಾದ ಬುಕ್ಕ ಹಾಗೂ ಹರಿಹರ ಮತ್ತು ಅವನ ಮಕ್ಕಳಾದ ಬುಕ್ಕಣ್ಣ, ಬುಕ್ಕಣ್ಣನ ಮಗ ಎರಡನೇ ಹರಿಹರನು ದೇವಸ್ಥಾನಕ್ಕೆ ಭೂದಾನ ನೀಡಿದ ವಿಷಯವನ್ನು ತಿಳಿಸುತ್ತದೆ.[53]

ಸೋಮಹಳ್ಳಿ ಗ್ರಾಮದ ತಾಮ್ರಶಾಸನ ಕ್ರಿ.ಶ. 1422ರಲ್ಲಿ ವಿಜಯನಗರ ಮಹಾಮಂಡಲೇಶ್ವರ ಮೂರನೇ ಶ್ರೀ ವೀರಹರಿಹರರಾಯ ಆಡಳಿತ ನಡೆಸಿರುವ ಬಗ್ಗೆ ಮಾಹಿತಿ ನೀಡುತ್ತದೆ. ವೀರಹರಿಹರ ಶ್ರೀಮನ್ಮಹಾರಾಜಾಧಿರಾಜ, ಪರಮೇಶ್ವರ, ವೀರಪ್ರತಾಪದೇವ ಎಂಬ ಬಿರುದುಗಳನ್ನು ಧರಿಸುವುದನ್ನು ತಿಳಿಯಬಹುದು.[54] ತ್ರಿಯಂಬಕೇಶ್ವರನ ಕ್ರಿ.ಶ. 1448–1485 ನಡುವಿನ ತಾಮ್ರಶಾಸನವು ವಿಜಯನಗರದ ಅರಸ ಇಮ್ಮಡಿ ದೇವರಾಯನ ರಾಣಿಪೊನ್ನಾಲದೇವಿಗೆ ಜನಿಸಿದ ಮಲ್ಲಿಕಾರ್ಜುನನು ತಂದೆಯ ಮರಣಾನಂತರ ವಿಜಯನಗರದ ಪಟ್ಟಕ್ಕೇರಿದನೆಂದು ತಿಳಿಸುತ್ತದೆ. ಇವನಿಗೆ ಇಮ್ಮಡಿ ವಿಜಯರಾಯ, ಇಮ್ಮಡಿ ಪ್ರೌಢದೇವ ಮಹಾರಾಯ, ದೇವರಾಯ, ಮಹಾರಾಯ ಎಂಬ ಹೆಸರುಗಳಿದ್ದವು. ಚರಿತ್ರೆ ನಿರೂಪಣ ದೃಷ್ಟಿಯಿಂದ ಅವನನ್ನು ದೇವರಾಯ ಎಂದು ಕರೆಯಬಹುದಾಗಿದೆ. ತಂದೆಯಂತೆ ಅವನಿಗೂ 'ಗಜಬೇಂಟೆಕಾರ' ಎಂಬ ಬಿರುದಿದ್ದಿತು. ಶ್ರೀ ಗಿರಿಯ (ಶ್ರೀ ಶೈಲ) ಮಲ್ಲಿಕಾರ್ಜುನ ದೇವರ ದರ್ಶನವಾದ ಮೇಲೆ ನಾಮಕರಣ ಮಾಡಿರುವ ಬಗ್ಗೆ ಈ ಶಾಸನದಿಂದ ತಿಳಿದು ಬರುತ್ತದೆ ಮತ್ತು ಪೊನ್ನಾಲದೇವಿ ಮಲ್ಲಿಕಾರ್ಜುನ ತಾಯಿ ಎಂಬ ವಿಷಯವು ತಿಳಿಯುತ್ತದೆ. ಈಕೆಯ ಹೆಸರು ಬೆರೆಡೆ ಎಲ್ಲಿಯೂ ಕಂಡುಬರುವುದಿಲ್ಲವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[55] ಹೊಣಕನಹಳ್ಳಿಯ ಶಿಲಾ ಶಾಸನ ಕ್ರಿ.ಶ.

1506ನೇ ಸಾಲಿಗೆ ಸೇರಿದ್ದು ವಿಜಯನಗರ ಸಾಮ್ರಾಜ್ಯದ ಮೂರನೆಯ ಮನೆತನದವನಾದ ತುಳುವ ನರಸಿಂಹನ ಆಡಳಿತವನ್ನು ವಿವರಿಸುತ್ತದೆ.[56] ಹಾಗೆಯೇ ನರಸಿಂಹ ಮಹಾರಾಯನು (ದೇಪಂಣ ಒಡೆಯ ಕುಮಾರ ವೀರ ಚಿಕ್ಕ ಒಡೆಯ) 'ಪೆನುಗೊಂಡ ಚಕ್ರೇಶ್ವರ' ಎಂಬ ಬಿರುದನ್ನು ಹೊಂದಿರುವುದು ತಿಳಿಸುತ್ತದೆ.[57] ಹಾಗೆಯೇ ಈ ತಾಲ್ಲೂಕಿನ ಗುಂಡ್ಲುಪೇಟೆ ಶಾಸನ ಸಂಖ್ಯೆ 96, 19 ರಲ್ಲೂ ಸಹ ಈತನ ಬಗ್ಗೆ ದಾಖಲೆ ಇದೆ.

ವೀರ ನರಸಿಂಹನ (ಕ್ರಿ.ಶ. 1503-09) ನಂತರ ವಿಜಯನಗರ ಸಾಮ್ರಾಜ್ಯದ ಆಡಳಿತ ನಡೆಸಿದ ತುಳುವ ಮನೆತನದ ಶ್ರೇಷ್ಠ ದೊರೆ ಕೃಷ್ಣದೇವರಾಯ (ಕ್ರಿ.ಶ. 1509-1529) ಈತನ ಆಡಳಿತ ಕಾಲದ ಬಗ್ಗೆ ಸುಮಾರು 8ಕ್ಕೂ ಹೆಚ್ಚು ಶಾಸನಗಳ ಬಿರುದುಗಳನ್ನು ದಾಖಲಿಸುತ್ತವೆ. ಹಾಗೂ ಕ್ರಿ.ಶ. 1513ರ ತ್ರಿಯಂಬಕೇಶ್ವರ ದೇವಸ್ಥಾನದ ಶಿಲಾಶಾಸನ ಕೊಡುಗೆ ಶಾಸನವಾಗಿದೆ.[58] ಈ ಶಾಸನ ಹಾಗೂ ಅದೇ ವರ್ಷದ ಗೋಪಾಲಪುರ ಗ್ರಾಮದ ಶಾಸನಗಳು ಸಹ ಕೃಷ್ಣದೇವರಾಯ ಮಹಾರಾಯ ಎಂಬ ಉಲ್ಲೇಖಗಳನ್ನು ಹೊಂದಿವೆ[59] (ಚಿತ್ರ-02).

ಗುಂಡ್ಲುಪೇಟೆಯ ಕ್ರಿ.ಶ. 1517ರ ಸಂಸ್ಕೃತ ಭಾಷೆ ಹಾಗೂ ನಾಗರ ಲಿಪಿಯಲ್ಲಿರುವ ಕೊಡುಗೆ ಶಾಸನ ವಿಜಯನಗರ ಸಾಮ್ರಾಜ್ಯದ ವಿಸ್ತಾರವನ್ನು ತಿಳಿಸುತ್ತದೆ. ಜೊತೆಗೆ ಕೃಷ್ಣದೇವರಾಯನು ತೆರಕಣಾಂಬಿ ಮಹಾರಾಜ್ಯದಲ್ಲಿನ ಮಾದಲವಾಡಿ ಎಂಬ ಗ್ರಾಮವನ್ನು 'ಕೃಷ್ಣಸಾಗರ' ಎಂದು ಪ್ರತಿನಾಮಧೇಯನಾಗಿಸಿದ ದಾಖಲೆಯಿದೆ.[60] ತೆರಕಣಾಂಬಿಯ ಕ್ರಿ.ಶ. 1521ರ ಶಾಸನ[61] ಮತ್ತು ತ್ರಿಯಂಬಕಪುರದ ಕ್ರಿ.ಶ. 1521ರ ಶಾಸನಗಳು ವಿಜಯನಗರದ ರಾಜಕೃಷ್ಣದೇವರಾಯ ಎಂಬ ಉಲ್ಲೇಖ ಹೊಂದಿವೆ[62] (ಚಿತ್ರ 03). ಹಾಗೂ ಇದೇ ಊರಿನ ತ್ರಿಯಂಬಕೇಶ್ವರ ದೇವಾಲಯದ ಅರ್ಚಕರ ವಶದಲ್ಲಿರುವ ನಾಲ್ಕನೆಯ ತಾಮ್ರಶಾಸನ ಕ್ರಿ.ಶ. 1521ರ ಕಾಲದ್ದಾಗಿದ್ದು ನಾಗರಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿದೆ. ಇದು ತ್ರಿಯಂಬಕರಪುರಕ್ಕೆ ವಿಜಯನಗರದ ಅರಸ ಕೃಷ್ಣದೇವರಾಯ ದಾನ ನೀಡಿರುವ ವಿವರಗಳನ್ನು ಒಳಗೊಂಡಿದೆ.[63] ಕೋಡಿಹಳ್ಳಿ ಶಾಸನ ಮಾರಿಗುಡಿಗೆ (ಕ್ರಿ.ಶ.1521) ಕೃಷ್ಣದೇವರಾಯ ದಾನ ನೀಡಿರುವ ವಿವರಗಳನ್ನು ಒದಗಿಸುತ್ತದೆ.[64]

ಕೃಷ್ಣದೇವರಾಯನ ನಂತರ ವಿಜಯನಗರದ ಆಡಳಿತ ನಡೆಸಿದ ಅಚ್ಚುತರಾಯನ (ಕ್ರಿ.ಶ. 1529-42) ಶಾಸನಗಳು ತಾಲ್ಲೂಕಿನಲ್ಲಿ ದೊರೆತಿವೆ. ಇವು ಆತನ ಆಡಳಿತವನ್ನು ಈ ಭಾಗದಲ್ಲಿ ಗುರುತಿಸಲು ಸಹಾಯವಾಗುತ್ತವೆ. ಗೋಪಾಲಪುರದ ಶಾಸನ ವಿಜಯನಗರ ತುಳುವ ವಂಶದ ಮಹಾರಾಜಾಧಿರಾಜ ಅಚ್ಚುತರಾಯ ವೀರಪ್ಪ ಒಡೆಯ ಎಂದು ಸಂಭೋಧಿಸಿದ್ದರೆ[65] ಕಗ್ಗಳ ಗ್ರಾಮದ ಕ್ರಿ.ಶ. 1480ರ ಶಿಲಾಶಾಸನ 'ರಾಜಾಧಿರಾಜ, ರಾಜಪರಮೇಶ್ವರ, ಅಚ್ಚುತರಾಯ, ಮಹಾರಾಯ' ಎಂಬ ಬಿರುದುಗಳನ್ನು ದಾಖಲಿಸುತ್ತದೆ.[66]

ಅಚ್ಚುತರಾಯನ ನಂತರದ ಪ್ರಬಲ ಅರಸ ಸದಾಶಿವರಾಯನು ಕ್ರಿ.ಶ.1543 ರಿಂದ ಕ್ರಿ.ಶ. 1571ರವರೆಗೆ ಆಡಳಿತ ನಡೆಸಿದ್ದನ್ನು ಇವನ ಆರಂಭದ 8 ವರ್ಷಗಳು ನಾಮಮಾತ್ರ ಆಡಳಿತವಾಗಿದ್ದು ರಾಮರಾಯ (ಕ್ರಿ.ಶ. 1542-1565) ಸಂಪೂರ್ಣ ಆಡಳಿತ ನಿಯಂತ್ರಿಸಿದ್ದನು. ಇವನ ಕಾಲದ ಪ್ರಮುಖ ಶಾಸನಗಳೆಂದರೆ ಕ್ರಿ.ಶ. 1546ರ ಮಸಹಳ್ಳಿ ಶಾಸನ ಸದಾಶಿವರಾಯ ಮಹಾರಾಜ ಒಡೆಯ ಎಂದು ದಾಖಲಿಸಿದೆ[67] ಹಾಗೆಯೇ ಬೆಳಚಲವಾಡಿ ಕ್ರಿ.ಶ. 1549ರ ಶಾಸನ[68] ಮತ್ತು ಕೋಟೆಗೆರೆಯ ಕ್ರಿ.ಶ. 1548ರ ಶಾಸನಗಳು ಸದಾಶಿವರಾಯ ಮತ್ತು ಗೋವಿಂದರಾಜ ಒಡೆಯರ ಹೆಸರುಗಳನ್ನು ದಾಖಲಿಸುತ್ತವೆ.[69] ಹಳ್ಳದಪುರದ ಕ್ರಿ.ಶ. 1550-51ರ ಶಿಲಾಶಾಸನ[70] ಸೇರಿದಂತೆ ಶಾಸನ ಸಂಖ್ಯೆ 181, 93, 06, 27, 216, 84ನೇ ಶಾಸನಗಳಿಂದ ಸದಾಶಿವರಾಯನ ವಿವರಗಳನ್ನು ತಿಳಿಯಬಹುದಾಗಿದೆ.

ವಿಜಯನಗರ ಸಾಮ್ರಾಜ್ಯ ಮತ್ತೊಬ್ಬ ಪ್ರಮುಖ ಅರಸ ಶ್ರೀರಂಗರಾಯನ ಆಡಳಿತವನ್ನು ಗುಂಡ್ಲುಪೇಟೆಯಲ್ಲಿ ಗುರುತಿಸುವ ಸೋಮಹಳ್ಳಿಯ ಶಾಸನ ಕ್ರಿ.ಶ. 1576ಕ್ಕೆ ಸೇರಿದ್ದು ಮಹಾಮಂಡಲೇಶ್ವರ ರಾಮರಾಯ ಮತ್ತು ದಳವಾಯಿ ವೆಂಕಟಪ್ಪನಾಯಕ ನೀಡಿರುವ ಕೊಡುಗೆ ಶಾಸನವಾಗಿದೆ. ಇದರಲ್ಲಿ ಶ್ರೀರಂಗರಾಯನ ಹೆಸರನ್ನು ಉಲ್ಲೇಖಿಸಲಾಗಿದೆ.[71] ತೆರಕಣಾಂಬಿಯ ಕ್ರಿ.ಶ. 1610ರ ಶಾಸನದಿಂದ ವಿಜಯನಗರ ಸಾಮ್ರಾಜ್ಯದ ವೆಂಕಟಪತಿ ದೇವಮಹಾರಾಯ ಪುತ್ತನಪುರ ಗ್ರಾಮವನ್ನು ದಾನವಗಿ ನೀಡಿರುವ ವಿವರಗಳು ದೊರೆಯುತ್ತವೆ.[72] ದೇಶಿಪುರ ಗ್ರಾಮದ ಶಾಸನ ಕ್ರಿ.ಶ. 1665ರ ವೀರವೆಂಕಟಪತಿರಾಯನ ಆಡಳಿತ ವಿವರಿಸುತ್ತದೆ. ವೀರಪ್ರತಾಪ, ರಾಜಧಿರಾಜ, ವೀರ ವೆಂಕಟಪತಿರಾಯ, ರಾಜಪರಮೇಶ್ವರ, ಎಂಬ ಬಿರುದುಗಳನ್ನು ವಿವರಿಸುತ್ತದೆ.[73] ಹಾಗೆಯೇ ಪುತ್ತನಪುರದ ಶಿಲಾಶಾಸನವು ವೀರವೆಂಕಟಪತಿರಾಯನು ಆಡಳಿತ ನಡೆಸುತ್ತಿದ್ದು ಮಹಾಮಂಡಲೇಶ್ವರನಾಗಿ ನರಸಿಂಹ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ವಿವರಿಸಿದೆ.[74] ವಿಜಯನಗರದ ಕೊನೆಯ ಅರಸನಾದ ಮೂರನೆಯ ರಂಗರಾಯನ ಆಡಳಿತವನ್ನು ಹಂಗಳದ ಶಿಲಾಶಾಸನ ದಾಖಲಿಸಿರುವುದು ವಿಶೇಷವಾಗಿದೆ.[75]

2.5 ಮೈಸೂರು ಒಡೆಯರ ಇತಿಹಾಸ :

14ನೇ ಶತಮಾನದಲ್ಲಿ ಸ್ಥಾಪನೆಯಾದ ಮೈಸೂರು ಒಡೆಯರು ವಿಜಯನಗರ ಸಾಮ್ರಾಜ್ಯದ ಪ್ರಭಾವ ಕಡಿಮೆಯಾಗುತ್ತಿದ್ದ ಸಂದರ್ಭದಲ್ಲಿ ಅವರ ಸಾಮಂತರಾಗಿದ್ದರು. ನಂತರ ತಮ್ಮದೆಯಾದ ಸ್ವತಂತ್ರ್ಯ ಸಾಮ್ರಾಜ್ಯ ಕಟ್ಟಿದರು. ಮೈಸೂರು, ಉಮ್ಮತ್ತೂರು, ತೆರಕಣಾಂಬಿ ಭಾಗಗಳಲ್ಲಿ ನಿಯಂತ್ರಣ ಸಾಧಿಸಿ ವಿಜಯನಗರದ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋದವರಲ್ಲಿ ಪ್ರಮುಖರಾಗಿದ್ದಾರೆ.

ಮೈಸೂರು ಒಡೆಯರು ತಮ್ಮ ಆಡಳಿತ ಅವಧಿಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಭಾಗದ ಆಡಳಿತವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಕಂಠೀರವ ನರಸರಾಜ ಒಡೆಯರು, ಚಿಕ್ಕದೇವರಾಯ ಒಡೆಯರು, ಎರಡನೇ ಕೃಷ್ಣದೇವ

ರಾಜಒಡೆಯರು, ಮುಮ್ಮಡಿ ಕೃಷ್ಣರಾಜ ಒಡೆಯರು ಸೇರಿದಂತೆ ಹಲವು ಒಡೆಯರುಗಳು ಪ್ರತ್ಯಕ್ಷವಾಗಿ ಅಥವಾ ಸಾಮಂತರ ಮೂಲಕ ಈ ಭಾಗದ ಮೇಲೆ ನಿಯಂತ್ರಣ ಹೊಂದಿದ್ದರು.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮೈಸೂರಿನ ಬಗ್ಗೆ ವಿವರ ಹೊಂದಿರುವ ಶಾಸನಗಳೆಂದರೆ ತ್ರಿಯಂಬಕಪುರದ ಕ್ರಿ.ಶ.1654ರ ಶಿಲಾಶಾಸನ ಬೊಮ್ಮರಸ ಎಂಬ ಅಧಿಕಾರಿಯನ್ನು ಉಲ್ಲೇಖಿಸುತ್ತಾ ಬೆಟ್ಟದ ಚಾಮರಾಜ ಒಡೆಯರ ಮಗ ಕಂಠೀರವ ನರಸರಾಜ ಒಡೆಯರು ದೇವಾಲಯಕ್ಕೆ ದಾನ ನೀಡಿರುವ ವಿಚಾರವನ್ನು ವಿವರಿಸುತ್ತದೆ.[76] ಹಾಗೆಯೇ ಬಂಡೀಪುರದ 17ನೇ ಶತಮಾನದ ಶಾಸನದ ಪ್ರಕಾರ ಚಿಕ್ಕದೇವರಾಜ ಒಡೆಯರು ಬಂಡೀಪುರ ಅರಣ್ಯಭಾಗದ ಮೇಲೆ ನಿಯಂತ್ರಣ ಹೊಂದಿದ್ದು ಪ್ರಜೆಗಳ ರಕ್ಷಣೆ ದೃಷ್ಟಿಯಿಂದ ಬೇಟೆಯಾಡುತ್ತಿದ್ದರು ಎಂದು ಅಭಿಪ್ರಾಯ ಪಡಬಹುದಾಗಿದೆ.[77] ಸಂಪಿಗೆಪುರದ 17ನೇ ಶತಮಾನದ ಶಾಸನ[78] ಮತ್ತು ಬೆರಂಬಾಡಿಯ 17ನೇ ಶತಮಾನದ ಶಾಸನದಲ್ಲೂ ಸಹ ಚಿಕ್ಕದೇವರಾಯ ಒಡೆಯ ಹೆಸರು ಉಲ್ಲೇಖವಿದೆ.[79] ಮಾದಪಟ್ಟಣದ ಕ್ರಿ.ಶ. 1751ರ ಶಾಸನದಲ್ಲಿ ಕೃಷ್ಣರಾಜ ಒಡೆಯರ ಉಲ್ಲೇಖವಿದೆ.[80] ಜೊತೆಗೆ ತೆರಕಣಾಂಬಿಯ 19ನೇ ಶತಮಾನದ ಶಾಸನದಲ್ಲಿ ಮೈಸೂರು ಒಡೆಯರಾದ ಕೃಷ್ಣರಾಜ ಒಡೆಯರು ತೆರಕಣಾಂಬಿಯ ವರದರಾಮಸ್ವಾಮಿ ದೇವಸ್ಥಾನದ ಅಮ್ಮನವರ ಉತ್ಸವಮೂರ್ತಿಯನ್ನು ದಾನಮಾಡಿ ಉತ್ಸವದಲ್ಲಿ ಬಳಸುವಂತೆ ಆಜ್ಞೆಮಾಡಿರುವ ವಿವರಗಳಿವೆ.[81] ವಿಜಯನಾರಾಯಣಸ್ವಾಮಿ ದೇವಸ್ಥಾನದ ಪರವಾಸುದೇವಂ ಭಿನ್ನವಾಗಿರುವ ಲೋಹದ ವಿಗ್ರಹದ ಪೀಠದ 17ನೇ ಶತಮಾನದ ಶ್ರೀ ದೊಡ್ಡದೇವರಾಜವರದ ಒಡೆಯ ಎಂದಿದೆ. ಈ ಶಾಸನದಿಂದ ದೇವರಾಜರ ಪುತ್ರ ಚಿಕ್ಕದೇವರಾಜ ಒಡೆಯರೆ ಎಂದು ತಿಳಿಯಬಹುದಾಗಿದೆ.[82]

ಮುಮ್ಮಡಿ ಕೃಷ್ಣರಾಜ ಒಡೆಯರ ಕಿಲಸೂರಿನ ಕ್ರಿ.ಶ.1829ರ ಶಾಸನ ಜೈನಬಸದಿಗೆ ಮೂರ್ತಿಗಳನ್ನು ಕೊಡುಗೆ ನೀಡಿದ್ದ ವಿವರವನ್ನು[83] ಮತ್ತು ಹೂಕಂದ ಗ್ರಾಮದ ಕ್ರಿ.ಶ.1668ರ ಶಾಸನ ದೇವರಾಜಯ್ಯನ ವಿವರಗಳನ್ನು ಒಳಗೊಂಡಿವೆ.[84]

ಹೀಗೆ ಗುಂಡ್ಲುಪೇಟೆ ತಾಲ್ಲೂಕಿನ ಆಡಳಿತವನ್ನು ಮೈಸೂರು ಒಡೆಯರು ನಡೆಸಿದ್ದರೆಂದು ಶಾಸನಗಳು ನಿಖರವಾದ ಆಧಾರಗಳನ್ನು ಒದಗಿಸುತ್ತವೆ.

2.6 ಪಾಳೆಯ ಪಟ್ಟುಗಳು :


ಅ) ಉಮ್ಮತ್ತೂರು ಪಾಳೇಗಾರರು

ವಿಜಯನಗರ ರಾಜರ ಕಾಲದಲ್ಲಿ ಉಮ್ಮತ್ತೂರು ಪಾಳೇಗಾರರು ಗುಂಡ್ಲುಪೇಟೆ ತಾಲ್ಲೂಕಿನ ಭಾಗದಲ್ಲಿ ಮಹತ್ವ ಪಡೆದುಕೊಂಡರು. ಇವರ ಬಗ್ಗೆ ದಾಖಲೆಯಿರುವ ಸು. 20ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. 15ನೇ ಶತಮಾನದಿಂದ 16ನೇ ಶತಮಾನದವರೆಗೆ.[85] ಆಡಳಿತ ನಡೆಸಿದ ಈ ಸಂಸ್ಥಾನದ ಸ್ಥಾಪಕ ವೀರ

ಸೋಮರಾಯ ಒಡೆಯ[86] ತನ್ನ ಗುರುಗಳಾದ ರುದ್ರೇಶಒಡೆಯರ ಹೆಸರಿನಲ್ಲಿ ಹೊರಡಿಸಿರುವ ತಾಮ್ರಶಾಸನವು ಮಹಾಮಂಡಲೇಶ್ವರ ದೇವರಾಜ ಒಡೆಯನು ಸೋಮರಾಯ ಒಡೆಯನ ಮಗ ಎಂದು ಶಿವಪಾದ ಶಾಸನ ಉಲ್ಲೇಖಿಸುತ್ತದೆ.[87] ಸೋಮಹಳ್ಳಿ ಕ್ರಿ.ಶ.1482ರ ಚಿಕ್ಕಣಾಪುರ ಶಿಲಾಶಾಸನದಲ್ಲಿ ಮಹಾಮಂಡಲೇಶ್ವರ ವೀರನಂಜರಾಯ ಒಡೆಯರುಗಳ ಉಲ್ಲೇಖವಿದೆ.[88]

ಕ್ರಿ.ಶ. 1458ರ ಶೆಟ್ಟಿಹಳ್ಳಿಯ ಶಾಸನ ವೀರನಂಜರಾಯನ ಜೊತೆ ಅವನ ಸಹೋದರ ದೇವನ ಒಡೆಯನ ಹೆಸರು ಉಲ್ಲೇಖವಿರುವುದರಿಂದ ಮಹತ್ವ ಪಡೆದುಕೊಂಡಿದೆ.[89] ಹಾಗೆಯೇ ತೆರಕಣಾಂಬಿಯ ಶಾಸನ ಸಂಖ್ಯೆ 135ರ ಜೊತೆಗೆ[90] ಗುಂಡ್ಲುಪೇಟೆ ಶಾಸನ ಸಂಖ್ಯೆ 114, 115, 135, 168, 169ರ ದಾನ ಶಾಸನಗಳು ಗುಂಡ್ಲುಪೇಟೆ ಭಾಗದಲ್ಲಿ ವೀರನಂಜರಾಯನ ಆಡಳಿತವನ್ನು ನಡೆಸಿರುವ ಬಗ್ಗೆ ಉಲ್ಲೇಖ ಹೊಂದಿವೆ. ರಾಘವಾಪುರದ ಕ್ರಿ.ಶ. 1507ರ ಶಾಸನ[91] ಚಿಕ್ಕರಾಯ ಒಡೆಯರನ್ನು ಹಿರಿಕಾಟಿ ಗ್ರಾಮಕ್ಕೆ ಸೇರಿದ ಕ್ರಿ.ಶ. 1533ರ ಶಾಸನ ಚಿಕ್ಕಮಲಯ ಒಡೆಯ[92], ಹಸಗೂಲಿಯ ಶಾಸನ ವೀರದೇವರಾಜ ಒಡೆಯನ[93] ಬಗ್ಗೆ ಒಡ್ಡಗೆರೆಯ ಶಿಲಾಶಾಸನ ವೀರ ದೇವರಾಜವೊಡೆಯನ ಅಡಳಿತದ ಉಲ್ಲೇಖಗಳನ್ನು[94] ದಾಖಲಿಸುತ್ತವೆ. ವೀರರಾಜ ಒಡೆಯರ ಆಡಳಿತವನ್ನು ಉಲ್ಲೇಖಿಸುವ ತೆರಕಣಾಂಬಿಯ ದಾನಶಾಸನ[95] ಸೇರಿದಂತೆ ಉಮ್ಮತ್ತೂರಿನ ಪಾಳೇಗಾರರು ಕುಡುಗುನಾಡಿನ ಮೇಲೆ ತಮ್ಮ ಅಧಿಕಾರವನ್ನು ಹೊಂದಿರುವುದನ್ನು ಶಾಸನಗಳು ದೃಢಪಡಿಸುತ್ತವೆ.

ಉಮ್ಮತ್ತೂರಿನ ಪಾಳೇಗಾರರ ವಂಶಾವಳಿಯನ್ನು ಸ್ಥೂಲವಾಗಿ ಹೀಗೆ ಗುರುತಿಸಬಹುದು.



ಆ) ತೆರಕಣಾಂಬಿ ಪಾಳೇಗಾರರು

ಪ್ರಾಚೀನ ಇತಿಹಾಸ ಪರಂಪರೆಯನ್ನು ಹೊಂದಿರುವ ತೆರಕಣಾಂಬಿ ಹೊಯ್ಸಳ ಹಾಗೂ ವಿಜಯನಗರದ ಅರಸರ ಕಾಲದಲ್ಲಿ ಪ್ರಾಬಲ್ಯ ಮೆರೆದ ಊರು. ಹೊಯ್ಸಳರ ಕಾಲದಲ್ಲಿ ಕುಡುಗುನಾಡು ಮತ್ತು ಹದಿನಾಲ್ಕು ನಾಡಿನ ರಾಜಧಾನಿಯಾಗಿತ್ತು. ನಂತರ ವಿಜಯನಗರದ ಹರಿಹರನ ಕಾಲದಲ್ಲಿ ವಿಸ್ತಾರವಾಗಿ ಬೆಳೆಯಿತು.[96] ತೆರಕಣಾಂಬಿಗೆ ತ್ರಿಕಂಬಪುರ, ತೆರಕಣಾಂಬಿ, ತೆರಕಣಾಂಬೆ ಎಂದು ಕೆರೆಯಲಾಗುತ್ತಿದೆ. ತಮಿಳುನಾಡು ಹದಿನಾಡು ದಕ್ಷಿಣ ಕರ್ನಾಟಕ ಗಡಿ ಕೇರಳ ಇರುವ ಸ್ಥಳ ಕುಡುಗಲ್ಲೂರು. ಮೂರು ಗಡಿಕಲ್ಲುಗಳಿದ್ದ ಪ್ರದೇಶವೇ ತ್ರಿಕಂಬಪುರ ಇದೇ ಮುಂದೆ ತೆರಕಣಾಂಬಿಯಾಯಿತೆಂದು ಹೇಳಲಾಗಿದೆ.[97]

ಗುಂಡ್ಲುಪೇಟೆಯ ಕ್ರಿ.ಶ. 1196ರ ಶಿಲಾಶಾಸನದ ಪ್ರಕಾರ ತೆರಕಣಾಂಬಿಯಲ್ಲಿ 300 ಪ್ರಭುಗಾವುಂಡರು ಆಡಳಿತ ನಡೆಸುತ್ತಿದ್ದರು[98] ಹಾಗೂ ಹೊಯ್ಸಳ ಸಾಮ್ರಾಜ್ಯದ ದಕ್ಷಿಣಭಾಗವಾದ ಮೈಸೂರು ಸೀಮೆಯನ್ನು (ಆಗ್ನೇಯ, ದಕ್ಷಿಣ ಮತ್ತು ನೈರುತ್ಯಗಳನ್ನು) ಕೇಂದ್ರವಾಗಿರಿಸಿಕೊಂಡು ಕುಮಾರ ಲಕ್ಷಣ ದೇವ ದಣ್ಣಾಯಕನು ಆಡಳಿತ ನಡೆಸಿದ ಅಂಶಗಳನ್ನು ದಾಖಲಿಸುತ್ತದೆ. ಕಲ್ಲಹಳ್ಳಿಯ ಶಾಸನ ಕುಡುಗುನಾಡು ಮಹಾಪ್ರಧಾನ ಶ್ರೀರಂಗದಣ್ಣಾಯಕ ಮತ್ತು ಶಂಕರ ಗಾವುಂಡರಸನ ಆಡಳಿತವನ್ನು ಉಲ್ಲೇಖಿಸುತ್ತದೆ[99] ಹಾಗೆಯೇ ನಿಟ್ರೆಯ ಕ್ರಿ.ಶ. 1162–63ರ ಕಾಲದ ಶಾಸನದಲ್ಲಿ ವೀರನರಸಿಂಹ ಮಹಾದೇವ ಹೊಯ್ಸಳ ರಾಜನ ಹೆಸರಿದೆ.[100] ಬೆಳಚಲವಾಡಿಯ ಕ್ರಿ.ಶ. 1171ರ ಶಾಸನದಲ್ಲಿ "ಶ್ರೀ ಮನುಮಹಾಮಣ್ಣಳೇಶ್ವರ ಶ್ರೀ ನರಸಿಂಹ ದೇವರು ದ್ವಾರಸಮುದ್ರ ಅರಸ ಹಾಗೂ ಬೆಳಚಲವಾಡಿ ಭಾಗದಲ್ಲಿ ಹೆಗ್ಗಡೆ ಕಲ್ಲಯ್ಯನ ಆಡಳಿತದ ಬಗ್ಗೆ ದಾಖಲೆಯಿದೆ."[101] ತ್ರಿಯಂಬಕಪುರ ಶಾಸನ ಕ್ರಿ.ಶ. 1310ಕ್ಕೆ ಸೇರಿದ್ದು ಕುಡುಗುನಾಡಿನ ಮಾಧವ ದಣ್ಣಾಯಕನ ತನ್ನ ತಂದೆಯ ಹೆಸರು ಪೆರುಮಾಳ ದಣ್ಣಾಯಕನ ಹೆಸರಿನಲ್ಲಿ ಪೆರಿಮಾಲಪುರ ಎಂಬ ಗ್ರಾಮ ಸ್ಥಾಪನೆ ಮಾಡಿರುವ ವಿವರ ತಿಳಿಸುತ್ತದೆ.[102] ಕಣ್ಣಾಗಾಲದ ಶಾಸನವು ತೆರಕಣಾಂಬಿಯನ್ನು ಆಡಳಿತ ನಡೆಸುತ್ತಿದ್ದ ಮಾಧವ ದಣ್ಣಾಯಕನು ಹೊರಡಿಸಿದ ಕ್ರಿ.ಶ. 1315ರ ಶಾಸನವಾಗಿದೆ ಹೊಯ್ಸಳ ಮೂರನೇ ವೀರ ಬಲ್ಲಾಳನ ಶಾಸನ ಮಾಧವ ದಣ್ಣಾಯಕನು ಗೋಪಾಲಸ್ವಾಮಿ ದೇವರನ್ನು ಪ್ರತಿಷ್ಠಾಪನೆ ಮಾಡಿಸಿ ದೇವಾಲಯ ರಚಿಸಿರುವುದನ್ನು ವಿವರಿಸುತ್ತದೆ.[103] (ಚಿತ್ರ–04) ಅಲ್ಲದೆ ಹೊಯ್ಸಳರ ಕಾಲದ ಅರಸರು ತೆರಕಣಾಂಬಿಯ ಮೇಲೆ ನಿಯಂತ್ರಣ ಹೊಂದಿದ್ದದನ್ನು ತಿಳಿಯಲು ಸಹಾಯಕವಾಗಿದೆ.[104] ರಾಘವಾಪುರ ಗ್ರಾಮದ ಶಿಲಾಶಾಸನ ಹೊಯ್ಸಳ ಅರಸ ಮೂರನೇ ವೀರಬಲ್ಲಾಳನ ಹೆಸರು ಹೊಂದಿದ್ದು ಮಾಧವ ದಣ್ಣಾಯಕನ ಮಗ ಭರತಜೀಯ ದಣ್ಣಾಯಕನು ಆಡಳಿತ ನಡೆಸಿರುವುದನ್ನು ತಿಳಿಸುತ್ತದೆ.[105] ಹಾಗೆಯೇ ಇದೇ ಊರಿನ ಕ್ರಿ.ಶ. 1320ರ ಶಾಸನ ಮಾಧವ ದಣ್ಣಾಯಕನ ಮತ್ತೊಬ್ಬ ಮಗ ಕೇತೆಯ ದಣ್ಣಾಯಕನು ರಾಘವದೇವರ

ಹೆಸರಿನಲ್ಲಿ ಅಗ್ರಹಾರ ನಿರ್ಮಾಣಮಾಡಿದ ವಿವರವನ್ನು ಒದಗಿಸುತ್ತದೆ.[106] ಹೆಗ್ಗವಾಡಿಯ ಕ್ರಿ.ಶ. 1327ರ ಶಾಸನ ಕೇತಯ ದಣ್ಣಾಯಕನನ್ನು 'ಪೃಥ್ವಿರಾಜ್ಯಂಗೆಯುತ್ತಿದ್ದ' ಎಂಬ ವಿವರಹೊಂದಿದೆ[107] ಕಂದಗಾಲದ ಕ್ರಿ.ಶ. 1334ರ ಶಾಸನ[108] ಮತ್ತು ಗುಂಡ್ಲುಪೇಟೆ ಶಾಸನ ಸಂಖ್ಯೆ 155[109] ರಲ್ಲಿ ನಾಡಿನ ರಾಜಧಾನಿ ತೆರಕಣಾಂಬಿಯನ್ನು ಹೊಯ್ಸಳರು ತಮ್ಮ ನಿಯಂತ್ರಣದಲ್ಲಿ ಹೊಂದಿದ್ದರೆಂದು ತಿಳಿಸುತ್ತವೆ. ಬಲ್ಲಹಳ್ಳಿ ಗ್ರಾಮದ ಶಿಲಾಶಾಸನ ಕ್ರಿ.ಶ. 1338ರಲ್ಲಿ ಪ್ರಕಟಗೊಂಡಿದ್ದು ಕೇತೆಯ ದಣ್ಣಾಯಕನು ತನ್ನ ಮಗನಿಗೆ ನಾಮಕರಣ ಮಾಡಿದ್ದಕ್ಕಾಗಿ, ಕೋಲುಯಗಣದ ನಂಬಿಯರು (ಅರ್ಚಕರು) ದಾನ ನೀಡಿದ ದಾಖಲೆಯನ್ನು ತಿಳಿಸುತ್ತದೆ.[110] ಹಾಗೆಯೇ ರಾಘವಪುರ ಗ್ರಾಮದ ಕ್ರಿ.ಶ. 1320ರ ಮೂರನೇ ವೀರಬಲ್ಲಾಳನ (ಅರುಣ ಸಮುದ್ರ) ಪದಿನಾಲ್ಕು ನಾಡಿನ ರಾಜಧಾನಿ ತೆರಕಣಾಂಬಿಯಿಂದ ಆಳ್ವಿಕೆ ನಡೆಸುತ್ತಿದ್ದ ಬಗ್ಗೆ ವಿವರಿಸುತ್ತಾ ಮಾಧವನಾಯಕನ ಮಗ ಕೇತೆಯ ದಣ್ಣಾಯಕನ ಹೆಸರಿನ ಉಲ್ಲೇಖ ಹೊಂದಿದೆ. ತೆರಕಣಾಂಬಿ ಪಾಳೇಗಾರರ ವಂಶಾವಳಿಯನ್ನು ಸ್ಥೂಲವಾಗಿ ಹೀಗೆ ಗುರುತಿಸಬಹುದು.

ಪೆರುಮಾಳದೇವನ ವಂಶಾವಳಿ

↓

ವಿಷ್ಣುದೇವನ ಹೆಂಡತಿ ಮಂಚಾಂಬಿಕೆ

ಬಸವಿಯಕ್ಕ | ಪೆರುಮಾಳದೇವ ದಣ್ಣಾಯಕ | ಭೀಮದೇವ ದಣ್ಣಾಯಕ

↓

ಪೆರುಮಾಳದೇವ ದಣ್ಣಾಯಕ
(ಮಹಾಪ್ರಧಾನ)

↓

ಮಾಧವ ದಣ್ಣಾಯಕ

↓

ಮಂಚೆಯ ದಣ್ಣಾಯಕ

↓

ಕೇತೆಯ ದಣ್ಣಾಯಕ

↓

ಭರತಜಿಯ ದಣ್ಣಾಯಕ

ಅಡಿಟಿಪ್ಪಣಿಗಳು :

1. ಎಂ.ವಿ. ಕೃಷ್ಣರಾವ್ ಮತ್ತು ಕೇಶವಭಟ್ಟ, 'ಕರ್ನಾಟಕ ಇತಿಹಾಸ ದರ್ಶನ', ಪು.38.
2. ಡಾ. ಸೂರ್ಯನಾಥ ಯು. ಕಾಮತ್, 'ಕರ್ನಾಟಕ ಸಂಕ್ಷಿಪ್ತ ಇತಿಹಾಸ', ಪು.35.
3. ಡಾ. ಸೂರ್ಯನಾಥ ಯು. ಕಾಮತ್, 'ಇತಿಹಾಸ–1', ಪು.123.
4. ಬಾ.ರಾ. ಗೋಪಾಲ್, 'ಎಪಿಗ್ರಾಫಿಯ ಕರ್ನಾಟಕ ಸಂಪುಟ–03', ಪು.579.
5. ಅದೇ, ಪು.579.
6. ಅದೇ, ಪು.588.
7. ಅದೇ, ಪು.588.
8. ಅದೇ, ಪು.595.
9. ಅದೇ, ಪು.639.
10. ಎಂ.ವಿ. ಕೃಷ್ಣರಾವ್ ಮತ್ತು ಕೇಶವಭಟ್ಟ, ಪು.55.
11. ಬಾ.ರಾ. ಗೋಪಾಲ್, ಪು.583.
12. ಅದೇ, ಪು.631.
13. ಅದೇ, ಪು.597.
14. ಅದೇ, ಪು.581.
15. ಕನ್ನಡ ಅಧ್ಯಯನ ಸಂಸ್ಥೆ, ಕನ್ನಡ ವಿಷಯ ವಿಶ್ವಕೋಶ, ಪು.624.
16. ಅದೇ, ಪು.625.
17. ಎಪಿಗ್ರಾಫಿಯ ಕರ್ನಾಟಕ ಸಂಪುಟ–03, ಪು.583.
18. ಅದೇ, ಪು.600.
19. ಅದೇ.
20. ಅದೇ, ಪು.582.
21. ಅದೇ, ಪು.638.
22. ಡಾ.ಸೂರ್ಯನಾಥ್ ಕಾಮತ್, ಪು.111.
23. ಎಪಿಗ್ರಾಫಿಯ ಕರ್ನಾಟಕ ಸಂಪುಟ–03, ಪು.641.
24. ಅದೇ, ಪು.587.
25. ಅದೇ, ಪು.580.

26. ಅದೇ, ಪು.604.

27. ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ, ಪು.116.

28. ಎಪಿಗ್ರಾಫಿಯ ಕರ್ನಾಟಕ ಸಂಪುಟ–03, ಪು.602.

29. ಅದೇ, ಪು.564.

30. ಡಾ. ಪಳನಿಸ್ವಾಮಿ, 'ಗುಂಡ್ಲುಪೇಟೆ ತಾಲ್ಲೂಕಿನ ಒಂದು ಸಾಂಸ್ಕೃತಿಕ ಅಧ್ಯಯನ', ಪು.36.

31. ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟ, ಪು.267.

32. ಬಾ.ರಾ. ಗೋಪಾಲ್, ಪು.595.

33. ಅದೇ, ಪು.599.

34. ಅದೇ, ಪು.596.

35. ಅದೇ, ಪು.588.

36. ಅದೇ, ಪು.589

37. ಅದೇ, ಪು.635.

38. ಅದೇ, ಪು.601.

39. ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ, ಪು.272.

40. ಬಾ.ರಾ. ಗೋಪಾಲ್, ಪು.637.

41. ಅದೇ, ಪು.525.

42. ಅದೇ, ಪು.623.

43. ಅದೇ, ಪು.643.

44. ಅದೇ, ಪು.630.

45. ಅದೇ.

46. ಡಾ. ಸೂರ್ಯನಾಥ್ ಕಾಮತ್, ಪು.149.

47. ಡಾ. ಪಳನಿಸ್ವಾಮಿ, ಪು.80.

48. ಬಾ.ರಾ. ಗೋಪಾಲ್, ಪು.609.

49. ಅದೇ, ಪು.567.

50. ಅದೇ, ಪು.567.

51. ಅದೇ, ಪು.569.

52. ಅದೇ, ಪು.640.

53. ಅದೇ, ಪು.618.

54. ಅದೇ, ಪು.591.

55. ಅದೇ, ಪು.615.

56. ಜಿ.ಜಿ.ಮಂಜುನಾಥನ್, 'ವನಶ್ರೀ', ಪು.82.

57. ಬಾ.ರಾ. ಗೋಪಾಲ್, ಪು.572.

58. ಡಾ. ಡಿ.ವಿ. 'ಪರಮಶಿವಮೂರ್ತಿ, ಕೃಷ್ಣದೇವರಾಯನ ಶಾಸನಗಳು', ಪು.100.

59. ಅದೇ, ಪು.64.

60. ಅದೇ, ಪು.211.

61. ಅದೇ, ಪು.273.

62. ಅದೇ, ಪು.293.

63. ಬಾ.ರಾ. ಗೋಪಾಲ್, ಪು.624.

64. ಡಾ. ಡಿ.ವಿ. ಪರಮಶಿವಮೂರ್ತಿ, ಕೃಷ್ಣದೇವರಾಯನ ಶಾಸನಗಳು, ಪು.299.

65. ಎಪಿಗ್ರಾಪಿಯ ಕರ್ನಾಟಕ ಸಂಪುಟ–03, ಪು.608.

66. ಅದೇ, ಪು.570.

67. ಅದೇ, ಪು.580

68. ಅದೇ, ಪು.581.

69. ಅದೇ, ಪು.594.

70. ಅದೇ.

71. ಅದೇ, ಪು.590.

72. ಅದೇ, ಪು.642

73. ಅದೇ, ಪು.625.

74. ಎಪಿಗ್ರಾಪಿಯ ಕರ್ನಾಟಕ ಸಂಪುಟ–03, ಪು.625.

75. ಅದೇ, ಪು.637.

76. ಅದೇ, ಪು.614.

77. ಅದೇ, ಪು.635.

78. ಅದೇ, ಪು.596.

79. ಅದೇ, ಪು.643.

80. ಅದೇ, ಪು.592.

81. ಅದೇ, ಪು.605.

82. ಅದೇ, ಪು.565.

83. ಅದೇ, ಪು.599.

84. ಅದೇ, ಪು.574.

85. ಅದೇ, ಪು.571.

86. ಅದೇ, ಪು.622.

87. ಅದೇ, ಪು.631.

88. ಅದೇ, ಪು.590.

89. ಅದೇ, ಪು.593.

90. ಅದೇ, ಪು.632.

91. ಅದೇ, ಪು.606.

92. ಅದೇ, ಪು.576.

93. ಅದೇ, ಪು.583.

94. ಅದೇ, ಪು.573.

95. ಅದೇ, ಪು.633.

96. ಸ್ಕಂದಗಿರಿ ಪು.42.

97. ಡಾ. ಪಳನಿಸ್ವಾಮಿ, ಪು.ಪು.53.

98. ಎಪಿಗ್ರಾಫಿಯ ಕರ್ನಾಟಕ ಸಂಪುಟ–03, ಪು.564.

99. ಅದೇ, ಪು.595.

100. ಅದೇ, ಪು.587.

101. ಅದೇ, ಪು.580.

102. ಅದೇ, ಪು.623.

103. ಅದೇ, ಪು.643.

104. ಅದೇ, ಪು.630.

105. ಅದೇ, ಪು.676.

106. ಅದೇ, ಪು.576.

107. ಅದೇ, ಪು.632.

108. ಅದೇ, ಪು.624

109. ಅದೇ.

110. ಅದೇ, ಪು.589.

ಅಧ್ಯಾಯ–3

ಸಾಮಾಜಿಕ ಮತ್ತು ಆರ್ಥಿಕ ಜೀವನ

ಅಧ್ಯಾಯ–3

ಸಾಮಾಜಿಕ ಮತ್ತು ಆರ್ಥಿಕ ಜೀವನ

3.1 ಸಾಮಾಜಿಕ ಜೀವನ :

ಸಾಮಾಜಿಕ ಜೀವನವೆಂದರೆ ಸಮಾಜದ ಸಮಷ್ಠಿಪ್ರಜ್ಞೆ ಎಂದು ಅರ್ಥ. ಅದರ ಅಂಗಭಾಗವಾದ ವ್ಯಕ್ತಿಯ ದೃಷ್ಠಿಯನ್ನು ಶಾಸನಗಳಲ್ಲಿ ಗುರುತಿಸಬಹುದು, ಹಾಗೆಯೇ ಸಮಾಜಜೀವಿ ಎಂಬುದು ವಿದಿತ ವಿಚಾರ. ಸಮಾಜವನ್ನು ಹೊರತುಪಡಿಸಿ ಆತ ಇರಲಾರ ತನ್ನ ಬದುಕನ್ನು ಈ ಸಮಾಜದ ಒಂದು ಚೌಕಟ್ಟಿನಲ್ಲಿರಿಸಿ ವ್ಯವಹರಿಸಿಕೊಳ್ಳುತ್ತಾನೆ. ಸಮಾಜದಲ್ಲಿ ಜೀವಿಸುವ ಜನರ ನಡಾವಳಿಗಳನ್ನು ಅವರ ಆಚರಣೆ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳನ್ನು ಶಾಸನಗಳಿಂದ ತಿಳಿಯಬಹುದು.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದೊರೆತಿರುವ ದಾನ ಶಾಸನಗಳಲ್ಲಿರುವ ಪ್ರಮುಖ ಸಾಮಾಜಿಕ ಅಂಶಗಳೆಂದರೆ ಕ್ರಿ.ಶ.1320ರ ರಾಘವಪುರದ ಹೊಯ್ಸಳ ಶಾಸನ ಮೂರನೆಯ ವೀರಬಲ್ಲಾಳನ ಮಹಾಪ್ರಧಾನ ಮಾಧವ ದಣ್ಣಾಯಕನ ಮಗನಾದ ಕೇತೆಯ ದಣ್ಣಾಯಕನು ಕುಡುಗುನಾಡಿನ ಗೊಮ್ಮಟಹಳ್ಳಿ ಮತ್ತು ಕಾಚಗಾವುಂಡನು ಮಾದೆಯಹಳ್ಳಿ ಎಂಬ ಎರಡು ಗ್ರಾಮಗಳನ್ನು ಸ್ವೀಕರಿಸಿ, ಅರಮನೆಯ ಶ್ರೀಕರಣದ ರಾಘವದೇವನ ಮಗ ನಾರಣದೇವನಿಗೆ ತನ್ನ ತಂದೆಯ ಹೆಸರಿನಲ್ಲಿ ಅಗ್ರಹಾರವಾಗಿ ಪರಿವರ್ತಿಸಿ, ನಾನಾ ಗೋತ್ರದ ಮೂವತ್ತು ಜನ ಬ್ರಾಹ್ಮಣರಿಗೆ ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ. ಇದರಿಂದ ಸಮಾಜದಲ್ಲಿ ಬ್ರಾಹ್ಮಣ ಸಮುದಾಯದ ಉನ್ನತಿಗೆ ಅಗ್ರಾಹಾರ ನೀಡಿ ಅವರನ್ನು ಗೌರವಿಸುವ ಪದ್ಧತಿ ಜಾರಿಯಲ್ಲಿತ್ತು[1] ಎಂಬುದು ತಿಳಿಯುತ್ತದೆ. ಗಂಗರ ಯುವರಾಜ ದರ್ವಿನೀತ ಎರೆಯಪ್ಪನು ಕೊಸರುಪಳ್ಳಿಯನ್ನು ಮುತ್ತಿದಾಗ ಉಪಗೋಳಕ್ಕೆ ಸೇರಿದ ಅವನ ಯೋಧರು ಶೌರ್ಯದಿಂದ ಹೋರಾಡಿ ಶತ್ರುರಾಜನನ್ನು ದಮನ ಮಾಡಿದ್ದರಿಂದ ಅವರ ಪರಾಕ್ರಮವನ್ನು ಮೆಚ್ಚಿದ ಅರಸ ಪಾಣಿಸೂರೆಂಬ ಗ್ರಾಮವನ್ನು ದಾನವಾಗಿ ಬಿಟ್ಟ ವಿಚಾರವನ್ನು ಹೊಂದಿದೆ. ಇದು ಸೈನಿಕರಿಗೆ ನೀಡಿರುವ ಗೌರವವಾಗಿದೆ.[2] ಹಾಗೆಯೇ ಬೆಳಚವಾಡಿ ಗ್ರಾಮದ ಶಾಸನ ಪೆರ್ಮಾನಡಿ ಕಾಲಕ್ಕೆ ಸೇರಿದ್ದು ಶಾಸನ ಉಲ್ಲೇಖಿಸಿರುವಂತೆ ಮೇಲಾಕೋಡೆಯ ಮಾರಯ್ಯ ಎಂಬಾತನಿಗೆ ಬೆಡವರ ಎರೆಯಾಗಾವುಂಡ ಹಾಗು ಪರೆಯದ ಕಾರುವೆತ್ತಿ ಚೇಗಾವುಂಡನು ನಾರಣಗಾಲ ಎಂಬ ಹಳ್ಳಿಯನ್ನು ದಾನ ನೀಡಿದನು.[3]

ಹೊಯ್ಸಳ ಸೋಮೇಶ್ವರ ಕಾಲಕ್ಕೆ ಸೇರಿದ ಬಂಡೀಪುರ ತಮಿಳು ಶಾಸನವು 500 ಪೋನ್ನುಗಳನ್ನು ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ.[4] ಇದೊಂದು

ವೀರಗಲ್ಲಾಗಿದೆ. ಕುಡುಗುನಾಡಿನಲ್ಲಿ ಧರ್ಮಚಿತ್ತನ್ ಎಂಬ ಗಾವುಂಡ ಬಾವಿಯನ್ನು ನಿರ್ಮಿಸಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದನ್ನು, ಒಂದು ಹೂ ತೋಟ ಮತ್ತು ವಿಶ್ರಾಂತಿ ಉದ್ಯಾನವನ ನಿರ್ಮಿಸಿದ ವಿಚಾರಗಳನ್ನು ದಾಖಲಿಸಿದೆ. ಇದು ಸಮಾಜದ ಮೇಲೆ ಪಾಳೇಗಾರರುಗಳಿಗೆ ಇರುವ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.

3.2 ವೀರಗಲ್ಲುಗಳು :

ಆಂಗ್ಲಭಾಷೆಯ "Hero Stone" ಎಂಬ ಪದಕ್ಕೆ ಕನ್ನಡದಲ್ಲಿ ಸಮಾನಾರ್ಥಕವಾಗಿ 'ವೀರಗಲ್ಲು' ಎಂಬ ಪದವನ್ನು ಬಳಸುವುದು ರೂಢಿಯಲ್ಲಿದೆ. ಇಲ್ಲಿ ವೀರ ಮತ್ತು ಕಲ್ಲು ಎಂಬ ಎರಡು ಪದಗಳು ಬಳಕೆಯಲ್ಲಿವೆ. ವೀರ ಇದು ಗುಣವಾಚಕವಾಗಿದ್ದು ವ್ಯಕ್ತಿಯ ವಿಶಿಷ್ಟ ಸಾಧನೆ, ಶೌರ್ಯ, ಸಾಹಸ ಮುಂತಾದ ಗುಣಗಳನ್ನು ಸೂಚಿಸುತ್ತದೆ. ಅರಸನಿಗಾಗಿ ಸಾಮ್ರಾಜ್ಯದ ರಕ್ಷಣೆಗಾಗಿ, ಇಲ್ಲವೆ ಸ್ತ್ರೀಯರ ರಕ್ಷಣೆಗಾಗಿ, ಊರಿನ ಹಿತಕ್ಕಾಗಿ, ವೈರಿಗಳ ವಿರುದ್ದ ಹೋರಾಡಿ ಮರಣ ಹೊಂದಿದ ವೀರನ ಸ್ಮರಣೆಗಾಗಿ ನೆಟ್ಟ ಶಿಲ್ಪ ಶಿಲಾ ಫಲಕಗಳೇ ವೀರಗಲ್ಲುಗಳು. ಲಿಪಿ ಸಹಿತ ಶಿಲ್ಪಕಲಾ ಫಲಕಗಳನ್ನೂ ಸಹ ವೀರಗಲ್ಲುಗಳೆಂದು ಕರೆಯಲಾಗುತ್ತದೆ. ಈ ಕಲ್ಲುಗಳನ್ನು ಹೂ ಧೂಪ ದೀಪಗಳಿಂದ ಪೂಜಿಸುವ ಪದ್ಧತಿಯನ್ನು ಕಾಣಬಹುದು. ಈ ವೀರಗಲ್ಲುಗಳನ್ನು ವೀರನಿಗೆ ಸ್ವರ್ಗ ಪ್ರಾಪ್ತಿಯಾಗಲಿ ಎಂಬ ಕಾರಣಕ್ಕೂ ಸಹ ನೆಡಿಸುತ್ತಿದ್ದರು. ಕೆಲವು ಸಮಯಗಳಲ್ಲಿ ಸತ್ತ ವೀರನ ಪತ್ನಿ ಸತಿಸಹಗಮನ ಪದ್ಧತಿ ಅನುಸರಿಸದೇ ಮಕ್ಕಳಿಗಾಗಿ ಬದುಕಿ ವೀರಗಲ್ಲು ನಿರ್ಮಿಸುತ್ತಿದ್ದಳು. ಈ ತರಹದ ವೀರಗಲ್ಲುಗಳನ್ನು ಕಾಣಬಹುದಾಗಿದೆ.[5] ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸ್ಮರಣಾರ್ಥವಾಗಿ ನಿಲ್ಲಿಸುವ ವೀರಗಲ್ಲುಗಳನ್ನು "ತುರುಗೋಳ್, ಪೆಬ್ಬುಯ್ಯಲ್, 'ಎರವೆಸ' 'ನೆಂಟರೆಡರ', ಊರರುವು" ಎಂಬ ಹಲವು ಪ್ರಸಂಗಳಿಗೆ ಸಂಬಂಧಪಟ್ಟ ವೀರಗಲ್ಲುಗಳು ದೊರೆಯುತ್ತವಾದರು ರಾಜ ಕಾರ್ಯಗಳಾಗಿ ಹೊರಡಿಸಿದವುಗಳನ್ನು ವೀರಗಲ್ಲುಗಳು ಎನ್ನುವರು.[6]

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಒಟ್ಟು 18 ವೀರಗಲ್ಲುಗಳು ದೊರೆತಿದ್ದು ಅವುಗಳಲ್ಲಿ ಗಂಗರ 2, ಹೊಯ್ಸಳರ 3 ವೀರಗಲ್ಲುಗಳನ್ನು ಗಣತಿಸಲಾಗಿದೆ. ವೀರಗಲ್ಲುಗಳ ನಿರ್ಮಾಣದ ಉದ್ದೇಶ ವೀರನಿಗೆ ಗೌರವ ತೋರಿಸುವುದಾಗಿದೆ ಹಾಗೂ ಹೀಗೆ ತೋರಿಸಿದ ಗೌರವನ್ನು ಎಲ್ಲರಿಗೂ ತಿಳಿಯುವಂತೆ ಊರಿನ ಬಾಗಿಲಲ್ಲಿ ಮತ್ತು ಜನ ಸಂಚರಿಸುವ ಮಾರ್ಗಗಳು, ದೇವಾಲಯಗಳು ಹಾಗೂ ಊರಿನ ಪ್ರಮುಖ ಸ್ಥಳಗಳಲ್ಲಿ ಹಾಕಲಾಗುತ್ತಿತ್ತು.

3.3 ಎರವೆಸ :

'ಎರವೆಸ' ಎಂದರೆ ಒಡೆಯನ ಅಪ್ಪಣೆ ಎಂದರ್ಥ. ಆತನ ಉಪ್ಪಿನ ಋಣಕ್ಕಾಗಿ ಹೋರಾಡಿ ಯುದ್ದರಂಗದಲ್ಲಿ ಮಡಿದವನಿಗಾಗಿ ನೆಡಿಸುವ ವೀರಗಲ್ಲು ಇದಾಗಿದ್ದು,

ತಾಲ್ಲೂಕಿನ ಪ್ರಮುಖವಾಗಿ ನಳೂರಿನ ವೀರಗಲ್ಲು ಗಂಗರಸನಾದ ಶ್ರೀಪುರುಷ ಸಿಜ್ಞಾನವೆ(ಮ್ಮ)ರಸ ಕದಾವಿಯ ಸತ್ತ ವಿಷಯವನ್ನು ತಿಳಿಸುವ[7] ಮತ್ತು ದೇವರಹಳ್ಳಿಯ ಶಾಸನ ಗಂಗರ ದುರ್ವಿನೀತ ಎರೆಯಪ್ಪನು ಕೊಸರುಪುಳ್ಳಿಯನ್ನು ಮುತ್ತಿದಾಗ 70 ಜನ ಸೈನಿಕರು ಉಪಗೋಳದಲ್ಲಿ ಹೋರಾಡಿ ಜಯಿಸಿದ ಬಗ್ಗೆ ವಿವರಿಸುತ್ತದೆ (ಚಿತ್ರ–5). ಈ ಯುದ್ದದಲ್ಲಿ ಮರಣ ಹೊಂದಿದ ವೀರನಿಗೆ ಸ್ವರ್ಗ ಪ್ರಾಪ್ತಿಯಾಗಬೇಕೆಂದು ವೀರಗಲ್ಲು ನಿರ್ಮಿಸಿದನು.[8] ಕ್ರಿ.ಶ. 1230ರ ಶಾಸನ ಸೋಮೇಶ್ವರ ದೇವನ ಆಡಳಿತಕ್ಕೆ ಸೇರಿದ ತಮಿಳು ಶಾಸನ ಧನಂಜಯ್ ಎಂಬಾತ ಮಡಿದ ಕಾರಣ ವೀರಗಲ್ಲು ನಿಲ್ಲಿಸಿರುವ ಕುರಿತು ಪ್ರಸ್ತಾಪಿಸುತ್ತದೆ.[9] ಹೊಯ್ಸಳರ ವೀರನರಸಿಂಹ ಕುಡುಗುನಾಡಿನ ಮಹಾಪನಾಯಯ್ತ ವಾಮಣಮಲ್ಲನು ಇಂಗಳವಾಡಿಯ ಮೇಲೆ ಆಕ್ರಮಣ ಮಾಡಿದಾಗ ಕರಣಮಾಟಿಗ ಎಂಬುವನು ಮಡಿದ ವಿಚಾರವನ್ನು ತಿಳಿಸುವ ವೀರಗಲ್ಲು ಇದಾಗಿರುತ್ತದೆ.[10] ಕೆಲಸೂರು ಗ್ರಾಮದ ಚಾಮಣ್ಣ ಎಂಬುವನು ಕಾಳಗದಲ್ಲಿ ಮಡಿದ ಸಂಗತಿಯನ್ನು ಪ್ರಸ್ತಾಪಿಸುತ್ತದೆ.[11] 9ನೇ ಶತಮಾನದ ಶಾಸನ ಕರಿಯ ಶೆಟ್ಟಿಯ ಮಗನಾದ ತಿಮ್ಮಣ್ಣನು ಮತ್ತು ಒಪ್ಪಶೆಟ್ಟಯ ಮಗನಾದ ತಿಪ್ಪಣನು ತುರುಗಾಳಗದಲ್ಲಿ ಮಡಿದ ವಿವರವಿರುವ ವೀರಗಲ್ಲು ದೊರೆಯುತ್ತದೆ.[12] ಇದೇ ಗ್ರಾಮದ ಮತ್ತೊಂದು ವೀರಗಲ್ಲು ಒಪ್ಪಶೆಟ್ಟಿಯ ಮಗ ತುರುಗಾಳಗದಲ್ಲಿ ವೀರ ಮರಣ ಹೊಂದಿದ ವಿಚಾರ ಹೊಂದಿದೆ.[13]

3.4 ಊರರುವು :

ದನಗಳನ್ನು ಕಳ್ಳತನ ಮಾಡುವ ಕಳ್ಳರನ್ನು ತಡೆಯಲು ಅಥವಾ ಕಳ್ಳರು ಗೋಮಾಳವನ್ನು ಕದ್ದು ಹೆಣ್ಣುಮಕ್ಕಳ ಮಾನಭಂಗ ಮಾಡಿ ಗ್ರಾಮಗಳನ್ನು ನಾಶಪಡಿಸುತ್ತಿದ್ದರು. ಇದರ ವಿರುದ್ದ ಹೋರಾಟ ಮಾಡುವವರನ್ನು ಸ್ಮರಿಸಲು ನೆಟ್ಟ ವೀರಗಲ್ಲುನ್ನು 'ಊರರುವು' ಎಂದು ಕರೆಯುತ್ತಾರೆ.[14] ತಾಲ್ಲೂಕಿನ ಈ ರೀತಿಯ ಊರರುವು ವೀರಗಲ್ಲುಗಳು "ತೆರಕಲಿಯ ಎಂಬ ವೀರನು ದನಗಳ ಅಪಹರಣ ನಡೆಯುತ್ತಿದ್ದಾಗ "ತುರುಗೊಳಲ್ ಕಾದಿ ಸತ್ತಂ" ಎಂದು ನಿರ್ಮಾಣವಾಗಿದೆ.[15] ಸುಕಗಾವುಂಡ ಎಂಬಾತನು ತುರುವನ್ನು ರಕ್ಷಣೆ ಮಾಡುವಾಗ ಮಡಿದ ಸಂಬಂಧ ವೀರಗಲ್ಲುನ್ನು ನಡೆಸಿರುವ ವಿಚಾರವು ಬೇರಂಬಾಡಿ ಗ್ರಾಮದಲ್ಲಿ ದೊರೆಯುತ್ತದೆ[16]. ಕೋಟೆಕೆರೆ ಗ್ರಾಮದಲ್ಲಿ ದೊರೆತಿರುವ ವೀರಗಲ್ಲು ಪೊಸಮುರ ದನಗಳನ್ನು ರಕ್ಷಿಸಿದ ಸಲುವಾಗಿ ಕೊಳ್ಳಿಯ(ಣ್ಣ)ನು ಹೋರಾಡಿ ಮರಣ ಹೊಂದಿದ ಕಾರಣ ಅವನ ಮಗ ನಾಸ್ತಣ್ಣನು ವೀರಗಲ್ಲು ನೆಡೆಸಿದನೆಂದು ದಾಖಲೆಯಿದೆ.[17]

3.5 ಪೆಣ್ಬುಯ್ಯಲ್ :

'ಪೆಣ್ಬುಯಲ್' ಎಂದರೆ ಹೆಣ್ಣಿನ ಆರ್ತಧ್ವನಿ. ಕದನಕ್ಕೆ ಬಂದ ಶತ್ರು ರಾಜ್ಯದ ಸೈನ್ಯ ಹೆಣ್ಣುಮಕ್ಕಳ ಮಾನಭಂಗಕ್ಕೆ ತೊಡಗಿ ಸೀರೆ ಸೆಳೆಯುವ ಮೂಲಕ ಯುದ್ಧವನ್ನು

ಸಾರಿದಂತಹ ಪ್ರಸಂಗದಲ್ಲಿ ಮಡಿದವರಿಗೆ 'ಪೆಣ್ಬುಯಲ್' ವೀರಗಲ್ಲು ನೆಡಸಲಾಗುತ್ತಿತ್ತು.[18] ಗುಂಡ್ಲುಪೇಟೆ ತಾಲ್ಲೂಕಿನ ಬೇರಂಬಾಡಿ ಗ್ರಾಮದ ವೀರಗಲ್ಲು 10ನೇ ಶತಮಾನದ್ದಾಗಿದೆ.[19] ಇದು ಚಾಮುಂಡರಾಯ ಪೆರುಮಾಡಿ ಎನ್ನುವವನು ಪಟ್ಟದ ಏಳನೆಯ ವರ್ಷದಲ್ಲಿ ಬಯಲು ನಾಡಿಗೆ ಬಂದು ಅಲತ್ತೂರಿನ ಮೇಲೆ ದಾಳಿ ಮಾಡಿ ಅಲ್ಲಿನ ಹೆಂಗಸರ ಮಾನಭಂಗ ಮಾಡುವ ಸಮಯದಲ್ಲಿ ಅಳಗೆಯೆರ ಲಕ್ಕಣಯ್ಯನು ರಕ್ಷಣೆ ಮಾಡಲು ಹೋರಾಡಿ ಮರಣ ಹೊಂದಿದನು. ಅವನ ಸ್ಮರಣಾರ್ಥವಾಗಿ ಈ ವೀರಗಲ್ಲು ನಿರ್ಮಿಸಲಾಗಿದೆ.[20]

3.6 ಪ್ರಾಣಿಯೊಡನೆ ಹೋರಾಟ ನಡೆಸಿ ಮರಣ :

ಪ್ರಮುಖವಾಗಿ ಹುಲಿಯೊಡನೆ ಹೋರಾಡಿ ವೀರಮರಣವನ್ನೊಂದಿದ ಬಗ್ಗೆ ಗುಂಡ್ಲುಪೇಟೆ ತಾಲ್ಲೂಕಿನ 2 ಶಾಸನಗಳು ದೊರೆತಿವೆ. ಇದು ಸಮಾಜದ ರಕ್ಷಣೆಯನ್ನು ಮಾಡಲು ವೀರನಾದವನು ಮಾಡಲೇಬೇಕಾದ ಕೆಲಸವಾಗಿತ್ತು. ಅಲತ್ತೂರಿನ ವೀರಗಲ್ಲು ಬರಹವು "ಕುಡುಗುನಾಡಿನ ಅಲತ್ತೂರ ಕೆಂಪಗಲುಡಗನ ಮಗ ಸಿಂ(ಗ)ಊಂಡಿನ ವೊಲೆಯ ಕಾರಮಾರಯ್ಯ ಹುಲಿಯನ್ನು ಇರಿದು ಕೊಂದು ಸ್ವರ್ಗಕ್ಕೆ ಸಂದನು" ಎಂದು ತಿಳಿಸುತ್ತದೆ.[21] ಹಾಗೆಯೆ ಕಲ್ಲಹಳ್ಳಿ ಗ್ರಾಮದಲ್ಲಿ ದೊರೆತಿರುವ ವೀರಗಲ್ಲು ಹರವಗೌಡನ ಸುಪುತ್ರನು ಹುಲಿಯನ್ನು ಕೊಂದು ಸ್ವರ್ಗಕ್ಕೆ ಸಂದನು ಎಂಬ ಉಲ್ಲೇಖ ಹೊಂದಿದೆ.[22] ಅಂದು ಈ ಭಾಗದಲ್ಲಿ ಸಮಾಜದ ರಕ್ಷಣೆಗೆ ಪ್ರಾಣವನ್ನು ಬಲಿ ನೀಡುವ ವ್ಯಕ್ತಿಗಳು ನೆಲೆಸಿದ್ದರೆಂದು ತಿಳಿಯುತ್ತದೆ.

3.7 ವೀರರಗುಡಿ :

ಒಂದಕ್ಕಿಂತ ಹೆಚ್ಚು ವೀರಗಲ್ಲುಗಳು ನೆಡಲ್ಪಟ್ಟಿರುವ ಸ್ಥಳವನ್ನು ವೀರಗಲ್ಲುಗುಡಿಗಳು ಎನ್ನುವರು.[23] ತಾಲ್ಲೂಕಿನ ಕೆಲವು ಭಾಗದಲ್ಲಿ ಈ ರೀತಿಯ ಗುಡಿಗಳನ್ನು ಕಾಣಬಹುದಾಗಿದೆ. ಇವುಗಳನ್ನು ಪೂಜೆಗೆ ಅರ್ಹವೆಂದೂ ತಿಳಿದು ಪೂಜಿಸುವ ವಾಡಿಕೆಯಿದ. ಈ ತರಹದ ಗುಡಿಗಳನ್ನು ತೆರಕಣಾಂಬಿ ಮುಡುಗೂರು ಮತ್ತು ಗೋಪಾಲಪುರಗಳಲ್ಲಿ ಕಾಣಬಹುದಾಗಿದೆ. ಇವುಗಳು ವೀರರ ಮರಣದ ಸ್ಮಾರಕಗಳನ್ನು ಹೊಂದಿವೆ (ಚಿತ್ರ-6, 7, 8, 9, 10, 11, 12, 13, 14 ಮತ್ತು 15).

3.8 ವೀರರ ಹೆಸರಿನಲ್ಲಿ ಕೆರೆಗಳು :

ಸತ್ತವನ ಪ್ರೇತವು ಬಹಳ ಬಾಯಾರಿಕೆಯಿಂದ ಬಳಲುವುದೆಂದು ಭಾವಸಿ ಕೆರೆ ನಿರ್ಮಾಣ ಮಾಡುವುದರಿಂದ ಮತ್ತು ಧರ್ಮ ಕಾರ್ಯಗಳಿಂದ ಅವರ ಬಾಯಾರಿಕೆ ತೀರುವುದೆಂದೂ ಹಿಂದಿನ ಜನರು ನಂಬಿದ್ದರು. ಇದರಿಂದ ಹಲವು ಜನ ವೀರರು ಮಡಿದ ಸಮಯದಲ್ಲಿ ಅವರ ಹೆಸರಿನಲ್ಲಿ ಕೆರೆ ನಿರ್ಮಿಸುತ್ತಿದ್ದರು. ಭೂವಗಣ್ಣನು, ಚಿಗ್ಗಣ್ಣನು, ಬೀರಗಣ್ಣನು ಕಟ್ಟಿಸಿದ ಕೆರೆ ಎತ್ತಿಸಿದ ದೇಗುಲ ಎಂದು

ಪ್ರಸ್ತಾಪಿಸಿರುವುದನ್ನು ಗಮನಿಸಿದರೆ ವೀರರ ಸ್ಮರಣಾರ್ಥ ಕರೆಯನ್ನು ಕಟ್ಟಿಸುವ, ದೇಗುಲವನ್ನು ನಿರ್ಮಿಸುವ ವಿರಳ ಪರಿಪಾಠ ಇದ್ದುದನ್ನು ತಿಳಿಯಬಹುದಾಗಿದೆ.

3.9 ಇತರೆ ಶಾಸನಗಳು :

ರಾಜಕೀಯ ಯುದ್ಧಗಳ ಸಂದರ್ಭಗಳಲ್ಲಿ ಹೊರಾಡಿದ ವೀರರಿಗೆ ರಾಜರು ಅಥವಾ ಇತರೆ ಅಧಿಕಾರಿಗಳು ವೀರಗಲ್ಲುಗಳನ್ನು ಹಾಕಿಸಿರುವುದನ್ನು ಕಾಣಬಹುದು. ಆದರೆ ಮಡಿದ ವೀರರ ಸಂಬಂಧಿಗಳು ಅಥವಾ ರಕ್ತಸಂಬಂಧಿಗಳಾದ ತಂದೆ, ತಾಯಿ, ಅಣ್ಣ, ತಮ್ಮ, ಮಕ್ಕಳು, ಹೆಂಡತಿ, ಚಿಕ್ಕಪ್ಪ, ಮಾವ, ಅಳಿಯಂದಿರುಗಳು ಹಾಕಿಸಿದ ವೀರಗಲ್ಲುಗಳ ಬಗ್ಗೆಯು ಮಾಹಿತಿ ದೊರೆಯುತ್ತದೆ. ಈ ವೀರಗಲ್ಲುಗಳು ಅವರವರ ರಕ್ತಸಂಬಂಧ ಅಥವಾ ಅವಿಭಕ್ತ ಕುಟುಂಬದ ಒಲವನ್ನು ತೋರಿಸುತ್ತವೆ. ಜೊತೆಗೆ ರಕ್ತಸಂಬಂಧಿಗಳು ತಮ್ಮ ಪೂರ್ವಿಕರಿಗೆ ಸ್ವರ್ಗ ಪ್ರಾಪ್ತಿಯಾಗಲೆಂದು ವೀರಗಲ್ಲುಗಳನ್ನು ಹಾಕಿಸುವ ಮನೋಭಾವನೆ ಹೊಂದಿದ್ದರು.

ಆಲತ್ತೂರಿನ ಶಾಸನದಲ್ಲಿ "ಕರಿಯ ಗುರಿ ಶೆಟ್ಟಯ್ಯ ಮಗ ಅಮ್ಮಣಶೆಟ್ಟಿಯು "ತುರುಗೊಳಳತ್ತಂ ಅವರ ಭಾವಂ ಪೆಟ್ಟಿಮ್ಮಂ ನಿರಸಿದಂ ಕಲ್ಲಂ" ಎಂದರೆ ಅಮ್ಮಣಶೆಟ್ಟಿಯ ಆಜ್ಞೆಯ ಮೇರೆಗೆ ಭಾಪ್ಪಶೆಟ್ಟಿಯ ಮಗ ಚೋಳ ಗೌಡನು ಆಕ್ರಮಿಸಿ ವೀರಮರಣ ಹೊಂದಿದ್ದರಿಂದ ಕಡೆಯ ತಮ್ಮ ಬೆಳಿಯಣ್ಣನು ವೀರಗಲ್ಲು ನೆಡೆಸಿದನು.[24] ಇದೇ ಗ್ರಾಮದ ಮತ್ತೊಂದು ವೀರಗಲ್ಲು ಅಣ್ಣನು ತುರುಗಾಳಗದಲ್ಲಿ ಮಡಿದ ಕಾರಣ ತಮ್ಮನು ವೀರಗಲ್ಲು ನೆಡೆಸಿದ ವಿಚಾರವನ್ನು ವಿವರಿಸುತ್ತದೆ. ತೆರೆಕೆಲಿಯ ಎಂಬಾತನು ತುರೆಗೋಳ್ ಸತ್ತಿದ್ದರಿಂದ ಅವನ ಮಕ್ಕಳು ವೀರಗಲ್ಲು ಹಾಕಿಸಿರುವ ಸಂಗತಿ ತಿಳಿಯುತ್ತದೆ.

3.10. ಮಹಾಸತಿಗಲ್ಲು :

'ಮಾಸ್ತಿ' ಎಂಬುದು 'ಮಹಾಸತಿ' ಪದದ ತದ್ಭವ ರೂಪ. ಪ್ರಾಚೀನ ಕಾಲದ ಜನರು ತಾವು ಅನುಸರಿಸಿದ ಧರ್ಮದಲ್ಲಿ ಗಂಡ ಸತ್ತಾಗ ಅವರೊಡನೆ ಸಹಗಮನ ಪದ್ಧತಿಯಂತೆ ಚಿತಯೇರುವುದನ್ನು ಒಂದು ಮೌಲ್ಯವೆಂದು ಪರಿಗಣಿಸುತ್ತಿದ್ದರು. ಈ ರೀತಿ ಮಾಡಿದ ಸ್ತ್ರೀಯರನ್ನು ಮಹಾಸತಿ ಎನ್ನುತ್ತಿದ್ದರು. ಈ ರೀತಿಯ ಮಹಾಸತಿಯ ಪ್ರಶಸ್ತಿಗಳನ್ನು ತಿಳಿಸುವ ಶಾಸನಗಳನ್ನು ಮಾಸ್ತಿಕಲ್ಲು ಎನ್ನವರು. ಇವು ಯುದ್ದದಲ್ಲಿ ಮಡಿದ ಗಂಡನ ಶವದ ಜೊತೆ ಹೆಂಡತಿಯೂ ಚಿತೆ ಏರುವ ಮೂಲಕ ತನ್ನನ್ನು ಸಮರ್ಪಿಸಿಕೊಳ್ಳುತ್ತಿದ್ದ ಸ್ತ್ರೀಯರಿಗಾಗಿ ನೆಡುತ್ತಿದ್ದ ಸ್ಮಾರಕಗಳಾಗಿವೆ. ಇವುಗಳನ್ನು ಮಾಸ್ತಿಕಲ್ಲು ಮಾಸ್ತಿಮ್ಮಕಲ್ಲು ಎಂದು ಕರೆಯುತ್ತಾರೆ. 10ನೇ ಶತಮಾನದ ನಂತರ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಾಸ್ತಿಕಲ್ಲು ಕಂಡುಬರುತ್ತದೆ. ಎರೆಯೂರು ಶಾಸನದಲ್ಲಿ "ಗಾಉಡಪ್ಪು ಕಾಮಣ್ಣನವರು ವಾಯಿರೋಜೆ ನಿರಿಸಿ ಪ್ರತಿಷ್ಠಾ ..... ರೂಪಿಗಿರಿ ನಪ್ತರುವ" ಎಂದು ಬರೆದಿರುವ ಅಸ್ಪಷ್ಟ ಮಾಸ್ತಿಕಲ್ಲು ದೊರೆತಿದೆ.[25] ಹಾಗೆಯೇ

ಕುಣಗಳ್ಳಿ 'ತಿಮ್ಮಾವಾಮಣನ ಸಪೆಣ್ಣತಿ ಮಂಚಾಯಿ ಸತಿಯ ಪ್ರಮಾಣಗಳ ಮಹಾಶ್ರೀ' ಎಂದು ಪ್ರಸ್ತಾಪಿಸುತ್ತದೆ. ಇವು ಮಾಸ್ತಿಕಲ್ಲುಗಳಾಗಿದ್ದು ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು ಸಹಾಯವಾಗಿದೆ.[26]

3.11 ಆರ್ಥಿಕ ಜೀವನ :

ಪ್ರಾಚೀನ ಕರ್ನಾಟಕದಿಂದ ಈಗಿನವರೆಗೆ ಎಲ್ಲಾ ಶಾಸನಗಳಲ್ಲಿಯೂ ಈ ಭಾಗದ ಜನರ ಜೀವನೋಪಾಯ ಕ್ರಿಯೆ ವ್ಯವಸಾಯ ಎಂದು ತಿಳಿಯಬಹುದು. ಆದ್ದರಿಂದಲೇ ಭೂಮಿಯನ್ನು ಭೂತಾಯಿ ಎಂದು, ರೈತರನ್ನು ಭೂತಾಯಿಯ ಮಕ್ಕಳು ಎಂದು ಕರೆಯುವುದು ಉಂಟು. ತಾಲ್ಲೂಕಿನಲ್ಲಿ ದೊರೆತಿರುವ ಶಾಸನಗಳಿಂದ ನೀರಾವರಿ ಭೂಮಿಯ ದಾನ ಮತ್ತು ಒಣ ಭೂಮಿಯ ದಾನ ನೀಡಿರುವುದನ್ನು ತಿಳಿಯಬಹುದಾಗಿದೆ. ಆದ್ದರಿಂದ ಈ ಭಾಗದಲ್ಲಿ ಬಾವಿ ನೀರಾವರಿ ಮತ್ತು ಮಳೆ ಆಶ್ರಿತ ಬೆಳೆಗಳನ್ನು ಬೆಳೆಯುತ್ತಿದ್ದರು ಎಂಬುದು ದೃಢಪಡುತ್ತದೆ. ಜೊತೆಗೆ ಈ ಭಾಗದಲ್ಲಿ ಯಾವುದೇ ಜೀವನದಿ ಹರಿಯದ ಕಾರಣ ರೈತರ ವ್ಯವಸಾಯ ಬಹುತೇಕ ಮಳೆಯ ಆಶ್ರಯ ಹೊಂದಿತ್ತು. ಅಂದರೆ ಕೇವಲ ಮಳೆಯ ನೀರನ್ನೇ ಆಶ್ರಯಿಸಿ ಬೆಳೆಯುವ ಹೊಲಗಳನ್ನು ದೇವಮಾತೃಕೆಗಳು ಮತ್ತು ನದಿ, ಕೆರೆ ಮೊದಲಾದವುಗಳನ್ನು ಆಶ್ರಯಿಸಿರುವ ಹೊಲಗಳನ್ನು ನದೀ ಮಾತೃಕೆಗಳು ಎಂದು ಕರೆದಿದ್ದಾರೆ.[27] ಈ ಭಾಗದಲ್ಲಿಯೂ ಸಹ ಜನತೆಗೆ ಕುಡಿಯುವ ನೀರು ಒದಗಿಸುವುದು ಮತ್ತು ವ್ಯವಸಾಯದ ಉದ್ದೇಶಗಳನ್ನು ಹೊಂದಿ ಕರೆಗಳನ್ನು ನಿರ್ಮಿಸುತ್ತಿದ್ದರು. ಕೆರೆಗಳನ್ನು ಸಾಮಾನ್ಯವಾಗಿ ರಾಜರು, ಮಾಂಡಲೀಕರು, ಶ್ರೀಮಂತರು ಕಟ್ಟಿಸುತ್ತಿದ್ದರು. ಕೆರೆಯ ನಿರ್ಮಾಣ ಒಂದು ಪುಣ್ಯದ ಕಾರ್ಯ ಎಂದು ನಂಬಿದ್ದರು. ಈ ಭಾಗದಲ್ಲಿ ದೊರೆತಿರುವ ಶಾಸನಗಳಲ್ಲಿ ದನ ಕರುಗಳನ್ನು ದಾನ ನೀಡಿರುವುದು ತಿಳಿದು ಬರುತ್ತದೆ. ಇದು ವ್ಯವಸಾಯದ ಜೊತೆಗೆ ಪಶುಸಂಗೋಪನೆಯಲ್ಲಿ ತೊಡಗಿದ್ದರು ಎಂಬುದನ್ನು ತಿಳಿಸುತ್ತದೆ. ಕೆಲವು ವೀರಗಲ್ಲು ಶಾಸನಗಳು ಹೇಳುವಂತೆ ದನಕರುಗಳ ಕಳ್ಳತನ ನಡೆದಿರುವುದನ್ನು ಸೂಚಿಸುತ್ತದೆ. ಈ ಸಂಬಂಧದ ಹೋರಾಟದಲ್ಲಿ ಮರಣ ಹೊಂದಿದ ಸೈನಿಕನಿಗೆ ವೀರಗಲ್ಲು ನೆಟ್ಟಿರುವ ವಿಚಾರವನ್ನು ತಿಳಿಯಬಹುದಾಗಿದೆ.[28]

ಗುಂಡ್ಲುಪೇಟೆ ತಾಲ್ಲೂಕಿನ ಹೊಣಕನಹಳ್ಳಿಯ ಗ್ರಾಮದ ಶಾಸನ ಕ್ರಿ.ಶ.1506ಕ್ಕೆ ಸೇರಿದ್ದಾಗಿದೆ. ಈ ಶಾಸನವು ಶ್ರೀ ರಂಗ ಕ್ಷೇತ್ರವಾದ ಉಬಯ ಕಾವೇರಿ ಮಧ್ಯೆ ಚಂದ್ರ ಪುಷ್ಕರ್ಣಿ ತೀರದಲ್ಲಿ ನೆಲೆಸಿಹ ಶ್ರೀರಂಗನಾಥ ದೇವರು ಎಂದು ಉಲ್ಲೇಖಿರಸಿರುವುದು ಮತ್ತು ಇಲ್ಲಿ ಪುಷ್ಕರ್ಣಿ ಇರುವುದನ್ನು ಸಮರ್ಥಿಸುತ್ತದೆ. ಈ ಪುಷ್ಕರ್ಣಿ ದೇವಾಲಯಕ್ಕೆ ಸಂಬಂಧಪಟ್ಟಿದ್ದು ದೇವತಾಕಾರ್ಯಕ್ಕೆ ಬಳಕೆಯಾಗುತ್ತಿತ್ತು. ಇದರ ಜೊತೆಗೆ ಜನ ಸಾಮಾನ್ಯರು ಧಾರ್ಮಿಕ ಹಿನ್ನೆಲೆಯಲ್ಲಿ ಬಳಸುತ್ತಿದ್ದಿರಬಹುದಾಗಿದೆ.[29] ವೀರನಪುರದ ಊರಿನ ಮುಂದಿನ ಬಾವಿಯ ಕಟ್ಟೆಗೆ ನಿಲ್ಲಿಸಿರುವ ಶಿಲಾ ಶಾಸನ ಕ್ರಿ.ಶ 1860ರ ಕಾಲದಾಗಿದ್ದು 'ವೀರನಪುರ ಮೂಡ್ಲುಹಟ್ಟಿ ಮಾದಪ್ಪನವರ ಮಕ್ಕಳು ಮಲ್ಲಪ್ಪನವರ

ಧರ್ಮಾರ್ಥ ಮಾರಯೀ ಬಾವಿ ಪ್ರತಿಷ್ಠೆಯು ಮಾಡಲ್ಪಟ್ಟಿತ್ತು' ಎಂದು ಬರೆಸಿದ್ದಾರೆ. ಈ ಬಾವಿಯು ಮಲ್ಲಪ್ಪ ಧರ್ಮಾರ್ಥ ಕಟ್ಟಿಸಿದ್ದು ಇವರಿಗೆ ಸ್ವರ್ಗ ಪ್ರಾಪ್ತಿಯಾಗಲೆಂದು ವಿವರಿಸುತ್ತದೆ. ಅಂದರೆ ಧಾರ್ಮಿಕ ಭಾವನೆಯಿಂದ ಬಾವಿಯನ್ನು ನಿರ್ಮಾಣವಾದರೂ ಬೇರೆ ಕೆಲಸಗಳಿಗೂ ಬಳಕೆ ಮಾಡಲಾಗುತ್ತಿತ್ತು.[29] ಆದರೆ ಬಾವಿ ಕಟ್ಟಿಸುವುದು ಶ್ರೇಯಸ್ಕರವೆಂದು ನಂಬಿದ್ದರು. ಹಾಗೆಯೇ ತ್ರಿಯಂಬಕಪುರ ದೇವಸ್ಥಾನದ ಅರ್ಚಕನಲ್ಲಿದ್ದ ಶಾಸನ ಕ್ರಿ.ಶ. 1417ರ ಕಾಲದ್ದಾಗಿದ್ದು ಈ ಶಾಸನದಲ್ಲಿ ತಾಲ್ಲೂಕಿನ ಕೆಲವು ಕೆರೆಗಳನ್ನು ಹೆಸರಿಸಲಾಗಿದೆ. ಅವುಗಳೆಂದರೆ ಹಟಿಲ ಕೋಟೆಕೆರೆ, ಮಾರಗಟದ ಕೆರೆ, ಅರೇಕೊಠಾರಕೆರೆ, ಮಾಲೂರಕೆರೆ, ಅರಕಲವಾಡಿಕೆರೆ, ನರಸಮಂಗಲದ ಕೆರೆ, ಹೆಗ್ಗವಾಡಿಯ ಕೆರೆ, ಅರೆಹಳ್ಳಿಯಕೆರೆ, ಹಗುಕಲದೆಕೆರೆ,[30] ಕೋಡಿಹಳ್ಳಿಯ ಕೆರೆ, ಕೂತನೂರಕೆರೆ, ವಿಜಯಪುರದ ಕೆರೆ, ರಾಘವಪುರದ ಕೆರೆ, ಎಡತಲೆಯ ಕೆರೆ, ಕೆಲಸೂರ ಕೆರೆ, ಒಡೆಯನಕೆರೆ, ಎಂಬ ಹಲವು ಕೆರೆಗಳ ಹೆಸರುಗಳನ್ನು ಒಳಗೊಂಡಿದೆ. ಈ ಎಲ್ಲಾ ಕೆರೆಗಳು ವ್ಯವಸಾಯಕ್ಕೆ ಬಳಕೆಯಾಗಿದ್ದವು ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುತ್ತಿದ್ದವು.

3.12 ವರ್ತಕರ ಸಂಘ :

ಆಧುನಿಕ ಯುಗದ ಕೈಗಾರಿಕೆ ಮತ್ತು ವ್ಯಾಪಾರ ಕೇಂದ್ರಗಳಂತೆ ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪಾರಿಗಳು ಪುರಾತನ ಕಾಲದಿಂದಲೂ ಸ್ವಯುಕ್ತ ವರ್ತಕ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. ಇವುಗಳು ಸ್ವತಂತ್ರ ಲಾಂಛನಗಳನ್ನು ಹೊಂದಿದ್ದವು. ಇವು ಹಲವು ಪ್ರಕಾರಗಳಿವೆ. ಇವುಗಳು ಆ ಕಾಲದ ಆರ್ಥಿಕ ವ್ಯವಸ್ಥೆಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದವು.[31] ಹಾಗೆಯೇ ಪ್ರಾಂತಾನುಸಾರವಾಗಿಯೂ ವರ್ತಕ ಸಂಘಗಳು ಸ್ಥಾಪನೆಯಾಗಿರುವುದನ್ನು ಕಾಣಬಹುದು. ಒಟ್ಟಾರೆ ಕರ್ನಾಟಕದಲ್ಲಿ ಚಂದ್ರವಳ್ಳಿ, ಮಸ್ಕಿ, ಬ್ರಹ್ಮಗಿರಿ, ಸಿದ್ದಾಪುರ, ಸುವರ್ಣಗಿರಿ, ಬೇಲೂರು, ಅರಸೀಕೆರೆ, ಶ್ರವಣಬೆಳಗೋಳ ತಲಕಾಡು, ಶಿಕಾರಿಪುರ, ಐಹೊಳೆ, ಬನವಾಸಿ (ವೈಜಯಂತಿ ಪುರ) ಮಾನ್ಯಖೇಟ, ಮನ್ನೆ, ದೊಡ್ಡಬಳ್ಳಾಪುರಗಳಲ್ಲಿ ವರ್ತಕ ಸಂಘಗಳಿದ್ದವು ಎಂಬುದನ್ನು ಇತಿಹಾಸಕಾರರು ಗುರುತಿಸಿದ್ದಾರೆ.[32]

ಕಂದಗಾಲದ ಶಾಸನ 11ನೇ ಶತಮಾನಕ್ಕೆ ಸೇರಿದ್ದು 'ವೀರಾಗಣ(ಸ್) ಪದಿನಾಟ್ಟು ಚೆಟ್ಟಿಯವತ್ ದೇಶಿಸೇನಾಪತಿ ಆಯಿರವಾಡಿ ಐನೊಟ್ಟು ವಾನ್ಬಾನುವತ್' ಎಂಬ ಉಲ್ಲೇಖ ಹೊಂದಿದೆ. ಈ ಬರಹದಿಂದ ತಿಳಿಯಬಹುದಾದ ಅಂಶವೆಂದರೆ ವರ್ತಕ ಸಂಘಗಳು ಆರ್ಥಿಕವಾಗಿ ಸದೃಢವಾಗಿದ್ದು ರಾಜಕೀಯದಲ್ಲಿ ತಮ್ಮ ಪ್ರಭಾವ ಬೀರುತ್ತಿದ್ದವು. ಹಾಗೆಯೇ ಕೆಲವು ವ್ಯಾಪಾರಿಗಳು ದೇಶದ ಸೈನಿಕರಾಗಿ ಸೇವೆಸಲ್ಲಿಸಿರುವುದನ್ನು ಶಾಸನ ವಿವರಿಸುತ್ತದೆ. ಹಾಗೆಯೇ ಹಲವು ವರ್ತಕ ಸಂಘಗಳ ಉಲ್ಲೇಖವಿದೆ.[33] ಮತ್ತು ಗುಂಡ್ಲುಪೇಟೆಯ ಶಿವಪುರ ಗ್ರಾಮದ ಶಾಸನವೊಂದರಲ್ಲಿ ವ್ಯಾಪಾರ ವಾಣಿಜ್ಯ ವ್ಯವಹಾರಕ್ಕೆ ಸಂಬಂಧಿಸಿದ ವಿವರಗಳು ಉಕ್ತವಾಗಿದೆ, ಈ

ವ್ಯವಹಾರ ವಿದೇಶಗಳಾದ ಸಿಲೋನ್, ಬರ್ಮಾ, ಮಲೇಶಿಯಾ ದೇಶಗಳೊಡನೆ ಇದ್ದುದ್ದಾಗಿ ಶಾಸನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.[34]

ಗುಂಡ್ಲುಪೇಟೆ 80ನೇ ಮಾದಪಟ್ಟಣ ಶಾಸನದಲ್ಲಿ ವ್ಯಾಪಾರ ವ್ಯವಹಾರಗಳಿಗೆ ಸಂಬಂಧಪಟ್ಟಿರುವ ವಿವರಗಳನ್ನು ತಿಳಿಸುತ್ತದೆ. ನಂಜನಗೂಡಿನ ದೇವಾಲಯಕ್ಕೆ ದಕ್ಷಿಣದಲ್ಲಿರುವ ಮಠದಲ್ಲಿ ಅನ್ನದಾನ ನಡೆಸಲು ದೇಣಿಗೆ ನೀಡುವಂತೆ ಪಾಲುಕಾಡಪೇಟೆ, ಕೊಡುವಾಯಿಪೇಟೆ, ಕೊಲ್ಲಂಗೋಡುಪೇಟೆ, ನರ್ಜಿಪೇಟೆ, ವಂಣಲಾರ ಕಾಡಪೇಟೆ, ಕಬ್ಬಿನಪೇಟೆ, ಅಮೃತಮಾನಪೇಟೆ, ಗುಂಡ್ಲುಪೇಟೆ ಮಾರ್ಗವಾಗಿ ವ್ಯಾಪಾರ ಮಾಡುವವರಿಗೆ ಮೈಸೂರಿನ ಕೃಷ್ಣರಾಜಒಡೆಯರ್‌ರವರು ಬರೆಸಿರುವ ತಾಮ್ರಶಾಸನ ಇದಾಗಿದೆ. ಜೊತೆಗೆ ಈ ಮಾರ್ಗದಲ್ಲಿ ಜವಳಿ, ನೂಲು, ಅಡಕೆ, ಹೊಗೆಸೊಪ್ಪು, ಗಂಧದ ಕೊರಡು, ಅರಗು, ಜೀರಿಗೆ, ತುಪ್ಪ, ಕಸುಬೆ, ಅರಿಶಿನ, ಮೆಣಸು, ಶುಂಠಿಗಳನ್ನು ಮಾರಾಟ ಮಾಡುವಾಗ ತೆರಿಗೆ ನೀಡುವಂತೆ ವಿವರಿಸಿದೆ. ಇದರಿಂದ ಎರಡು ವಿಚಾರಗಳನ್ನು ತಿಳಿಯಬಹುದು. ಮೊದಲನೆಯದು ಈ ಭಾಗದಲ್ಲಿ ಗಂಧದ ಕೊರಡು, ಅರಗು, ಅಡಕೆ, ಹೊಗೆಸೊಪ್ಪು, ಜೀರಿಗೆ, ತುಪ್ಪ, ಕುಸುಬೆ, ಅರಿಶಿನ, ಮೆಣಸು, ಶುಂಠಿ ಮೊದಲಾದ ಬೆಳೆಗಳನ್ನು ಬೆಳೆಯುತ್ತಿದ್ದರು ಮತ್ತು ಮಾರಾಟ ಮಾಡುತ್ತಿದ್ದರು ಎಂದು ಮತ್ತು ಎರಡನೆಯದು ಶಾಸನದಲ್ಲಿ ಸೂಚಿಸಿರುವಂತೆ ವ್ಯಾಪಾರಿ ಮಾರ್ಗಗಳ ಬಗ್ಗೆಯು ತಿಳಿಯಬಹುದಾಗಿದೆ. ವ್ಯಾಪಾರಿ ಮಾರ್ಗಗಳ ಉಲ್ಲೇಖದಲ್ಲಿ ವ್ಯಾಪಾರ ನಡೆಯುವ ಸ್ಥಳಗಳನ್ನು ಪೇಟೆ ಎಂದು ಉಲ್ಲೇಖಿಸಿರುವುದು ವಿಶೇಷವಾಗಿದೆ. ಈ ಶಾಸನದಲ್ಲಿ ವರ್ತಕ ಸಂಘಗಳಿಂದ ಐನೂರು ಕುಡಿ, ಪಾಟದ ವರ್ತಕರು, 24 ಮನೆ ತೆಲಗ ಶೆಟ್ಟಿಗಳು, ದೇವಾಂಗದ ಶೆಟ್ಟಿಗಳು, ದೇಶದವರು, ಬಣಜಿಗರು, 12 ಕುಡಿಪಾಟದ ವರ್ತಕರು, ಪೆಡಸಿಂಧೂರಕರು, ವೈಶ್ಯ ಸಾಮಿಶೆಟ್ಟಿ ಎಂಬ ವರ್ತಕರ ವರ್ಗಗಳ ಹೆಸರು ನಮೂದಿಸಿದೆ. ಜೊತೆಗೆ ಈ ತಾಮ್ರಶಾಸನ ಬರೆದವರು ಆನಂದಾಚಾರಿಯವರು.[35]

3.13 ತೂಕಗಳು ಮತ್ತು ಅಳತೆಗಳು :

ರಾಜ್ಯದಲ್ಲಿ ಉತ್ಪಾದನೆಯಾದ ವಸ್ತುಗಳನ್ನು ಅಳೆಯುವ ಅಥವಾ ತೂಕ ಮಾಡುವ ಪದ್ಧತಿಯನ್ನು ಹೊಂದಿದ್ದರು ಎಂಬ ವಿಷಯವನ್ನು ಶಾಸನಗಳು ತಿಳಿಸುತ್ತವೆ. ಆದರೆ ಒಂದೇ ರೀತಿಯ ಅಳತೆಯನ್ನು ರಾಜ್ಯಾದ್ಯಂತ ಹೊಂದಿರದೇ ಪ್ರಾಂತ್ಯಗಳವಾರು ಮತ್ತು ಹಳ್ಳಿ ಹಳ್ಳಿಗೂ ಅಳತೆಗಳು ಬೇರೆಬೇರೆಯಾಗಿರುತ್ತಿದ್ದವು. ಈ ಅಳತೆಗೋಲುಗಳನ್ನು ಆಧರಿಸಿ ರಾಜನು ತೆರಿಗೆ ವಿಧಿಸುತ್ತಿದ್ದರು. ಇದು ಸಹ ಆರ್ಥಿಕ ವ್ಯವಸ್ಥೆಯ ಮೇಲೆ ತನ್ನದೆಯಾದ ಪ್ರಭಾವ ಬಿರುತ್ತಿತ್ತು. ಅಳತೆಗೋಲುಗಳ ವಿಚಾರಗಳನ್ನು ವಿವರಿಸುವ ತ್ರಿಯಂಬಕಪುರದ ಶಾಸನ ಅಳತೆಗೋಳಗಳ ಹೆಸರುಗಳನ್ನು ಒಳಗೊಂಡಿದೆ ಅವುಗಳೆಂದರೆ ಖಂಡುಗ, ನಾಘಂಡಗ, ಇಪತ್ತು ಖಂಡಗ ಮೊದಲಾದವು ದೃಢಪಡಿಸುತ್ತವೆ. ಇದು ದವಸ ಧಾನ್ಯಗಳನ್ನು ಖಂಡಗಗಳ

ಬಳಕೆಯಿಂದ ಅಳೆಯುತ್ತಿದ್ದರು ಎಂಬುದನ್ನು ಡಾ.ಚಿದಾನಂದಮೂರ್ತಿಯವರು ತಿಳಿಸಿರುವಂತೆ 1 ಖಂಡಗ= 4 ಪಂಚಕ, 1 ಪಂಚಗ= 5 ಕೋಳಗ, 1 ಕೊಳಗ=4 ಬಳ್ಳ (ಸೇರು), 1 ಬಳ್ಳ = 4 ಮಾನ, 1 ಮಾನ = 4 ಸೊಲ್ಲಿಗೆ (ಪಾವು), 1 ಸೊಲ್ಲಿಗೆ= 4 ಗಿದ್ದಿಗೆ(ಚಟಾಕು)[36], ಎಂದು ಉಲ್ಲೇಖಿಸಿದೆ. ಗುಂಡ್ಲುಪೇಟೆಯ ಕೋಟೆ ಬಸ್ತಿಮಾಳದಲ್ಲಿರುವ 16ನೇ ಶತಮಾನದ ಶಾಸನ ಏಕ್ಕೈ ನಿವೇಶನ ಎಂದು ಪ್ರಸ್ತಾಪಿಸುತ್ತದೆ. ಆದರೆ ಏಕ್ಕೈ ನಿವೇಶನ ಎಂದರೆ ಎಷ್ಟು ಎಂದು ತಿಳಿಯುವುದಿಲ್ಲ ಜೊತೆಗೆ ಇದೇ ಶಾಸನ ಕಂಬ 100 ಎಂದು ಉಲ್ಲೇಖಿಸಿದೆ.[37] ಈ ಅಳತೆಗೆ ಸಂಬಂಧಿಸಿದಂತೆ ಡಾ.ಚಿದಾನಂದಮೂರ್ತಿಯವರು ಕಂಬ ಎಂಬುದನ್ನು ಭೂಮಿಯನ್ನು ಅಳೆಯುವ ಅಳತೆಗೋಲು ಎಂದು ವಿವರಿಸಿದ್ದಾರೆ. ಕಂಬವನ್ನು ಕಮ್ಮ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಒಂದು ಮುತ್ತರು +900 ಕಂಬಗಳು ಎಂದು ಸಹ ವಿವರಣೆ ನೀಡಿದ್ದಾರೆ.[38]

ಪಡಗೂರಿನ 94ರ ಆಂಜನೇಯ ದೇವಸ್ಥಾನದ ಮುಂದೆ ನೆಟ್ಟುಕಲ್ಲು ಸಾಳುವ ಗೋವಿಂದರಾಯರ ಮುಖಾಂತರ ಆರುಜನ ಗಾವುಂಡರಿಗೆ 'ಊರ ಮುಂದಿನ ನಾಲ್ಕು ಕಲ್ಲಿನ ಬಳಗಾರ ಚತುಸೀಮೆಯ, ಊರ ಮುಂದಣ ಸಾರಿಗೆ ಹೊಲ ಕಂಬ 50, ತೆಂಕಳ ಸಾರಿಗೆ ಹೊಲ ಕಂಬ 50, ಹೊಲಕಂಬ 100, ಸಂಪಿಗೆಪುರ ಯೆಲ್ಲೆ ಸೇವೆ ಹೊಲಕಂಬ 100, ಬಗುತರಕೆರೆಯ ಸಾರಿಗೆ ಹೊಲಕಂಬ 100 ಸಾವ್ಯಡವನಟ್ಟಿ ಹೊಲ ಕಂಬ 30, ಒಟ್ಟು ಕಂಬ 430 ಎಂದು ಅಳತೆಮಾಡಿ ಕೊಡುಗೆ ನೀಡಿದೆ.'[39] ಇದು ಜಮೀನಿನ ಅಳತೆಯ ವಿಚಾರವಾಗಿದ್ದು ಇದರಲ್ಲಿ ಕಂಬ ಎಂಬ ಅಳತೆಯ ಬಳಕೆ ಇರುವುದು ಮುಖ್ಯ ಸಂಗತಿಯಾಗಿದೆ. ಚಿಕ್ಕಾಟಿಯ ಶಾಸನ ಕ್ರಿ.ಶ. 1049ರ ಕಾಲದಾಗಿದ್ದು ದಾನದ ವಿವರ ನೀಡುತ್ತದೆ. 100 ಭತ್ತ ಬೆಳೆಯುವ ಜಾಗವನ್ನು ದಾನ ನೀಡಿರುವಂತೆ ಹೇಳುತ್ತದೆ. ಇದರಲ್ಲಿ ಅಳತೆಯಾಗಿ ಬಳಕೆಯಾಗಿರುವುದು '100 ಭತ್ತ ಬೆಳೆಯುವಷ್ಟು' ಜಾಗ ಎಂಬುದನ್ನು ತಿಳಿಯಬಹುದಾಗಿದೆ.[40] ಹಾಗೂ ಬೊಮ್ಮಲಾಪುರ ರಾಮೇಶ್ವರ ದೇವಸ್ಥಾನದ ಪಶ್ಚಿಮ ಮೈದಾನದ ಶಾಸನ ಈಗ ಇದು ಮಠದ ಆವರಣದಲ್ಲಿ ತಂದಿರಸಲಾಗಿದ್ದು 'ಮೂಲ ಸ್ಥಾನ ದೇವರ ಆಯುದುಪಡಿಸಂತಾಗಿ ಕೊಟ್ಟುಗದ್ದೆಯ ಬೆದೆ ಸಯಿಧರ್ಮ' ಎಂದು ಬರೆಸಿದ್ದಾರೆ. ಇದರಲ್ಲಿ 'ಪಡಿ', 'ಸಂತಾಗಿ' ಎಂಬ ಅಳತೆಯ ವಿವರಗಳನ್ನು ಕಾಣಬಹುದಾಗಿದೆ.[41] ಗುಂಡ್ಲುಪೇಟೆಯ 16ನೇ ಶತಮಾನದ ಶಾಸನ 'ಗದ್ದೆ' ಎಂಬ ಅಳತೆಯ ಉಲ್ಲೇಖವಿದ್ದು, ಗದ್ದೆಯ ಪ್ರಮಾಣ ಎಷ್ಟಿದೆ ಎಂದು ತಿಳಿದಿಲ್ಲ.[42] ಬೆಳಚವಾಡಿ ಶಾಸನ ಮೂಲಸ್ಥಾನ ದೇವರಿಗೆ ಬಿಟ್ಟು ಮಣ್ಣ 'ಬೆಲಿ'ಯೊಂದು ಅಲ್ಲಿಯ ಮಾಲೀಕರಿಗೆ ಬಿಟ್ಟ ಮಣ್ಣ ಬೇಲಿಯ ಧರ್ಮ್ಮೋ ಎಂದು ಬರೆಸಿದ್ದು, ಇಲ್ಲಿ 'ಬೇಲಿ' ಎಂಬುದು ಅಳತೆಯ ಪ್ರಮಾಣವಾಗಿದೆ.[43] ಗುಂಡ್ಲುಪೇಟೆಯ 14ನೇ ಶತಮಾನದ ಶಾಸನ ರಾಮೇಶ್ವರ ದೇವಸ್ಥಾನದ ಪೂಜೆ ಸಂಬಂಧ ವಿವರಿಸುವಾಗ 'ಮಾನ ತುಪ್ಪ' 'ಸೊಲಿಗೆ ಉಪ್ಪು' ಎಂದು ವಿವರಗಳಿವೆ.

ಇದರಲ್ಲಿ 'ಮಾನ' ಮತ್ತು 'ಸೊಲಿಗೆ'ಯ ಪ್ರಸ್ತಾಪವಿದ್ದು ಇವುಗಳನ್ನು ಅಳತೆಗೋಲುಗಳಾಗಿ ಬಲಸುತ್ತಿರುವುದನ್ನು ಕಾಣಬಹುದಾಗಿದೆ.[44] ಬೇಗೂರಿನ ಆಂಜನೇಯನ ಗುಡಿಯ ಮುಂದೆ ನಿಂತಿರುವ ಶಿಲಾಶಾಸನದಲ್ಲಿ "ಆ ಗ್ರಾಮಕ್ಕೆ ಸೇರುವ ಗದ್ದೆ ಬೇ(ದ)ಲು ಸಲಂಕ 'ಸೊಲಿಗೆ'ಯೇನು" ಎಂಬ ಬರಹವಿದೆ, ಇದರಲ್ಲಿ ಸೂಲಗೆ ಎಂಬ ಅಳತೆಯನ್ನು ಕಾಣಬಹುದಾಗಿದೆ.[45] ಹಾಗೆಯೇ ಪುತ್ತನಪುರದ ಅರಳಿಕಟ್ಟೆಗೆ ಸೇರಿಸಿದ ತೂಡಕಲ್ಲಿನಲ್ಲಿ ಮಾಲೀಕನ 18 'ಸಲಗೆ ಗದೆ'ಯ ಎಂಬ ಅಳತೆಗಳ ವಿವರ ದೊರೆಯುತ್ತದೆ.[46]

ಮೇಲೆ ವಿವರಿಸಿರುವಂತೆ ಈ ಭಾಗದ ಶಾಸನಗಳ ಅಳತೆಗೋಲುಗಳನ್ನು ಗಮನಿಸಿದರೆ ಪ್ರಾಚೀನ ಕರ್ನಾಟಕದಿಂದಲೂ ಪ್ರಾದೇಶಿಕವಾಗಿ ಜನತೆಯು ತಮ್ಮ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು ಬೇರೆ ಬೇರೆ ಅಳತೆಗೋಲುಗಳನ್ನು ಬಳಸುತ್ತಿದ್ದರು, ಎಂದು ತಿಳಿಯುತ್ತದೆ.

3.14 ನಾಣ್ಯಗಳು :

ಕರ್ನಾಟಕದ ಜನತೆ ತಮ್ಮ ವ್ಯವಹಾರಗಳಲ್ಲಿ ನಾಣ್ಯಗಳನ್ನು ಬಳಸುತ್ತಿದ್ದರು ಎನ್ನವುದನ್ನು ಶಾಸನಗಳು ವಿವರಿಸುತ್ತವೆ. ನಾಣ್ಯಗಳನ್ನು ಬೇರೆ ಬೇರೆ ಸಂಸ್ಥಾನಗಳು ತಮ್ಮ "ಕಮ್ಮಟ"ಗಳಲ್ಲಿ ಮುದ್ರಿಸುತ್ತಿದ್ದವು ಎಂದು ತಿಳಿದುಬರುತ್ತದೆ. ಹಾಗೆಯೇ ಕರ್ನಾಟಕದಲ್ಲಿ ಅನೇಕ ಬಗೆಯ ನಾಣ್ಯಗಳು ದೊರೆತಿರುವುದು ತಿಳಿಯುತ್ತದೆ. ಇದರಿಂದ ಅರಿಯಬಹುದಾದ ಅಂಶವೆಂದರೆ ಕರ್ನಾಟಕದಲ್ಲಿ ಬೇರೆ ಬೇರೆ ಪ್ರಾಂತ್ಯದಲ್ಲಿ ಬೇರೆ ಬೇರೆ ನಾಣ್ಯಗಳು ಬಳಕೆಯಾಗಿರುವುದು ಶಾಸನಗಳಲ್ಲಿ ತಿಳಿದುಬರುತ್ತದೆ. ನಾಣ್ಯಗಳನ್ನು ಮುದ್ರಿಸುವ ಸ್ಥಳಗಳನ್ನು ಕಮ್ಮಟಗಳು ಎನ್ನುವರು.[47] ಈ ತಾಲ್ಲೂಕಿನ ಶಾಸನದಲ್ಲಿ ಪ್ರಮುಖವಾಗಿ ಗದ್ಯಾಣ. ವರಾಹ, ಹೊನ್ನು, ಹಣ, ಕಂಠೀರಾಯ ಮೊದಲಾದ ನಾಣ್ಯಗಳು ಬಳಕೆಯಾಗಿವೆ. [ಗದ್ಯಾಣ ಅಥವ ಪೋನ್=ಹತ್ತು ಪಣಂ ಅಥವಾ ಹಣ, 1ಪಣ=ಎರಡು ಅಡ್ಡ(ಪಾಲಿಂ ಅಥವ ಅಡ್ಡ), 1ಪಣ=ನಾಲ್ಕು ಹಾಗ(ಮುಫ್ರಾಗ=3/4ಪಣ), 1ಪಣ=ಹದಿನಾರು ವೀಸ (ಅಥವ 20 ವೀಸ), 1ಹಾಗ= ಎರಡು ಬೆಳೆ].[48]

3.14.1 ಗದ್ಯಾಣ :

ಗುಂಡ್ಲುಪೇಟೆಯ 14ನೇ ಶತಮಾನಕ್ಕೆ ಸೇರಿದ ಶಾಸನ ಗದ್ಯಾಣ ನಾಣ್ಯಗಳ ಬಗ್ಗೆ ವಿವರಿಸುತ್ತದೆ. ಅಕ್ಷರದಲ್ಲಿ "ಗದ್ಯಾಣಂ ನೂರು ಅಯಿವತ್ತು ಇ ಹೊನ್ನಿನ" ಬಡ್ಡಿಗೆ ಪ್ರತಿ ದಿವಸ ಪೂಜೆ ಕಾರ್ಯ ನಡೆಸುವುದು ಎಂದು ವಿವರಿಸುತ್ತದೆ.[49] ಇದೇ ನಾಣ್ಯಗಳ ವಿಷಯವನ್ನು ಗುಂಡ್ಲುಪೇಟೆ ಶಾಸನ ಸಂಖ್ಯೆ 23[50] ಮತ್ತು 55ರ ಶಾಸನಗಳ ವಿವರಿಸುತ್ತದೆ.[51]

3.14.2 ವರಾಹ :

ಗುಂಡ್ಲುಪೇಟೆ ಶಾಸನ 16ರಲ್ಲಿ ವರಾಹ ನಾಣ್ಯದ ವಿವರವಿದೆ.[52] ಗುಂಡ್ಲುಪೇಟೆ 23ರಲ್ಲಿ "ನಾಲುವತ್ತು ವರಹಂ ತೆರುತಲಕಾಣಿಕೆ" ಎಂದು ವರಹ ನಾಣ್ಯದ ವಿವರವಿದೆ.[53] ಗುಂಡ್ಲುಪೇಟೆ 85ನೇ ಶಾಸನದಲ್ಲಿ ಮರಪುರ್ತ ತೆರಿಗೆಗಳನ್ನು ಅಕ್ಷರದಲ್ಲು ಅಯಿವತ್ತೈದು ವರಹದ ಚತುಸ್ಸೀಮೆ ಬಳ್ಳಿಗುಳ್ಳಗದೆ ಬೆದ್ದಲು ತೋಟ ಸುಂಕ ಹೀಗೆ ನಮೂದಿಸಿರುವುದರಲ್ಲಿ ವರಹದ ಉಲ್ಲೇಖವನ್ನು ಕಾಣಬಹುದಾಗಿದೆ.[54] ಅಲ್ಲದೆ ಗುಂಡ್ಲುಪೇಟೆ 137[55], ಗುಂಡ್ಲುಪೇಟೆ 150[56], ಗುಂಡ್ಲುಪೇಟೆ 149ರಲ್ಲಿಯೂ[57] ವರಹದ ನಾಣ್ಯದ ವಿಚಾರವನ್ನು ವಿವರಿಸುತ್ತದೆ.

3.14.3 ಹೊನ್ನು :

ಗುಂಡ್ಲುಪೇಟೆಯ 16ನೇ ಶಾಸನದಲ್ಲಿ ಹೊನ್ನು ಕೊಟ್ಟು ಉತ್ಸವ ಮಾಡುವುದು ಎಂದು ವಿವರವಿದೆ. ಇದರಿಂದ ಹೊನ್ನು ಎಂಬ ನಾಣ್ಯದ ಬಳಕೆ ಇರುವುದನ್ನು ತಿಳಿಯಬಹುದು.[58] ತೆರಕಣಾಂಬಿಯ ಶಾಸನ ಕ್ರಿ.ಶ.1482ರಲ್ಲಿ ವಿವರಿಸುತ್ತಾ "ಅಂಗಡಿಯ ವೀರದೇವರಿಗೆ ಮಂಗಳವಾರದ ನೈವೇದ್ಯಕ್ಕೆ ಹಣ ಕೊಡುವ ವಿಷಯ ತಿಳಿಸುತ್ತಾ ವಾರ್ಷಿಕ ನಾಲ್ಕು ಯಿಕೆಯು ಪುತ್ತವಳು ಹೊನ್ನಿನ" ಎಂದು ಬರೆಸಿದ್ದಾರೆ. ಇದು ಸಹ ಧಾರ್ಮಿಕ ಕಾರ್ಯದಲ್ಲಿ ನಾಣ್ಯದ ಬಳಕೆಯನ್ನು ತಿಳಿಸುತ್ತದೆ.[59] ಹಾಗೆಯೇ 16ನೇ ಶತಮಾನದ ಗುಂಡ್ಲುಪೇಟೆ 115[60] ಮತ್ತು 16ನೇ ಶತಮಾನದ ಗುಂಡ್ಲುಪೇಟೆಯ 119[61] ಹಾಗೂ 16ನೇ ಶತಮಾನದ ಗುಂಡ್ಲುಪೇಟೆಯ 135[62]ರ ಶಾಸನಗಳಲ್ಲಿಯೂ ಸಹ ಹೊನ್ನು ನಾಣ್ಯದ ಬಳಕೆಯನ್ನು ಕಾಣಬಹುದಾಗಿದೆ.

3.14.4 ಹಣ :

ಗುಂಡ್ಲುಪೇಟೆ 2ರ ಶಾಸನ 'ಮದುವೆ ವಸತಿಗಳಿಗೆ 1 ಹಣ ಕಾಣಿಕೆ ಕೊಡಬೇಕು' ಎಂದು ತಿಳಿಸುತ್ತದೆ. ಈ ಶಾಸನ 19ನೇ ಶತಮಾನಕ್ಕೆ ಸೇರಿದ್ದು 'ಹಣ' ನಾಣ್ಯದ ಬಳಕೆಯನ್ನು ತಿಳಿಸುತ್ತದೆ.[63]

3.14.5 ಹಾಗ :

ಗುಂಡ್ಲುಪೇಟೆ 51ರ ಶಾಸನ 10ನೇ ಶತಮಾನಕ್ಕೆ ಸೇರಿದ 'ಹಾಗ' ಎಂಬ ನಾಣ್ಯದ ವಿವರ ಹೊಂದಿದೆ. ಹೊರೆಯಾಲದ ಈ ಶಾಸನ 'ಬಿಟ್ಟ ಹಾಗ' ಎಂದು ಬರೆಸಿದೆ.[64] ಅದೇ ರೀತಿ ಗುಂಡ್ಲುಪೇಟೆ 149ರ ಕ್ರಿ.ಶ. 1417ರ ಶಾಸನದಲ್ಲೂ ಉಲ್ಲೇಖವಿದೆ.[65]

3.14.6 ಕಂಠಿರಾಯ :

ಮಾದಾಪಟ್ಟಣದ 28 ಅಕ್ಟೋಬರ್ ಕ್ರಿ.ಶ. 1751ರ ಶಾಸನ ಕಂಠೀರಾಯ ಬೆಳೆ ಮತ್ತು ಕಂಠಿರಾಯ ಗುಳಿಗೆ, ಕಂಠೀರಾಯ ವಿಳಾಸದ ಹಣದ ಉಲ್ಲೇಖವಿದೆ.[66] ಅಲ್ಲದೆ

ಪೊನ್ನರೆ ಎಂಬ ಹಲ ನಾಣ್ಯಗಳ ಉಲ್ಲೇಖವಿರುವುದು ಸಹ ತಾಲ್ಲೂಕಿನ ಶಾಸನಗಳಲ್ಲಿ ಗುರುತಿಸಬಹುದು.

3.15 ತೆರಿಗೆಗಳು :

ಪ್ರಾಚೀನ ಕರ್ನಾಟಕದ ಇತಿಹಾಸ ಅಧ್ಯಯನ ಮಾಡುವಾಗ ತೆರಿಗೆಯನ್ನು ಒಂದು ಗಂಭೀರ ವಿಚಾರವಾಗಿ ಅಧ್ಯಯನ ಮಾಡಲಾಗುತ್ತದೆ. ಕಾರಣ ಈ ತೆರಿಗೆಯ ಪ್ರಮಾಣ ಹೆಚ್ಚಾದರೆ ಸರ್ಕಾರಕ್ಕೆ ಹೆಚ್ಚು ಲಾಭ ಬರುತ್ತದೆ. ಇದೇ ಸಮಯದಲ್ಲಿ ಜನಸಮಾನ್ಯರು ತೆರಿಗೆ ಕಟ್ಟಲಾಗದೇ ಬಡತನಕ್ಕೆ ಜಾರಬೇಕಾಗುತ್ತದೆ. ಇದು ಸಹ ಜನಸಾಮಾನ್ಯರ ಜೀವನ ಮಟ್ಟವನ್ನು ನಿರ್ಧರಿಸುತ್ತದೆ. ತೆರಿಗೆಯನ್ನು ವಿಧಿಸುವಲ್ಲಿ ರಾಜ ಮನೆತನಗಳು ಪ್ರಮುಖ ಪಾತ್ರವಹಿಸುವುದಲ್ಲದೆ ಸ್ಥಳೀಯ ಸರ್ಕಾರಗಳು, ನಿಗಮಗಳು, ತಂತಮ್ಮ ಕಾರ್ಯಕ್ಷೇತ್ರಗಳಿಗೆ ತಕ್ಕಂತೆ ತೆರಿಗೆ ವಿಧಿಸುತ್ತಿದ್ದರು.[67] ಹಾಗೆಯೇ ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳು ಸುಮಾರು 34 ತೆರಿಗೆಗಳನ್ನು ಪರಿಚಯಿಸುತ್ತವೆ. ಇವುಗಳ ಪ್ರಕಾರ ಭೂಮಿ, ಮನೆ ಮೊದಲಾದ ಆಸ್ತಿಗಳ ಮೇಲೆ, ಬೆಳೆಗಳ ಮೇಲೆ, ವೃತ್ತಿ, ವ್ಯಾಪಾರ–ವ್ಯವಹಾರ, ಆಹಾರ ಪದಾರ್ಥಗಳಾದ ಅಡಿಕೆ, ವೀಳ್ಯದೆಲೆಗಳು, ಉಪ್ಪು, ಎಳ್ಳು–ಕಡಲೆ, ಹತ್ತಿ ಮತ್ತು ಎಣ್ಣೆ ಮೊದಲಾದ ವಸ್ತುಗಳ ಮೇಲೆ ತೆರಿಗೆ ವಿಧಿಸುತ್ತಿದ್ದರು.

ಮೇಲಿನ ತೆರಿಗೆ ವಿಚಾರಕ್ಕೆ ಸಂಬಂಧಿಸಿದಂತೆ ಮಾದಾಪಟ್ಟಣ ಶಾಸನ ವ್ಯಾಪಾರಿ ಮಾರ್ಗಗಳ ಮೇಲೆ ತೆರಿಗೆ ವಿಧಿಸಿರುವ ವಿವರಣೆಯನ್ನು ನೀಡುತ್ತದೆ.[68] ಇವುಗಳನ್ನು ಸ್ಥಳಾದಾಯ, ಮಾರ್ಗಾದಯ ಮತ್ತು ಮಾಮೂಲಿ ಆದಾಯಗಳೆಂಬ ಹೆಸರಿನಿಂದ ಕರೆಯುತ್ತಾರೆ. ರಾಜನು ದೇಶವನ್ನು ರಕ್ಷಿಸವುದಕ್ಕೆ ಪ್ರಜೆಗಳು ಹಿಂದಿರುಗಿಸಿ ಕೊಡುವ ಪ್ರತಿಫಲವೇ ತೆರಿಗೆಗಳೆಂದು ಗೌತಮ ಸಂಹಿತೆ, ನಾರದ ಸಂಹಿತೆ ಮುಂತಾದ ಕೃತಿಗಳು ಭಾವಿಸುತ್ತವೆ. ಇದರಿಂದ ತೆರಿಗೆಯನ್ನು ವಸೂಲಿ ಮಾಡುವುದು ರಾಜನ ಕರ್ತವ್ಯಗಳಲ್ಲಿ ಒಂದಾಗಿತ್ತು.[69]

ಸಂಪಿಗೆಪುರದ ಕ್ರಿ.ಶ. 1610ರ ಶಾಸನವು 'ಬೆದ್ದಲು ತೋಟ–ಅಡುಉ' ಎಂಬ ತೆರಿಗೆಯ ಉಲ್ಲೇಖವನ್ನು ಹೊಂದಿದೆ.[70] ಹಾಗೆಯೇ ತ್ರಿಯಂಬಕಪುರ ಶಾಸನದಲ್ಲಿ 'ಅಡು' ಎಂಬ ತೆರಿಗೆಯ ಉಲ್ಲೇಖವಿದೆ.[71] ಬೇರಂಬಾಡಿ ಶಾಸನದಲ್ಲಿ ತೆರಕಣಾಂಬಿಯ ಹೊನ್ನಪ್ಪ ಗಣಾಚಾರಿಗಳಿಗೆ 'ಕೂಟದತ' ಎಂದು ಬರೆಸಿದ್ದು ಇದರಲ್ಲಿ 'ಗಣಾಚಾರಿ' ತೆರಿಗೆಯಾಗಿದೆ.[72] ಗುಂಡ್ಲುಪೇಟೆಯ 75ನೇ ಶಾಸನದಲ್ಲಿ 'ಚಾಂದೇಲಿಗೆ'[73] ಗುಂಡ್ಲುಪೇಟೆ 26, ಹೂಣಕಹಳ್ಳಿ ಗ್ರಾಮದ ಶಾಸನದಲ್ಲಿ ಜಾತಿದೆರುಗ, ಜೀಯರತೆರುಗೆ, ಮಾದರೆಕೆ, ವಿರಾಡ[74], ಗುಂಡ್ಲುಪೇಟೆ 176 ಶಿವಪುರ ಶಾಸನದಲ್ಲಿ 'ತಿವಳಮಾರದೇರೆ'[75] ತ್ರಿಯಂಬಕಪುರ ಶಾಸನದಲ್ಲಿ ದಾಸುಗಳ ತೆರಿಗೆ, ಬೆಟ್ಟದಕಾವಲು, ಬೋಗಾರದೆರೆ, ಸಲಯಾವೆತ್ತನೆ[76] ತೆರಿಗೆಗಳ ತ್ರಿಯಂಬಕಪುರ ನಾಯಿಂದರ ತೆರಿಗೆ[77]

ಗುಂಡ್ಲುಪೇಟೆ 157 ಪುತ್ತನಪುರನ ಬಿಟ್ಟಿ[78], ಗುಂಡ್ಲುಪೇಟೆ 135ರಲ್ಲಿ ಜಿನುಗು[79], ಗುಂಡ್ಲುಪೇಟೆ 250 ಬೆಲ್ಲಸುಂಕ, ಪಲರಬೇಡಿಗೆ[80], ಗುಂಡ್ಲುಪೇಟೆ 23 ಬೇ(ಬೆ)ಡಿ(ಡು)ಗೆ[81], ಗುಂಡ್ಲುಪೇಟೆ 3 ಬೇಲಿ[82], ಗುಂಡ್ಲುಪೇಟೆ 39 ಬೋಗಾರಿಕೆ[83], ಹೊರವಾರು ಗುಂಡ್ಲುಪೇಟೆ 80 ಮಾಗಮೆ ವೊಂಮ್ಮು[84], ಗುಂಡ್ಲುಪೇಟೆ 49 ಮಾಗ್ಗ(ಮೊಗ್ಗು), ಮನೆದಣ[85], ಗುಂಡ್ಲುಪೇಟೆ 86 ಮನೆ(ಸುಂಕದೆರೆ)[86], ಗುಂಡ್ಲುಪೇಟೆ 156 ಕೋಡಿಹಳ್ಳಿ ಪುಪ್ಪಿಗೆ ಕಾವಲಿ[87], ಗುಂಡ್ಲುಪೇಟೆ[88] ಸಲಯಾರವೆತ್ತನೆ.[89] ಗುಂಡ್ಲುಪೇಟೆ 136, ಸಿರಿಯಾರವರ್ತನೆ[90], ಗುಂಡ್ಲುಪೇಟೆ 114, 115 ಮತ್ತು 119 ಶಾಸನಗಳಲ್ಲಿ ತೆರೆಕಾಣಿಕೆ ಎಂಬ ಕಂದಾಯ[91], ಗುಂಡ್ಲುಪೇಟೆ 142 ಪಣಪುಲ್ಲು[92] ತೆರಿಗೆಗಳ ಹೆಸರನ್ನು ನಮೂದಿಸಿವೆ.

ಅಡಿಟಿಪ್ಪಣಿಗಳು :

1. ಬಾ.ರಾ. ಗೋಪಾಲ್, 'ಎಪಿಗ್ರಾಫಿಯ ಕರ್ನಾಟಕ ಸಂಪುಟ 03', ಪು.596.
2. ಅದೇ, ಪು.639.
3. ಅದೇ, ಪು.581.
4. ಅದೇ, ಪು.635.
5. ಡಾ. ಎಂ.ಎಸ್. ನರೇಗಲ್ಲ, 'ಉತ್ತರಗದಗ ಜಿಲ್ಲೆಯ ಶಾಸನಗಳ: ಒಂದು ಅಧ್ಯಯನ', ಪು.214.
6. ಡಾ. ನಾಯಕರ ಹಲುಗಪ್ಪ, 'ಶಾಸನ ಪ್ರಕಾರ ಮತ್ತು ಅವುಗಳ ಮಹತ್ವ', ಪು.12.
7. ಬಾ.ರಾ. ಗೋಪಾಲ್, ಪು.595
8. ಅದೇ, ಪು.639.
9. ಅದೇ, ಪು.635.
10. ಅದೇ, ಪು.641.
11. ಅದೇ, ಪು.601
12. ಅದೇ, ಪು.575.
13. ಅದೇ, ಪು.575.
14. ಡಾ. ನಾಯಕರ ಹಲುಗಪ್ಪ, ಪು.13.
15. ಬಾ.ರಾ. ಗೋಪಾಲ್, ಪು.639.
16. ಅದೇ, ಪು.642.
17. ಅದೇ, ಪು.581.
18. ಡಾ. ನಾಯಕರ ಹಲುಗಪ್ಪ, ಪು.13.
19. ಬಾ.ರಾ. ಗೋಪಾಲ್, ಪು.596.
20. ಪಿ.ಸಿ. ರಾಜಶೇಖರ್ ಪಡಗೂರು, 'ಬೇರಂಬಾಡಿ ಕೆರತಡಿ ಮಹದೇಶ್ವರರು', ಪು.575.
21. ಬಾ.ರಾ. ಗೋಪಾಲ್, ಪು.575.
22. ಅದೇ, ಪು.596.

23. ಡಾ. ಪಳನಿಸ್ವಾಮಿ, 'ಗುಂಡ್ಲುಪೇಟೆ ತಾಲ್ಲೂಕಿನ ಒಂದು ಸಾಂಸ್ಕೃತಿಕ ಅಧ್ಯಯನ', ಪು.73.
24. ಬಾ.ರಾ. ಗೋಪಾಲ್, ಪು.575.
25. ಅದೇ, ಪು.630.
26. ಅದೇ, ಪು.639.
27. ಡಾ. ಎಂ. ಚಿದಾನಂದಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಪು.404.
28. ಬಾ.ರಾ. ಗೋಪಾಲ್, ಪು.572.
29. ಅದೇ, ಪು.595.
30. ಅದೇ, ಪು.618.
31. ಅದೇ, ಪು.978.
32. ಡಾ. ಪಳನಿಸ್ವಾಮಿ, ಪು.85.
33. ಬಾ.ರಾ. ಗೋಪಾಲ್, ಪು.624.
34. ಡಾ. ಪಳನಿಸ್ವಾಮಿ, ಪು.85.
35. ಬಾ.ರಾ. ಗೋಪಾಲ್, ಪು.592.
36. ಡಾ. ಚಿದಾನಂದಮೂರ್ತಿ, ಪು.439.
37. ಬಾ.ರಾ. ಗೋಪಾಲ್, ಪು.565.
38. ಡಾ.ಎಂ. ಚಿದಾನಂದಮೂರ್ತಿ, ಪು.437.
39. ಬಾ.ರಾ. ಗೋಪಾಲ್, ಪುಟ 597.
40. ಅದೇ, ಪು.583.
41. ಅದೇ, ಪು.630.
42. ಅದೇ, ಪು.565
43. ಅದೇ, ಪು.580.
44. ಅದೇ, ಪು.568.
45. ಅದೇ, ಪು.580.
46. ಅದೇ, ಪು.625.

47. ಡಾ. ಚಿದಾನಂದಮೂರ್ತಿ, ಪು.433.

48. ಡಾ. ಚಿದಾನಂದಮೂರ್ತಿ, ಪು.434.

49. ಬಾ.ರಾ. ಗೋಪಾಲ್, ಪು.568.

50. ಅದೇ, ಪು.570.

51. ಅದೇ, ಪು.583.

52. ಅದೇ, ಪು.568.

53. ಅದೇ, ಪು.570.

54. ಅದೇ, ಪು.594.

55. ಅದೇ, ಪು.612.

56. ಅದೇ, ಪು.620.

57. ಅದೇ, ಪು.618.

58. ಅದೇ, ಪು.568.

59. ಅದೇ, ಪು.593.

60. ಅದೇ, ಪು.604.

61. ಅದೇ, ಪು.605.

62. ಅದೇ, ಪು.610.

63. ಅದೇ, ಪು.564.

64. ಅದೇ, ಪು.582.

65. ಅದೇ, ಪು.618.

66. ಅದೇ, ಪು.592.

67. ಎಂ.ಸಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟ, 'ಕರ್ನಾಟಕ ಇತಿಹಾಸ ದರ್ಶನ', ಪು.979.

68. ಬಾ.ರಾ. ಗೋಪಾಲ್, ಪು.592.

69. ಡಾ. ಪಳನಿಸ್ವಾಮಿ, ಪು.78.

70. ಬಾ.ರಾ. ಗೋಪಾಲ್, ಪು.596.

71. ಅದೇ, ಪು.612.

72. ಅದೇ, ಪು.641.

73. ಅದೇ, ಪು.590.

74. ಅದೇ, ಪು.592.

75. ಅದೇ, ಪು.631.

76. ಅದೇ, ಪು.609.

77. ಅದೇ, ಪು.575.

78. ಅದೇ, ಪು.625.

79. ಅದೇ, ಪು.610.

80. ಅದೇ, ಪು.620.

81. ಅದೇ, ಪು.570.

82. ಅದೇ, ಪು.564.

83. ಅದೇ, ಪು.514.

84. ಅದೇ, ಪು.576.

85. ಅದೇ, ಪು.592.

86. ಅದೇ, ಪು.581.

87. ಅದೇ, ಪು.595.

88. ಅದೇ, ಪು.529.

89. ಅದೇ, ಪು.597.

90. ಅದೇ, ಪು.611.

91. ಅದೇ, ಪು.603.

92. ಅದೇ, ಪು.579.

ಅಧ್ಯಾಯ-4

ಧಾರ್ಮಿಕ ಪರಿಸ್ಥಿತಿ

ಅಧ್ಯಾಯ-4

ಧಾರ್ಮಿಕ ಪರಿಸ್ಥಿತಿ

ಮಾನವಕೋಟಿಗಿರುವ ಹೃದಯಗುಣ ವಿಕಾಸವಾದಂತೆ, ಭಾರತೀಯ ದರ್ಶನಶಾಸ್ತ್ರ ಬೆಳೆದು ಬಂದಿದೆ. ಈ ತತ್ವಶಾಸ್ತ್ರದ ಮೂಲಗಳೆಂದರೆ ಪ್ರೇಮ ಮತ್ತು ಆಹಿಂಸೆಗಳಾಗಿವೆ. ಹಾಗೆಯೇ ಯಾವುದೇ ಪ್ರದೇಶಗಳ ಸಂಪತ್ತು ಸಂಸ್ಕೃತಿಗೆ ರಾಜ್ಯಭಾರಕ್ಕೆ ಹೆಸರುವಾಸಿಯಾದಂತೆ ಧರ್ಮಸಹಿಷ್ಣುತೆಗೂ ಹೆಸರುವಾಸಿಯಾಗಿದೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿಯೂ ಸಹ ಧಾರ್ಮಿಕ ಪರಿಸ್ಥಿತಿ ವೈವಿಧ್ಯಮಯವಾಗಿತ್ತು. ಇಲ್ಲಿ ವೈಷ್ಣವ, ಜೈನ, ಶೈವ, ಬೌದ್ಧ ಧರ್ಮಗಳ ಅಸ್ಥಿತ್ವದ ಬಗ್ಗೆ ಸಾಹಿತ್ಯ ಗ್ರಂಥಗಳಲ್ಲಿ ವಿವರಿಸಿದ್ದಾರೆ. ಆದರೆ ಶಾಸನಗಳ ಪ್ರಕಾರ ಜೈನ, ವೈಷ್ಣವ, ಶೈವ ಧರ್ಮಗಳು ಅಸ್ಥಿತ್ವದಲ್ಲಿದ್ದವು ಎಂದು ತಿಳಿಯಬಹುದಾಗಿದೆ. ಈ ತಾಲ್ಲೂಕಿನ ರಾಜರುಗಳು ತಮ್ಮ ಆಳ್ವಿಕೆ ಕಾಲದಲ್ಲಿ ಧರ್ಮವನ್ನು ಉಳಿಸಿ, ಬೆಳಸಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಮೂಲಕ ಜನಸಾಮಾನ್ಯರ ಮೇಲೆ ಪ್ರಭಾವವನ್ನು ಬೀರಿ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.[1]

4.1 ಗಂಗರ ಕಾಲದ ಧಾರ್ಮಿಕ ಪರಿಸ್ಥಿತಿ :

ತಾಲ್ಲೂಕಿನಲ್ಲಿ ಆಡಳಿತ ನಡೆಸಿರುವ ಗಂಗ ಅರಸರಾದ ಮಾಧವ ಅವನೀತ, ದುರ್ವಿನೀತ, ಶ್ರೀಪುರುಷರನ್ನು ಧರ್ಮ ಮಹಾರಾಜರೆಂದು ಕರೆಯಲಾಗಿದೆ. ಇವರು ವೈದಿಕ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರೆಂಬುದು ಶಾಸನಗಳಿಂದ ತಿಳಿಯಬಹುದಾಗಿದೆ. ದುರ್ವಿನೀತನು ವೈಷ್ಣವರೆಂದು ಡಾ. ಶ್ರೀಕಂಠಶಾಸ್ತ್ರಿಗಳು ವಾದಿಸಿರುವುದಲ್ಲದೆ ಆರಂಭದ ಅರಸರೆಲ್ಲರೂ ವೈದಿಕರೇ ಎಂದು ಪ್ರತಿಪಾದಿಸಿದ್ದಾರೆ. ಆದರೆ ಗಂಗರ ಕಾಲದಲ್ಲಿ ಜೈನ ಮತ್ತು ಶೈವ ಧರ್ಮಗಳೂ ಸಹ ಪ್ರಬಲವಾಗಿದ್ದವು.

ಗುಂಡ್ಲುಪೇಟೆ ತಾಲ್ಲೂಕಿನ ಇತಿಹಾಸವು ಶಾಸನಗಳ ಪ್ರಕಾರ ಗಂಗರಿಂದ ಆರಂಭವಾಗುತ್ತದೆ. ಇವರ ಕಾಲವನ್ನು ಗುರುತಿಸುವ ಶಾಸನಗಳು ಧಾರ್ಮಿಕ ವಿಚಾರಗಳನ್ನು ವಿವರಿಸುತ್ತವೆ. ಗಂಗರು ವೈಷ್ಣವ, ಶೈವ, ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರು ಎನ್ನುವುದು ತಿಳಿಯುತ್ತದೆ. ಹಾಗೆಯೇ ಮೇಲಿನ ಸಮುದಾಯಗಳ ದೇವಸ್ಥಾನಗಳಿಗೆ ದಾನ ನೀಡುವುದರ ಮೂಲಕ ಇವರು ಮನ್ನಣೆ ಪಡೆದಿದ್ದರು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಕಮರಹಳ್ಳಿಯ 8 ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ ಮಾದಪ್ಪನು ಅರಲೂರ ಗಾನಗಾವಳಿಯ ಗುಣಸಾಗರ ತಮ್ಮಡಿಗೆ ದಾನ ನೀಡಿರುವ ವಿಚಾರವಿದೆ. ತಮ್ಮಡಿಗಳೆಂದರೆ ಶಿವಾರ್ಚಕರು ಎಂದು ಅರ್ಥ ಇದರಲ್ಲಿ ಶೈವ ಅರ್ಚಕನಿಗೆ

ಅಕ್ಕೈಲೂರು ಮಗ ಮಾದಪ್ಪನು ದಾನ ನೀಡಿರುವುದನ್ನು ಗಮನಿಸಿದ್ದರೆ ಗಂಗರು ಆರಂಭದಲ್ಲಿ ಶೈವಧರ್ಮಕ್ಕೆ ಪ್ರೋತ್ಸಾಹನೀಡಿದರೆಂದು ತಿಳಿಯುತ್ತದೆ.[2] ಹಾಗಾಗಿಯೇ ಡಾ. ಶ್ರೀಕಂಠಶಾಸ್ತ್ರಿಯವರ (ಪ್ರಾರಂಭದ ಅರಸರೆಲ್ಲ ವೈಷ್ಣವರು) ಮಾತನ್ನು ಈ ಸಂದರ್ಭದಲ್ಲಿ ಸಮರ್ಥಿಸಬಹುದು. ಕಮರಹಳ್ಳಿಯ 67 ನೇ ಶಾಸನದ ಹಿಂಭಾಗದಲ್ಲಿ 'ಪೋರಲ್ ಕುಟುಂಬಕ್ಕೆ ದಾನ ನೀಡಿರುವ ವಿಚಾರವನ್ನು ತಿಳಿಸುವುದರ ಶೈವಧರ್ಮವನ್ನು ವಿವರಿಸುತ್ತದೆ.[3] ಚಿಕ್ಕಕಾಟಿಯ ಪಾಳುಬಿದ್ದ ಚಂದ್ರಶೇಖರ ದೇವಸ್ಥಾನದ ಬಳಿ 9ನೇ ಶತಮಾನದ ಶಾಸನ ದೊರೆತಿದ್ದು ಇದು ತಾಲ್ಲೂಕಿನ ಹಳೆಯ ಶಾಸನಗಳಲ್ಲಿ ಒಂದಾಗಿದೆ. ಇದು ಗಂಗರ ಸತ್ಯವಾಕ್ಯ ಪೆರ್ಮಾಡಿಯ ಆಳ್ವಿಕೆ ಕಾಲದಲ್ಲಿ ಭೂತರಸನು ತೊರೆಕಟ್ಟಿಯ ಪಡಿಮಾಲೆಯಲ್ಲಿರುವ ನೆಲೆಗುರು ಎಂಬ ಹಳ್ಳಿಯನ್ನು ದೇಣಿಗೆಯಾಗಿ ನೀಡಿದನು ಎನ್ನುವುದನ್ನು ವಿವರಿಸುತ್ತದೆ. ಇದು ಸಹ ಗಂಗರ ಶೈವ ದೇವಾಲಯದ ವಿಚಾರ ತಿಳಿಸುತ್ತದೆ.[4]

4.2 ಚೋಳರ ಕಾಲದ ಧಾರ್ಮಿಕ ಪರಿಸ್ಥಿತಿ :

ದಕ್ಷಿಣ ಭಾರತದ ಇತಿಹಾಸದಲ್ಲಿ ಚೋಳರು ಮಹತ್ವದ ಅಧ್ಯಾಯವನ್ನು ಆರಂಭಿಸಿದರು ಇವರು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಆಡಳಿತ ನಡೆಸಿರುವ ಬಗ್ಗೆ ಶಾಸನಗಳು ವಿವರಿಸುತ್ತವೆ. ಗುಂಡ್ಲುಪೇಟೆ 57 ಶಾಸನದಲ್ಲಿ ರಾಜೇಂದ್ರ ಚೋಳನ ಆಡಳಿತದ ಬಗ್ಗೆ ಪ್ರಸ್ತಾಪಿಸುತ್ತದೆ.[5] ಗುಂಡ್ಲುಪೇಟೆ 203ರ ಹಂಗಳ ಶಾಸನ 10ನೇ ಶತಮಾನದಲ್ಲಿ ಪ್ರಕಟವಾಗಿದೆ (ಚಿತ್ರ–16). ಇದು ಜೈನ ಮತಿಯ ಶಿಷ್ಯ ಸರ್ವಲೋಕಾಶ್ವರಾಯನ ಹೆಂಡತಿ ಚಿಕ್ಕ ಬೋಗಟ್ಟಿ ಎಂಬುವವಳು ಆಕೆಯ ತಾಯಿ ಮಾರಟ್ಟಿಯು ಚಾವೀಸ ತೀರ್ಥಂಕರರ ಮೂರ್ತಿಗಳನ್ನು ದಾನ ನೀಡಿರುವುದನ್ನು ತಿಳಿಸುತ್ತದೆ. ಇದು ಜೈನಧರ್ಮಕ್ಕೆ ಚೋಳರು ನೀಡುರುವ ಪ್ರೋತ್ಸಾಹಕ್ಕೆ ದಾಖಲೆಯಾಗಿದೆ.[6]

ಕೆಲಸೂರು ಶಾಸನವು ಒಂದನೆಯ ಚೋಳನನ್ನು ಕೋಟಿಗಂಗದೇವ ಎಂದು ಸಂಬೋಧಿಸಿದೆ ಇವನ ಆಳ್ವಿಕೆಯ 14 ನೇ ವರ್ಷದಲ್ಲಿ ವಿಕ್ರಮಕೋಟೆ ಪೆರ್ಮಾದಿ ಗಾವುಂಡನೆಂಬುವನು ಇಲ್ಲಿ ಸರ್ವಲೋಕೇಶ್ವರಾಯ ಬಸದಿಗೆ ದತ್ತಿ ಬಿಟ್ಟ ವಿಚಾರವನ್ನು ಶಾಸನ ವಿವರಿಸುತ್ತದೆ.[7] ಕಂದಗಾಲ ಶಾಸನವು ಸೋಮೇಶ್ವರ ದೇವರಿಗೆ ದಾನ ನೀಡಿದ ವಿಚಾರಹೊಂದಿದೆ.[8] ಇವುಗಳನ್ನು ಗಮನಿಸಿದರೆ ತಮಿಳುನಾಡಿನಲ್ಲಿ ಆಡಳಿತ ನಡೆಸಿದ ಚೋಳ ಸಾಮ್ರಾಜ್ಯವು ಗುಂಡ್ಲುಪೇಟೆ ತಾಲ್ಲೂಕಿನ ಭಾಗದಲ್ಲಿ ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡುವುದು ತಿಳಿದುಬರುತ್ತದೆ.

4.3 ಹೊಯ್ಸಳ ಕಾಲದ ಧಾರ್ಮಿಕ ಪರಿಸ್ಥಿತಿ :

ಕರ್ನಾಟಕದಲ್ಲಿ ಆಡಳಿತ ನಡೆಸಿದ ಹೊಯ್ಸಳರ ಕಾಲದಲ್ಲಿ ಜೈನ, ಬೌದ್ಧ, ಶೈವ, ವೈಷ್ಣವ ಪಂಥಗಳು ಪ್ರಚಲಿತದಲ್ಲಿದ್ದವೆಂದು ಶಾಸನಗಳಿಂದ ತಿಳಿದು ಬರುತ್ತದೆ.

ವೈದಿಕ ಧರ್ಮ ಜನಪ್ರಿಯವಾಗಿತ್ತು. ಅನೇಕ ಹಿಂದುಳಿದ ವರ್ಗಗಳ ಜನರು ಸಾಮಾಜಿಕ ಉನ್ನತಿ ಸಾಧಿಸುವ ಸಲುವಾಗಿ ಜೈನರಾದರು.[9] ಗುಂಡ್ಲುಪೇಟೆ ತಾಲ್ಲೂಕಿನ ಆಡಳಿತ ನಡೆಸಿದ ಹೊಯ್ಸಳರು ವೈಷ್ಣವ ಮತಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದಾರೆ ಎಂಬುದು ಈ ಭಾಗದ ಶಾಸನಗಳಿಂದ ತಿಳಿಯುತ್ತದೆ. ಬೆಳಚಲವಾಡಿಯ ರಾಮಲಿಂಗ ದೇವಸ್ಥಾನದ ದಕ್ಷಿಣ ಕಡೆಯಿರುವ ಶಾಸನ ಕ್ರಿ.ಶ. 1171 ರಲ್ಲಿ ಹೊರಡಿಸಿದ್ದು ಹೊಯ್ಸಳರ ಅರಸ ನರಸಿಂಹ ದೇವನು ಬೆಳಚವಾಡಿಯ ಸೇತಳ ರಾಮನಾಥದೇವರಿಗೆ ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ.[10] ಇದು ವಿಷ್ಣುವರ್ದನನ ನಂತರ ಬರೆಸಿದ ದಾನ ಶಾಸನವಾಗಿದೆ. ಆದ್ದರಿಂದಲೇ ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ವಿವರಿಸುತ್ತದೆ. ನಿಟ್ರೆಯ ಶಾಸನ ಕ್ರಿ.ಶ. 1162–63 ರ ಕಾಲದಾಗಿದ್ದು ಹೊಯ್ಸಳರ ವಿರನರಸಿಂಹನ ಮಹಾಪ್ರಧಾನ ಸರ್ವಾಧಿಕಾರಿಯಾದ ಮಲ್ಲಿಕಾರ್ಜುನ ದಣ್ಣಾಯಕನು ಹಾಗೂ ಎಲ್ಲ ಪ್ರಭು ಗಾವುಂಡರು ಚಿತ್ರಭಾನು ಸಂವತ್ಸರದ ವೃಷಭ ಮಾಸದಲ್ಲಿ ನೀರಿನ ವ್ಯವಸ್ಥೆ ಮಾಡಿದರು "ಇದು ವಾಸುದೇವನ ಕುರಿತಾಗಿದ್ದು"[11] ಇದು ಅವರು ವೈಷ್ಣವ ದೇವಾಲಯಕ್ಕೆ ನೀಡಿದ ದಾನವಾಗಿದ್ದು ಹೊಯ್ಸಳರ ವೈಷ್ಣವಧರ್ಮದ ಉಲ್ಲೇಖವಿದೆ.

ಕಲ್ಲಹಳ್ಳಿಯ ಶಾಸನ ಕುಡುಗನಾಡಿನ ಶ್ರೀ ವಿಜಯನಾರಾಯಣ ದೇವರಿಗೆ ನಿತ್ಯ ಸಮಾರಾಧನೆಗಾಗಿ ದಾನ ನೀಡಿದ ಕ್ರಿ.ಶ. 1221 ರ ಶಾಸನ ಹೊಯ್ಸಳ ಮಹಾಪ್ರಧಾನ, ಸಬ್ಬಾಧಿಕಾರಿ, ಬಾಹತರ, ನಿಯೋಗಾಧಿಪತಿ ಮುಂತಾದ ಬಿರುದುಗಳನ್ನು ಹೊಂದಿದ ಶ್ರೀ ರಂಗಣ್ಣದಣ್ಣಾಯಕನಿಗೆ ಸೇರಿದ್ದು[12] ಹಾಗೆಯೇ ಹಂಗಳದ 13ನೇ ಶತಮಾನದ ಶಾಸನ ಹೊಯ್ಸಳರ ಕಾಲಕ್ಕೆ ಸೇರಿದ್ದು ತಮಿಳು ಭಾಷೆಯಲ್ಲಿ ಪ್ರಕಟವಾಗಿದೆ. ಇದು ವರದರಾಜಸ್ವಾಮಿ ದೇವಸ್ಥಾನಕ್ಕೆ ಸಂಬಂಧಿಸಿದ್ದು ಹೊಯ್ಸಳರು ವೈಷ್ಣವಧರ್ಮಕ್ಕೆ ನೀಡಿದ ಪ್ರೋತ್ಸಾಹವನ್ನು ವಿವರಿಸುತ್ತದೆ.[13]

ಹೊಯ್ಸಳರ ಕಾಲದ ಗುಂಡ್ಲುಪೇಟೆ 03 ರ ಶಾಸನವು 12 ನೇ ಶತಮಾನದ ಕುಮಾರ ಲಕ್ಷ್ಮಣದಣ್ಣಾಯಕನ ಕುಡುಗುನಾಡು 300 (ತೆರಕಣಾಂಬಿ) ಪ್ರದೇಶದ ಆಳ್ವಿಕೆ ನಡೆಸುತ್ತಿದ್ದಾಗ ಹರದಾಗುವುಂಡನು ತುಪ್ಪುರಿನಲ್ಲಿ ಜೀನಾಲಾಯವನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತದೆ.[14] ಅಲ್ಲದೆ ದಣ್ಣನಾಯಕನು ಜೀನಾಲಯಕ್ಕೆ ಮಡಹಳ್ಳಿ ಗ್ರಾಮವನ್ನು ಕುಡುಗನಾಡಿನ ಸಮಸ್ತ ಪ್ರಭುಗಾವುಂಡರು ಕನಕನಂದಿ ಪಂಡಿತರಿಗೆ ದಾನ ಕೊಟ್ಟಿರುವ ವಿಷಯವಿದೆ. ಇದರಿಂದ ಹೊಯ್ಸಳರು ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರು ಎಂಬುದು ತಿಳಿಯುತ್ತದೆ.

4.4 ತೆರಕಣಾಂಬಿಯ ಪಾಳೇಗಾರರ ಧಾರ್ಮಿಕ ಪರಿಸ್ಥಿತಿ :

ತೆರಕಣಾಂಬಿ ಪಾಳೇಗಾರರು ಹೊಯ್ಸಳರ ಸಾಮಂತರಾಗಿದ್ದರಿಂದ ಹೊಯ್ಸಳರಂತೆ ವೈಷ್ಣಧರ್ಮಿಯರಿಗೆ ಪ್ರೋತ್ಸಾಹ ನೀಡಿದ್ದರು. ಜೊತೆಗೆ ಹೊಯ್ಸಳರು

ತೆರಕಣಾಂಬಿಯ ಅಧಿಕಾರಿಗಳನ್ನು ನೇಮಿಸುವಾಗ ಸ್ವಧರ್ಮೀಯರನ್ನೇ ನೇಮಿಸಿರುವುದು ಅವರ ದಾನ-ದತ್ತಿ ಶಾಸನಗಳಿಂದ ತಿಳಿಯಬಹುದು.[15] ಕಣ್ಣೇಗಾಲದ ಶಾಸನ ಕ್ರಿ.ಶ. 1315 ರಲ್ಲಿ ಮಾಧವದಣ್ಣನಾಯಕನು ಗೋವರ್ಧನ ಗಿರಿಯಲ್ಲಿ (ಗೋಪಾಲಸ್ವಾಮಿ ಬೆಟ್ಟ) ಗೋಪಿನಾಥ ದೇವರನ್ನು ಪ್ರತಿಷ್ಠಾಪನೆಮಾಡಿದ್ದು ಪೂಜೆಗಾಗಿ ಕಣ್ಣೆಗಾಲು ಗ್ರಾಮವನ್ನು ದತ್ತಿಬೆಟ್ಟ ವಿಚಾರವನ್ನು ಹೇಳುತ್ತದೆ.[16] ಹಾಗೆಯೇ ರಾಘವಪುರದ ಶಾಸನಸಂಖ್ಯೆ 40 ರಲ್ಲಿ ಪದಿನಾಲ್ಕುನಾಡನ್ನು ಕೇತೆಯ ದಣ್ಣಾಯಕ ದಂಡಾಧೀಪತಿಸಂಜೀಯತ್ ಪರಿಹ್ರುತನು "ಶ್ರೀ ಶರಣ ನಾರಾಣದೇವನಿಗೆ ಕುಡುಗ"[17] ಈ ಮೇಲಿನ ಸಾಲುಗಳು ತೆರಕಣಾಂಬಿಯ ಪಾಳೇಗಾರರು ವೈಷ್ಣವ ಧರ್ಮಕ್ಕೆ ನೀಡಿದ ಪ್ರೋತ್ಸಾಹವನ್ನು ತಿಳಿಸುತ್ತವೆ.

ತೆರಕಣಾಂಬಿ ರಾಜ್ಯ ನಾಡೋಳಗಣ ಗೊಮ್ಮಟಹಳ್ಳಿ ಮತ್ತು ಕಾಚೇಗೌಡನ ಮಾದೇಹಳ್ಳಿಗಳನ್ನು ದತ್ತಿ ಬಿಟ್ಟ ವಿಚಾರವಿದೆಯನ್ನೊಳಗೊಂಡಿದೆ. ಇದರಲ್ಲಿಯೂ ಸಹ ಹೊಯ್ಸಳರ ವೀರಬಲ್ಲಾಳನ ಹೆಸರು ಉಲ್ಲೇಖಗೊಂಡಿರುವುದು ಪ್ರಮುಖ ವಿಚಾರವಾಗಿದೆ.[18] ಗುಂಡ್ಲುಪೇಟೆ ಚೆನ್ನಮಲ್ಲಪುರದ ಶಾಸನ ಕ್ರಿ.ಶ. 1430 ರಲ್ಲಿ ಒರೆಸಲಾಪಡಿದು ಶೈವಧರ್ಮದ ಪ್ರಮುಖ ಸ್ಥಳವಾದ ನಂಜನಗೂಡಿನ ನಂಜುಡೇಶ್ವರ ದೇವರಿಗೆ ಕುಡುಗುನಾಡ ಅಲತ್ತೂರು ಗ್ರಾಮವನ್ನು ದಾನಬಿಟ್ಟ ವಿಚಾರವನ್ನು ತಿಳಿಸುತ್ತದೆ. ಇದರಿಂದ ತೆರಕಣಾಂಬಿಯ ಪಾಳೆಗಾರರು ಶೈವಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರು ಎಂದು ತಿಳಿದುಬರುತ್ತದೆ.[19] ಹಾಗೂ ತೆರಕಣಾಂಬಿಯ ಕ್ರಿ.ಶ. 1429ರ ತೆರಕಣಾಂಬಿ ಗ್ರಾಮದ ಶಾಸನದ ಪ್ರಕಾರ ವೈಷ್ಣವ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದಾರೆ.[20] ಸೋಮಹಳ್ಳಿ ಶಾಸನ ಕ್ರಿ.ಶ. 1476ರಲ್ಲಿ ಉತ್ತರದಿಂದ ದಕ್ಷಿಣದ ಕಡೆಗೆ ನೂರೊಂದು ವಿರಕ್ತರು ಬಂದರು ಅವರಲ್ಲಿ ಶ್ರೀ ಮದ್ದಾನೆ ಶಾಂತಯ್ಯನವರು ತೆರಕಣಾಂಬಿಗೆ ಬಂದ ಬಗ್ಗೆ ವಿವರಣೆಯಿದೆ. ಇದು ವೀರಶೈವ ಧರ್ಮ ಪ್ರಾಬಲ್ಯಕ್ಕೆ ಬಂದಿರುವುದನ್ನು ತಿಳಿಸುತ್ತದೆ.[21] ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ತೆರಕಣಾಂಬಿಗ್ರಾಮದಲ್ಲಿ 14 ಶಾಸನಗಳು ದೊರೆತಿರುವುದು ವಿಶೇಷವಾಗಿದೆ.[22]

4.5 ವಿಜಯನಗರ ಕಾಲದ ಧಾರ್ಮಿಕ ಪರಿಸ್ಥಿತಿ :

ದೆಹಲಿಯ ಸುಲ್ತಾನರ ವಿನಾಶಕಾರಿ ದಂಡಯಾತ್ರೆಗಳ ನಂತರ ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯ ಧರ್ಮರಕ್ಷಣೆಯ ಜವಬ್ದಾರಿಯನ್ನು ಹೊತ್ತುಕೊಂಡಿತು. ಹಿಂದು ಧರ್ಮದ ಸಹಿಷ್ಣುತ ನೀತಿಗನುಗುಣವಾಗಿ ವಿಜಯನಗರ ಅರಸರು ಸಕಲ ಸಂಪ್ರದಾಯಗಳಿಗೂ ಪ್ರೋತ್ಸಾಹ ಬೆಂಬಲ ನೀಡಿದರು. ಪುತ್ತನಪುರ ಶಾಸನದಲ್ಲಿ ಅರಸ ವೆಂಕಟಪತಿರಾಯನ ಆಳ್ವಿಕೆಗೆ ಸಂಬಂಧಿಸಿದ ಕೆಂಪನರಸಿಂಹ ಶೆಟ್ಟಿ ಎಂಬಾತನು ತೆರಕಣಾಂಬಿಯ ನಡುಕೇರಿಯಲ್ಲಿ ಹನುಮಂತ ದೇವರ ನೂತನ ಮಂಟಪ ಕಟ್ಟಿಸಿ ಹನುಮಂತ ದೇವರನ್ನು ಪ್ರತಿಷ್ಟಾಪಿಸಿ, ಹಂಗಳ ಸ್ಥಳ ತೆರಕಣಾಂಬಿ ಸೀಮೆಯ ಪುತ್ತನಪುರವನ್ನ ದಾನವಾಗಿ ಬಿಟ್ಟ ವಿಚಾರವಿದೆ.[23] ಹಾಗೆಯೇ ತೆರಕಣಾಂಬಿಯ

ಶಾಸನದಲ್ಲೂ ಈ ವಿಷಯದ ಪ್ರಸ್ತಾಪವಿದೆ.[24] ಗೋಪಾಲಪುರ ಶ್ರೀ ನಿರಚಕ್ಕೆ ಕಂಪಣ ಒಡೆಯರ ಕುಮಾರ ನಂಜಒಡೆಯರು ಪಾಲ್ಗುಣೇಶ್ವರ ದೇವರಿಗೆ ದತ್ತಿಬಿಟ್ಟು ವಿಚಾರವನ್ನು ತಿಳಿಸುತ್ತದೆ.[25] ತೆರಕಣಾಂಬಿ ಶಾಸನವು ಕ್ರಿ.ಶ. 1526 ರಲ್ಲಿ ಕೃಷ್ಣದೇವರಾಯನಿಗೆ ಪುಣ್ಯವಾಗಲೆಂದು ಮಹಾಪ್ರಧಾನ ಸಾಳುವ ಗೋವಿಂದ ರಾಜಯ್ಯನು ತೆರಕಣಾಂಬಿಯ ಅಳ್ವಾದೇವರ ರಥೋತ್ಸವಕ್ಕೆ ದಾನ ನೀಡಿದ ವಿಚಾರ ತಿಳಿಸುತ್ತದೆ. ಹೀಗೆ ಹಲವು ಶಾಸನಗಳು ವಿಜಯನಗರದ ಅರಸರು ತಮ್ಮ ಆಡಳಿತ ಕಾಲದಲ್ಲಿ ವೈಷ್ಣವ ಧರ್ಮಕ್ಕೆ ಪ್ರೋತ್ಸಾಹ ನೀಡಿರುವುದನ್ನು ದೃಢಪಡಿಸುತ್ತವೆ.[26]

ಗುಂಡ್ಲುಪೇಟೆಯ ಕ್ರಿ.ಶ.1513ರ ಕೋಡಹಳ್ಳಿ ಶಾಸನದಲ್ಲಿ ಇರುವಂತೆ ಪ್ರಮುಖ ಕರ್ಪೂರ ದೇವರಿಗೆ ಅಂಗ–ರಂಗ ವೈಭವಕ್ಕಾಗಿ ಅಮೃತ ಪಡಿಗಾಣಿದಾಗ ಮಾಡಿದ ವಿಷಯ ತಿಳಿಸುತ್ತದೆ.[27] ಗೋಪಾಲಪುರ ಶಾಸನದಿಂದ ಗೋಪಿನಾಥ ದೇವರ ಅಂಗಬೋಗ ರಂಗಭೋಗಕ್ಕಾಗಿ ಹಳ್ಳಿಯನ್ನು ದಾನಬಿಟ್ಟ ವಿಚಾರ ತಿಳಿದುಬರುತ್ತದೆ.[28] ಹೀಗೆ ವಿಜಯನಗರ ಆಡಳಿತದಲ್ಲಿ ಈ ಭಾಗದ ಹಲವಾರು ದೇವಾಲಯಗಳಿಗೆ ದಾನ ದತ್ತಿ ನೀಡಿದ್ದಾರೆ. ಹಾಗೆಯೇ ವೀರಶೈವ ಮಠಗಳಿಗೂ ಕೊಡುಗೆ ನೀಡಿದ್ದಾರೆ (ಚಿತ್ರ–17). ಅದರಲ್ಲಿ ಪ್ರಮುಖವಾದವುಗಳೆಂದರೆ ಹಂಗಳದಲ್ಲಿ ದೊರೆತಿರುವ ವೀರ ವೆಂಕಟಪತಿರಾಯನಿಗೆ ಸೇರಿದ ಶಾಸನವು ಮೈಸೂರು ಒಡೆಯರಾದ ದೇವರಾಜ ಒಡೆಯರು ತಮ್ಮ ಕುಟುಂಬ ಸಮೇತರಾಗಿ ಹಂಗಳ ಗ್ರಾಮದಲ್ಲಿ ನೆಲೆಸಿದ್ದು ದೇವರಾಜ ಒಡೆಯರ ನಿಧನದ ನಂತರ ತಾವು ವಾಸಮಾಡುತ್ತಿದ್ದ ಅರಮನೆ ಸ್ಥಳವನ್ನು ಕಲ್ಲು ಮಠವಾಗಿ ನಿರ್ಮಿಸಿರುವುದು ತಿಳಿದುಬರುತ್ತದೆ[29] (ಚಿತ್ರ–18).

4.6 ಉಮತ್ತೂರಿನ ಪಾಳೇಗಾರರ ಕಾಲದ ಧಾರ್ಮಿಕ ಪರಿಸ್ಥಿತಿ :

15ನೇ ಶತಮಾನದ ಅಂತ್ಯ ಹಾಗೂ 16ನೇ ಶತಮಾನದ ಆದಿಭಾಗದವರೆಗೂ ಮೈಸೂರು ಜಿಲ್ಲೆಯ ದಕ್ಷಿಣಭಾಗ ಮತ್ತು ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಆಡಳಿತ ನಡೆಸುತ್ತಿದ್ದ ಉಮತ್ತೂರಿನ ಪಾಳೆಗಾರರು ವಿಜಯನಗರ ಸಾಮ್ರಾಜ್ಯದ ಅಧೀನ ಅರಸರುಗಳಾಗಿ ಗುಂಡ್ಲುಪೇಟೆ ತಾಲ್ಲೂಕಿನ ಆಡಳಿತ ನಡೆಸಿದ್ದಾರೆ. ಈ ಅವಧಿಯಲ್ಲಿ ಧಾರ್ಮಿಕ ಕ್ಷೇತ್ರಕ್ಕೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.[30]

ಚೆನ್ನಮಲ್ಲಿಪುರ ಗ್ರಾಮದ ಶಾಸನವು ಕ್ರಿ.ಶ.1400ಕ್ಕೇ ಸೇರಿದ್ದು ಉಮ್ಮತ್ತೂರಿನ ಆಳ್ವಿಕೆಯ ಮಹಾಮಂಡಲೇಶ್ವರ ಚಿಕ್ಕಣೊಡೆಯರು ಕುಡುಗುನಾಡಿನ ಆಲತ್ತೂರು ಗ್ರಾಮವನ್ನು ದಾನ ನೀಡಿದ ಸಂಗತಿ ತಿಳಿಸುತ್ತದೆ.[31] ಚಿಕ್ಕಣಾಪುರ ಶಾಸನವು ಕ್ರಿ.ಶ. 1480 ರ ಕಾಲದ್ದಾಗಿದ್ದು, ವೀರನಂಜರಾಯ ಒಡೆಯರ ಆಳ್ವಿಕೆಯನ್ನು ಮತ್ತು ಆತನು ಚಿಕ್ಕಾಣಾಪುರಕ್ಕೆ ನೀಡಿದ ಕೊಡುಗೆಯನ್ನು ಮತ್ತು ಈ ದಾನ ತೆರಕಣಾಂಬಿಯ ಅಂಗಡಿ

ವೀರಭದ್ರ ದೇವರಿಗೆ ಬಿಟ್ಟ ವಿಚಾರವನ್ನು ವಿವರಿಸುತ್ತದೆ[32] ಮತ್ತು ಶೆಟ್ಟಿಹಳ್ಳಿಯ ಕ್ರಿ.ಶ. 1488 ರ ದಾನಶಾಸನ ಉಮತ್ತೂರಿನ ಸೋಮರಾಯ ತೆರಕಣಾಂಬಿಯ ದೇವರಿಗೆ ತಾಲ್ಲೂಕಿನ ಶೆಟ್ಟಹಳ್ಳಿ ಗ್ರಾಮವನ್ನು ದಾನ ನೀಡುವುದನ್ನು ತಿಳಿಸುತ್ತದೆ.[33] ತೆರಕಣಾಂಬಿ ಶಾಸನ ಕ್ರಿ.ಶ. 1504 ರದ್ದಾಗಿದ್ದು ಉಮತ್ತೂರಿನ ಪಾಳೇಗಾರ ನಂಜರಾಜ ಅರಸನು ತೆರಕಣಾಂಬಿಯ ಮೂಲಸ್ಥಾನೇಶ್ವರ ದೇವಸ್ಥಾನಕ್ಕೆ ಅಂಗರಂಗ ಭೋಗ ನೈವೇದ್ಯ ಮತ್ತು ರಥೋತ್ಸವಕ್ಕಾಗಿ ದತ್ತಿ ಬಿಟ್ಟಿರುವುದನ್ನು ಗಮನಿಸಿದರೆ,[34] ಈ ಭಾಗದಲ್ಲಿ ವೈಷ್ಣವಧರ್ಮ ಪ್ರಭಾವ ಹೆಚ್ಚಾಗಲು ಇವರು ಸಹ ಕಾರಣರಾಗಿದ್ದಾರೆ ಎಂದು ಭಾವಿಸಬಹುದು.

4.7 ಮೈಸೂರು ಒಡೆಯರ ಕಾಲದ ಧಾರ್ಮಿಕ ಪರಿಸ್ಥಿತಿ :

ಗುಂಡ್ಲುಪೇಟೆ ಭಾಗದಲ್ಲಿ ಮೈಸೂರಿನ ಒಡೆಯರ ಆಡಳಿತವನ್ನು 16ನೇ ಶತಮಾನದ ನಂತರದಲ್ಲಿ ಕಾಣಬಹುದಾಗಿದೆ. ವಿಜಯನಗರದಿಂದ ಸ್ವತಂತ್ರ್ಯಗೊಂಡ ಮೇಲೆ ಈ ಭಾಗದಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸಿದರು ಗುಂಡ್ಲುಪೇಟೆ 125 ತೆರಕಣಾಂಬಿ ಶಾಸನವು ಶ್ರೀ ವೀರ ಮಹಾದೇವ ಅರಸುರವರು 17ನೇ ಶತಮಾನ (ಕ್ರಿ.ಶ. 1665) ರಲ್ಲಿ ಆಲ್ಲಾಳನಾಥದೇವರಿಗೆ ಹಳ್ಳಿಯನ್ನು ದತ್ತುಬಿಟ್ಟ ವಿಚಾರವನ್ನು ಪ್ರಸ್ತಾಪಿಸುತ್ತದೆ.[35] ಹಾಗೂ ಗುಂಡ್ಲುಪೇಟೆ 118 ಮತ್ತು 19ನೇ ಶಾಸನದಲ್ಲಿ ಮೈಸೂರು ಒಡೆಯ ಮುಮ್ಮಡಿ ಕೃಷ್ಣರಾಜ ಒಡೆಯರು ವರದರಾಜು ಸ್ವಾಮಿಗೆ ಸೇವೆ ಸಲ್ಲಿಸಿರುವುದರ ವಿವರವಿದೆ. ಇದು ಮೈಸೂರು ಒಡೆಯರು ವೈಷ್ಣವ ಧರ್ಮಕ್ಕೆ ಪ್ರೋತ್ಸಾಹ ನೀಡಿರುವುದನ್ನು ವಿವರಿಸುತ್ತದೆ.[36] ಮೈಸೂರು ಒಡೆಯರು ಜೈನರಿಗೂ ಪ್ರೋತ್ಸಾಹ ನೀಡಿದ್ದರು. ಕೆಲಸೂರು ಶಾಸನ ಕ್ರಿ.ಶ. 1829 ರಲ್ಲಿ ಬರೆದಿದ್ದು ಮುಮ್ಮಡಿ ಕೃಷ್ಣರಾಜ ಒಡೆಯರು ಸರ್ವಾಲೋಕತ್ರಯ ಬಸದಿಯ ಜೀರ್ಣೋದ್ದಾರ ಮಾಡಿಸಿ ವಿಜಯ ಮತ್ತು ಜ್ವಾಲಮಾಲಿನಿಯ ಪ್ರತಿಷ್ಠಾಪನೆ ಮಾಡಿಸಿರುವುದನ್ನು ತಿಳಿಸುತ್ತದೆ. ಇದರಿಂದ 19ನೇ ಶತಮಾನದಲ್ಲೂ ಜೈನರಿಗೆ ಮೈಸೂರಿನ ಒಡೆಯರು ಪ್ರೋತ್ಸಾಹ ನೀಡಿದ್ದರು ಎಂಬುದು ತಿಳಿದುಬರುತ್ತದೆ.[37]

ಕೇವಲ ವೈಷ್ಣವ ಮತ್ತು ಜೈನ ಮತಗಳಷ್ಟೇ ಅಲ್ಲದೆ ವೀರಶೈವ ಮಠಗಳಿಗೂ ಮೈಸೂರಿನ ಒಡೆಯರು ದಾನದತ್ತಿಗಳನ್ನು ನೀಡಿ ಅವುಗಳ ಬೆಂಬಲವನ್ನು ಪಡೆದಿದ್ದರು. ದೇಶಿಪುರದ ಕ್ರಿ.ಶ. 1665ರ ಶಾಸನ ಮೈಸೂರು ಒಡೆಯರು ನಂಜನಗೂಡಿನ ಮಲ್ಲನಮೂಲೆಯಲ್ಲಿ ವಿರಕ್ತಮಠದ ಸ್ಥಾಪನೆಮಾಡಿ ದೇಶಿಪುರ ಗ್ರಾಮ ಸೇರಿದಂತೆ ಹಲವು ದಾನ-ದತ್ತಿಗಳನ್ನು ನೀಡಿರುವುದನ್ನು ಪ್ರಸ್ತಾಪಿಸುತ್ತದೆ.[38] ಹಾಗೂ ಇದೇ ವಿಚಾರವನ್ನು ಗುಂಡ್ಲುಪೇಟೆ[39] ಹೂಕುಂದ ಗ್ರಾಮದ ಮೈಸೂರು ದೊಡ್ಡದೇವರೊಡೆಯರ ಶಾಸನ ತಿಳಿಸುತ್ತದೆ.

4.8 ದಾನ ಶಾಸನಗಳಲ್ಲಿ ಧಾರ್ಮಿಕ ಪರಿಸ್ಥಿತಿ :

ವ್ಯಕ್ತಿಯ ಜೀವನ ಮೌಲ್ಯಗಳಲ್ಲಿ ದಾನವೂ ಪ್ರಮುಖವಾದದು, ಈ ಭಾಗದ ಧಾರ್ಮಿಕ ಸಂಸ್ಕೃತಿಯಲ್ಲಿ ದಾನವು ಸಹ ಒಂದು ಪ್ರಧಾನ ಅಂಶವಾಗಿತ್ತು. ದಾನಕ್ಕೆ ಮಹತ್ವದ ಸ್ಥಾನ ನೀಡಿದ್ದರೂ ಸಹ ಇದರಿಂದಾಗಿಯೇ ದಾನ ಶಾಸನಗಳಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸ್ವರೂಪ ಗುರುತಿಸಬಹುದು. 10ನೇ ಶತಮಾನದಿಂದ ಈಚೆಗೆ ದಾನಶಾಸನಗಳನ್ನು ಪ್ರಕಟಮಾಡಿರುವುದನ್ನು ತಿಳಿಯಬಹುದು. ದಾನ ಶಾಸನ ಮೊದಲಿಗೆ ದಾನವನ್ನು ನೀಡುವವರು ಚಕ್ರವರ್ತಿಯಾಗಿರದೇ ಬೇರೆಯವರಾಗಿದ್ದರೇ ಆ ವ್ಯಕ್ತಿಯ ಮತ್ತು ಅವನ ವಂಶ ವರ್ಣನೆ ಬರುತ್ತದೆ. ಎರಡನೆಯದಾಗಿ ಶಾಸನದ ಕಾಲವನ್ನು ಶಕ ವರ್ಷ, ತಿಂಗಳು, ದಿನಗಳನ್ನು ಹೇಳುವಂತೆ ನಿಖರವಾದ ರೀತಿಯಲ್ಲಿ ಕೊಡಲಾಗಿದೆ.ಮೂರನೆಯದು ದಾನದ ವಸ್ತು ಅಥವಾ ಪ್ರದೇಶದ ಭಾಗವನ್ನು ನಿರ್ದಿಷ್ಟವಾಗಿ ತಿಳಿಸುತ್ತದೆ. ಕೊಡುವ ದಾನ ಗ್ರಾಮವಾಗಿದ್ದರೆ ಅದರ ಸೇವೆಯನ್ನು, ಸುಂಕದ ಹಣವಾಗಿದ್ದರೆ ಅದರ ವಿವರವನ್ನು ನೀಡುತ್ತದೆ. ಈ ಅಂಶಗಳನ್ನು ಸಾಮಾನ್ಯವಾಗಿ ಎಲ್ಲಾ ದಾನ ಶಾಸನಗಳಲ್ಲಿ ಕಾಣಬಹುದಾಗಿದೆ. 048791

ಬಸದಿ, ಮಠ, ದೇವಾಲಯಗಳಿಗೆ ನೀಡಿದ ದಾನಶಾಸನಗಳ ಮೂಲಕ ಗುಂಡ್ಲುಪೇಟೆ ತಾಲ್ಲೂಕಿನ ಸಾಂಸ್ಕೃತಿಕ ಪ್ರಗತಿಗೆ ಹಲವು ರಾಜಮಹಾರಾಜರು, ಶ್ರೀಮಂತರು ಕಾರಣರಾಗಿದ್ದಾರೆ. ಇವರು ಸಮಾಜಮುಖಿಯಾದ ಕಾರ್ಯಗಳನ್ನು ಮಾಡಿರುವುದನ್ನು ಶಾಸನಗಳಲ್ಲಿ ತಿಳಿಯಬಹುದು ಕಮರಹಳ್ಳಿಯ 8 ನೇ ಶತಮಾನ ಶಾಸನ ಗಂಗರ ಅರಸ ಶ್ರೀ ಪುರುಷನನ್ನು ಕೈಲಾರ ಅಕ್ಕ ಅವರಮಗ ಮಾದಪ್ಪನ್ನ ಗಾನಗಾವಳಿಯು ಗುಣಸಾಗರ ತಮ್ಮಡಿಗೆ ದಾನವಾಗಿ ನೀಡಿರುವ ದಾಖಲೆ ಹೊಂದಿದೆ. ಇದರಲ್ಲಿ ತಮ್ಮಡಿ ಎಂದು ಬಳಕೆಯಾಗಿರುವುದನ್ನು ಗಮನಿಸಿದ್ದರೆ ಶಿವಾರ್ಚಕ ಎಂದು ತಿಳಿಯಬಹುದಾಗಿದೆ.[40] ಇದು ಬಹುಶಃ ಶೈವ ಸಮುದಾಯಗಳು ಸುಮಾರು 8ನೇ ಶತಮಾನದ ಇರುವಿಕೆಯನ್ನು ಸೂಚಿಸುತ್ತದೆ. ಚಿಕ್ಕಕಾಟಿ ಸುಮಾರು 8ನೇ ಶತಮಾನದ ಗಂಗರ ಶಾಸನವಾಗಿದ್ದು ಸತ್ಯವಾಕ್ಯ ಪೆರ್ಮಾಡಿಯ ಕಾಲಕ್ಕೆ ಸೇರಿದೆ. ಇದು ಭೂತರಸನು ತೊರೆಕಟ್ಟಿಯ ಪಡಿಸಾಲೆಯಲ್ಲಿನ ನೆಲೆಗುರು ಎಂಬ ಹಳ್ಳಿಯನ್ನು ದೇಣಿಗೆಯಾಗಿ ನೀಡಿದನು ಎಂದು ತಿಳಿಸಿದೆ.[41] ನಿಟ್ರೆ ಗ್ರಾಮದ ಶಾಸನದಲ್ಲಿ ಹೊಯ್ಸಳ ವಿಷ್ಣುವರ್ಧನ ನರಸಿಂಹನ ಸೇನಾಧಿಪತಿ ಪೆರಿಯಾನಾಡಿನ ಮಹಾಪ್ರಧಾನ ಸರ್ವಾಧಿಕಾರಿ ಮಲ್ಲಿಕಾರ್ಜುನ ದಣ್ಣಾಯಕ ಕುಲಗಾಣ ಗ್ರಾಮದ ನೀರಾವರಿ ಮತ್ತು ಒಣ ಭೂಮಿಯನ್ನು ವಾಸುದೇವ ದೇವರಿಗೆ ದಾನ ನೀಡಿದ ವಿವರ ಒದಗಿಸುತ್ತದೆ ಇದರ ಕಾಲ ಕ್ರಿ ಶ 1162–1163.[42] ಕಲ್ಲಹಳ್ಳಿಯ ಕ್ರಿ.ಶ. 1221ಕ್ಕೆ ಸೇರಿದ ಶಾಸನ ಹೊಯ್ಸಳ ಮಹಾಪ್ರಧಾನ ಬಾಹತ್ತರಗಾಗಿಯೇ ಗಾಟಿ ಪತಿ ಶ್ರೀರಂಗದಣ್ಣನಾಯಕ ಹಾಗೂ ಹಿರಿಯನಾದ ಮಹಾಪ್ರಭು ಕೊಲುಗಾಣದ ಶಂಕರಾಂಗ ಉಂಡರಸ

ಎಂಬುವರು ಕುಡುಗನಾಡ ನವವೀರ ಶ್ರೀ ವಿಜಯನಾರಾಯಣದೇವರಿಗೆ ನಿತ್ಯ ಸಮಾರಾಧನೆಗೆ ದಾನ ನೀಡುವ ವಿಷಯದ ಬಗ್ಗೆ ಬೆಳಕು ಚಲ್ಲುತ್ತವೆ.[43]

ಗುಂಡ್ಲುಪೇಟೆ ರಾಮೇಶ್ವರ ದೇವಾಸ್ಥಾನದಲ್ಲಿರುವ ಕ್ರಿ.ಶ. 1372ರ ಶಾಸನದ ಪ್ರಕಾರ ವಿಜಯನಗರದ ಅರಸ ಒಂದನೆಯ ಬುಕ್ಕರಾಯನ ಮಗ ಚಿಕ್ಕಸಂಪಣ್ಣೊಡೆಯನು ರಾಮನಾಥದೇವರ ಪಾತ್ರ ಭೋಗಕ್ಕೆ ಅಂದರೆ ರಾಮನಾಥದೇವಾಲಯದಲ್ಲಿ ನೃತ್ಯ ಸೇವೆಯನ್ನು ನಡೆಸಿಕೊಂಡು ಹೋಗಲು 30 ಗದ್ಯಾಣ ಹಣವನ್ನು ದಾನವಾಗಿ ನೀಡುವಂತೆ ತಿರ್ಮಾನಿಸಲಾಯಿತು.[44] ಶೂದ್ರರು 1 ಗದ್ಯಾಣ ಪ್ರತಿವರ್ಷ ಮುಂಗಾರಿಗೆ, ಉಳಿದವರು ಅರ್ಧ ವರಹ ನೀಡುವುದು. ಹಾಗೆಯೇ ಒಣಭೂಮಿ ಮತ್ತು ನೀರಾವರಿಯ ಭೂಮಿಯವರು ಕುಯಿಲಿನ ಸಮಯದಲ್ಲಿ ದಾನ ನೀಡುವುದಾಗಿ ತಿಳಿಸಿದ್ದರು. ಇದು ದೇವಾಲಯಗಳಲ್ಲಿ ನೃತ್ಯ ಸೇವೆ ಇರುವುದನ್ನು ತಿಳಿಸುತ್ತದೆ. ಜೊತೆಗೆ ನೃತ್ಯ ಮೊದಲಾದ ಮನರಂಜನೆ ಚಟುವಟಿಕೆಗಳನ್ನು ದೇವಾಲಯದಲ್ಲಿ ನಡೆಸುತ್ತಿದ್ದರು. ಇದರಿಂದ ದೇವಾಲಯಗಳು ಮನರಂಜನೆ ಕೇಂದ್ರಗಳೂ ಆಗಿದ್ದವೆಂದು ತಿಳಿಯಬಹುದಾಗಿದೆ. ತ್ರಿಯಂಬಕಪುರದ ತಾಮ್ರಶಾಸನ 3 ನೇ ಹರಿಹರನಿಗೆ ಸೇರಿದ್ದು ತ್ರಿಯಂಬಕ ದೇವರಿಗೆ ಭೂಮಿಯನ್ನು ದಾನವಾಗಿ ನೀಡಿದ ವಿಚಾರವನ್ನು ಹೊಂದಿದೆ.[45]

ಗೋಪಾಲಪುರದ ಶಾಸನವು ಅಚ್ಯುತರಾಯ ವೀರಪ್ಪ ಒಡೆಯರು ತಮ್ಮ ನಾಯಕತನಕ್ಕೆ ಯಿಂಗಳವಾಡಿ (ಕುಣಿಸಿ ಹೇಳಿ ಸ್ಥಳದ) ಗ್ರಾಮವನ್ನು ಗೋಪಾಲಾಸ್ವಾಮಿಬೆಟ್ಟದ ಗೋವರ್ಧನರಿಗೆ ದಾನ ಬಿಟ್ಟ ವಿಚಾರವನ್ನು ತಿಳಿಸುತ್ತದೆ.[46] ಕ್ರಿ.ಶ. 1537ರ ಈ ಶಾಸನ ಸದಾಶಿವರಾಯರ ಕಾಲದಲ್ಲಿ ಅಧಿಕಾರಿಯಾಗಿದ್ದ ರುಸ್ತುಂಜಿಖಿನ ಒಡೆಯರು ಕೊಡತಿಹೋನ ಹಲಗೆಒಡೆಯರಿಗೆ ಮಸಹಳ್ಳಿ ಗ್ರಾಮ ಹಾಗೂ ಅವರಕಾಲುವಳಿಗಳಿಗೆ ಸುತ್ತಿಗುತ್ತಿಯಾಗಿ ನೀಡಿದ ಮಾಹಿತಿ ಹೊಣಕನಹಳ್ಳಿ ಶಾಸನದಲ್ಲಿ ಉಲ್ಲೇಖವಾಗಿದೆ.[47] ಹಳ್ಳದಪುರ (ಬೇಚಿರಾಕ್) ದಲ್ಲಿ ಅಗ್ರಹಾರವೊಂದನ್ನು ಮಾಡಿಸಿ ವಿಧ್ಯಾಧರ ಮಹಾಪಾತ್ರಿ ಅರಸು ಲಕ್ಷ್ಮಿಪತಿ ಅಯ್ಯ ಎಂಬಾತನಿಗೆ ದಾನ ನೀಡಿದ ಸಂಗತಿಯನ್ನು ವಿವರಿಸುತ್ತದೆ.[48] ವೆಂಕಟಪತಿ ಮಹಾರಾಯನ ಕಾಲದಲ್ಲಿ ಮೈಸೂರು ಅಧಿಪರಸರಾಜಯ್ಯನು ಹಂಗಳ ಸ್ಥಳದ ಪುತ್ತನಪುರ ಗ್ರಾಮವನ್ನು ತೆರಕಣಾಂಬಿ ಹನುಮಂತ ದೇವರ ಪೂಜೆ ಹಾಗೂ ಅನ್ನದಾನ ನಡೆಸುವ ಸತ್ಯಕ್ಕೂ ನೀಡಿದ ವಿಚಾರವನ್ನು ತೆರಕಣಾಂಬಿಯ ಶಾಸನ ತಿಳಿಸುತ್ತದೆ.[49]

ಶಿವಪುರ ಶಾಸನ 'ಶ್ರೀ ವೀರ ಗಜಬೇಜೆಕಾಟಿ' ಸೋಮರಾಯ ಒಡೆಯರ ಕುಮಾರ ದೇವರಾಜ ಒಡೆಯರು ಶ್ರೀಗುರುರುದ್ರಾಕ್ಷಿ ಒಡೆಯರಿಗೆ ಗೊಂದಿಗನ ಹಳ್ಳಿಯನ್ನು ದಾನ ಬಿಟ್ಟಿದ್ದನ್ನು ತಿಳಿಸುತ್ತದೆ.[50] ಚೆನ್ನಮಲ್ಲಪುರದಲ್ಲಿ ದೊರೆತಿರುವ ಶಾಸನವು ಕುಡುಗನಾಡಿನ ಮಹಾಮಂಡಲೇಶ್ವರ ಚಿಕ್ಕ ಒಡೆಯರು ಗ್ರಾಮವನ್ನು ದತ್ತಿಬಿಟ್ಟ ವಿಚಾರವನ್ನು ಪ್ರಸ್ತಾಪಿಸುತ್ತದೆ.[51]

ತ್ರಿಯಂಬಕಪುರದ ದೇವಾಸ್ಥಾನದ ಅರ್ಚಕರಲ್ಲಿದ್ದ ತಾಮ್ರಶಾಸನದಲ್ಲಿ ವೀರಸೋಮರಾಯನೆಂಬ ಅರಸನ ಉಲ್ಲೇಖವಿದ್ದು ಗುರುರುದ್ರಾಕ್ಷಿ ಒಡೆಯರಿಗೆ ತೋಟವನ್ನು ದಾನ ಬಿಟ್ಟ ವಿಷಯವಿದೆ.[52] ಇದು 15ನೇ ಶತಮಾನಕ್ಕೆ ಸೇರಿದೆ. ಈ ದಾನದ ಉದ್ದೇಶದ ದೇವಾಲಯದಲ್ಲಿ ಶಿವಪೂಜೆಯನ್ನು ನಡೆಸಿಕೊಂಡು ಹೋಗುವುದಾಗಿದೆ. ಶೆಟ್ಟಹಳ್ಳಿ ಗ್ರಾಮದ ಕ್ರಿ.ಶ. 1488ರ ಶಾಸನ ತೆರಕಣಾಂಬಿಯ ಸೋಮಯ್ಯ ದೇವರ ಪೂಜೆ ಪುರಸ್ಕಾರಕ್ಕೆ ಕೇತೆ ದಣ್ಣಾಯಕರು ಶೆಟ್ಟಹಳ್ಳಿ ಗ್ರಾಮವನ್ನು ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ. ಅಲ್ಲದೆ ಪೂರ್ವದ ದತ್ತಿಯನ್ನು ಧ್ಯಾನರೂರ್ಜಿತಗೊಳಿಸಿದ ವಿಷಯವನ್ನು ತಿಳಿಸುವ ಶಾಸನವೊಂದು ಶೆಟ್ಟಿಹಳ್ಳಿಯಲ್ಲಿದೆ.[53]

ಗುಂಡ್ಲುಪೇಟೆಯ ಶಾಸನದಲ್ಲಿ 'ಶ್ರೀ ದೊಡ್ಡದೇವರಾಜರಾದ' ಎಂದು ಉಲ್ಲೇಖವಾಗಿದ್ದು ವಿಗ್ರಹವನ್ನು ದಾನನೀಡಿದ ವಿಚಾರವು ತಿಳಿಯುತ್ತದೆ. ಇದರ ಕಾಲ ಕ್ರಿ.ಶ 1554.[54] ಬೆರಟಹಳ್ಳಿಯ 19ನೇ ಶತಮಾನದ ಶಾಸನ ಮೈಸೂರು ಒಡೆಯರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಕೆಲಸೂರಿನಲ್ಲಿನ ಚೈತ್ಯಾಲಯವನ್ನು ಜೀರ್ಣೋದ್ಧಾರ ಮಾಡಿ ಚಂದ್ರಪ್ರಭ ತೀರ್ಥಂಕರ ವಿಜಯ ಮತ್ತು ಜ್ವಾಲಿನೀ ದೇವತೆಗಳ ವಿಗ್ರಹಗಳನ್ನು ದಾನವಾಗಿ ನೀಡಿರುವ ವಿಷಯವನ್ನು ಹೊಂದಿದೆ.[55] ಗುಂಡ್ಲುಪೇಟೆಯ ಕ್ರಿ.ಶ. 1668 ರ ಶಾಸನವು ತೆರಕಣಾಂಬಿ ವರದರಾಜಸ್ವಾಮಿಗೆ ಕೃಷ್ಣರಾಜರು ಸೇವೆ ಸಲ್ಲಿಸಿರುವ ಬಗ್ಗೆ ಪ್ರಸ್ತಾಪಿಸಿದೆ.

ದಾನ ಶಾಸನಗಳಲ್ಲಿ ಮುಖ್ಯವಾಗಿ ಗುರುತಿಸಬಹುದಾದ ಅಂಶವೆಂದರೆ ನಿತ್ಯ ನಡೆಯುವ ಪೂಜಾಕೈಂಕರ್ಯಕ್ಕೂ, ದೇವಾಲಯಗಳ ಜೀರ್ಣೋದ್ದಾರಕ್ಕೂ, ಪೂಜಾರಿಗಳು ಮೊದಲಾಗಿ ದೇವಾಸ್ಥಾನದ ಸೇವೆಯಲ್ಲಿ ಭಾಗಿಯಾದವರ ಜೀವನೋಪಾಯಕ್ಕೆ ದಾನಗಳನ್ನು ನೀಡುತ್ತಿದ್ದ ಪರಿಪಾಠ ಕಾಣುತ್ತೇವೆ. ಕೈಂಕರ್ಯ ಸೇವೆ ಜೀರ್ಣೋದ್ದಾರಗಳಿಗಿಂತ ಒಂಧರ್ಥದಲ್ಲಿ ಮಿಗಿಲಾದ ಸೇವೆ. ದೇವಾಲಯಗಳ ನಿರ್ಮಾಣ ಕಾರ್ಯವನ್ನು ಸಾಮಾನ್ಯವಾಗಿ ರಾಜ ಮಹಾರಾಜರು ಮಾಡುತ್ತಿದ್ದರು.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇರುವ ರಾಮೇಶ್ವರ ದೇವಾಲಯವನ್ನು ವಿಜಯನಗರದ ಸಂಗಮ ವಂಶದ ದೊರೆಯಾದ 2ನೇ ಕುಮಾರ ಕಂಪಣನು ಕ್ರಿ.ಶ 1367 ರಲ್ಲಿ ನಿರ್ಮಿಸಿದರೆಂದು ತಿಳಿದುಬರುತ್ತದೆ. ಹಾಗೆಯೇ ಗುಂಡ್ಲುಪೇಟೆಯ ಪರವಾಸು ದೇವಾಸ್ಥಾನವನ್ನು ಮೈಸೂರು ಒಡೆಯ ಚಿಕ್ಕದೇವರಾಯರು ಪೂರ್ವಜರ ನೆನಪಿಗಾಗಿ ಕ್ರಿ.ಶ. 1674 ರಲ್ಲಿ ನಿರ್ಮಿಸಿರುವ ವಿಚಾರಗಳನ್ನು ಗುಂಡ್ಲುಪೇಟೆ ಶಾಸನಗಳಲ್ಲಿ ತಿಳಿಯಬಹುದು. ಹಾಗೆಯೇ ಕೋಟೆಕೆರೆಯ ವೇಣುಗೋಪಾಲಾಸ್ವಾಮಿ ದೇವಸ್ಥಾನವನ್ನು ಕೋಮಾಳಗಳ ಶೆಟ್ಟಿ ಮತ್ತು ಅವರ ವಂಶದವರು ಕಟ್ಟಿದರೆನ್ನುವ ಪ್ರತೀತಿ ಇದೆ. ಹಾಗೆಯೇ ತೆರಕಣಾಂಬಿಯ ಕಂಠೀರವ ಆಂಜನೇಯ ದೇವಾಸ್ಥಾನವನ್ನು ದಾಸ ಕೇತಶೆಟ್ಟಿ ಎಂಬಾತನು, ಹುಲಿಗನಮುರಡಿ

ವೆಂಕಟರಮಣಸ್ವಾಮಿ ದೇವಸ್ಥಾನವನ್ನು ತೆರಕಣಾಂಬಿಯ ಸಾಹುಕಾರ ದಾಸ ಕೇಶವಸೆಟ್ಟಿ ಕಟ್ಟಸಿದ್ದಾಗಿ ತಿಳಿದು ಬರುತ್ತದೆ. ಇವರು ಯಾವ ರಾಜಮನೆತನಕ್ಕೆ ಸೇರಿದ ರಾಜರುಗಳೆಂಬುದು ಸ್ಪಷ್ಟವಾಗದ ಕಾರಣ ಇವರು ಶ್ರೀಮಂತ ಖಾಸಗಿ ವ್ಯಾಪಾರಿಯಾಗಿರಬಹುದೆಂದು ಊಹಿಸಬಹುದಾಗಿದೆ. ಇದರಿಂದ ದೇವಾಸ್ಥಾನಗಳನ್ನು ರಾಜರುಗಳಲ್ಲದೆ ಶ್ರೀಮಂತ ಖಾಸಗಿ ವ್ಯಕ್ತಿಗಳು ನಿರ್ಮಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.[56] ಹಾಗೂ ಪ್ರಮುಖ ದೇವರಿಗೆ ನೀಡಿರುವ ದಾನಗಳನ್ನು ಗುರುತಿಸುವುದಾದರೆ ನಿಟ್ರೆಯ ಮಲ್ಲಿಕಾರ್ಜುನ ದೇವಾಸ್ಥಾನದ ಕ್ರಿ.ಶ. 1009ರ ಶಾಸನವು ಆ ವರ್ಷದ ಉತ್ತರಾಯಣ ಸಂಕ್ರಾಂತಿಯ ಶ್ರೀ ಪಂಚಮಿದಿನದಂದು ನಿಟ್ರೆಯ ರಾಜಗಾವುಂಡನ ಮಗ ಪೆಮ್ಮ ಗಾವುಂಡನು ಶಿವಕಳಶದ ನೀರಿನಲ್ಲಿ ಪವಿತ್ರ ಸ್ನಾನ ಮಾಡಿ 5 ಎಕರೆ ಹೂತೋಟವನ್ನು ತೆರಿಗೆ ಇಲ್ಲದೆ ಆದಿತ್ಯ ದೇವನಿಗೆ ಕೊಡುಗೆ ನೀಡಿರುವುದು, ಹಾಗೆಯೇ ಬಿದಿವಾಸಯ್ಯನು ಆದಿತ್ಯ ದೇವರ ಪ್ರತಿಷ್ಠಾಪನೆಗೆ ದಾನ ನೀಡಿದ್ದಾನೆ ಎಂದು ತಿಳಿಯಬಹುದು.[57] ಕೆಲಸೂರು ಸೋಮರಾಸಿ ಎಂಬಾತನು ಸೂರ್ಯದೇವರ ವಿಗ್ರಹವನ್ನು ದಾನ ನೀಡಿರುವುದನ್ನು ತಿಳಿಸುತ್ತದೆ. ಹಾಗೆಯೇ ಹೊಯ್ಸಳ ದೊರೆ ವಿಷ್ಣುವರ್ಧನ ಕುಡುಗುನಾಡಿನ ಪ್ರಸನ್ನವಿಜಯಪುರದ ವಿಜಯನಾರಾಯಣಸ್ವಾಮಿ ದೇವಾಸ್ಥಾನದ ವಿಜಯನಾರಾಯಣನ ವಿಗ್ರಹವನ್ನು ದಾನ ನೀಡಿರುವುದಾಗಿ, ಹೊಯ್ಸಳ ಅರಸ 3ನೇ ನರಸಿಂಹ ಬಲ್ಲಾಳ[58] ಹಂಗಳ ಗ್ರಾಮದ ವರದರಾಜು ಸ್ವಾಮಿ ದೇವಾಸ್ಥಾನದ ಜನಾರ್ಧನ ವಿಗ್ರಹ ನಿರ್ಮಿಸಿರುವ ಬಗ್ಗೆ ಮತ್ತು ಪದಿನಾಲ್ಕು ನಾಡರಸನಾದ ಮಾಧವ ದಣ್ಣಾಯಕ ಗೋಪಾಲಸ್ವಾಮಿ ಬೆಟ್ಟದ ಗೋಪಿನಾಥಸ್ವಾಮಿ ದೇವಾಲಯದ ನಿರ್ಮಾಣ ಮಾಡಿದ್ದರೆಂದು, ಮುಮ್ಮಡಿ ಕೃಷ್ಣರಾಜ ಒಡೆಯರು ತೆರಕಣಾಂಬಿಯ ಲಕ್ಷ್ಮೀವರದರಾಜ ದೇವಾಲಯದಲ್ಲಿರುವ ಲಕ್ಷ್ಮಣ ವಿಗ್ರಹವನ್ನು ದಾನ ನೀಡಿದ್ದರು ಬಹಳ ಮುಖ್ಯವಾಗಿ ಈ ಭಾಗದಲ್ಲಿ ಮತ್ತೆ ಮತ್ತೆ ಉಲ್ಲೇಖಿತವಾಗಿರುವ ಕಡಾಂಬಿ ವಂಶಕ್ಕೆ ಸೇರಿದ ಲಂಬ ಕರ್ಣರಾಯ ತ್ರಿಯಂಬಕಪುರದ ತ್ರಿಯಂಬಕೇಶ ದೇವಾಲಯದಲ್ಲಿನ ಕದಂಬೇಶ್ವರ ವಿಗ್ರಹವನ್ನು ನಿರ್ಮಾಣ ಮಾಡಿರುವ ಬಗ್ಗೆ ವಿವರಿಸಿದೆ.[59]

ದೇವಾಲಯಗಳ ನಿರ್ಮಾಣ ಹಾಗೂ ವಿಗ್ರಹಗಳನ್ನು ದಾನ ನೀಡಿರುವಂತೆ ದೇವಾಲಯದ ಜೀರ್ಣೋದ್ಧಾರವು ದಾನ ಸೇವೆಯಲ್ಲಿ ಮುಖ್ಯವಾಗಿದೆ. ಶಿಥಿಲವಾದ ಗೋಪುರ, ಪಾಳುಗೋಡೆ, ಕಲ್ಲುಮಂಟಪ, ರಂಗಭಂಗ ನಿರ್ಮಾಣಗಳನ್ನೆಲ್ಲಾ ಸರಿಪಡಿಸಿರುವುದಕ್ಕೆ ಸಾಕ್ಷಿಯಾಗಿರುವ ಪ್ರಮುಖ ದಾನ ಶಾಸನಗಳೆಂದರೆ ಗುಂಡ್ಲುಪೇಟೆಯ ವಿಜಯ ನಾರಾಯಣ ಸ್ವಾಮಿ ದೇವಾಲಯದ ಮುಖ ಮಂಟಪದಲ್ಲಿನ ಬರಹವು 19ನೇ ಶತಮಾನ ಆದಿತ್ಯರಸನ ಮಗಕುಪ್ಪರಸ ಒಡೆಯ ಗಾಳಿಮಂಟಪ ಅಥವಾ ತೆರೆದಮಂಟಪವನ್ನು ನಿರ್ಮಿಸಿದ್ದು ಇದನ್ನು ವಿಜಯ ನಾರಾಯಣಸ್ವಾಮಿ ದೇವರ ಬೆಳಗಿನ ಪೂಜೆಗೆ ಮತ್ತು ಸೇವೆಗೆ ಬಳಸುವುದು ಎಂದು

ತಿಳಿಸಲಾಗಿದೆ.[60] ಬಲ್ಲಹಳ್ಳಿಯ ಶಾಸನ ಮಾರಿಯಣ್ಣನು ಕೇಶವ ದೇವಾಲಯದ ರಂಗಮಂಟಪ ನಿರ್ಮಿಸಿದ ಬಗ್ಗೆ "ರಂಗಂ ಕಂಬಂ" ಎಂದು ವಿವರಿಸುತ್ತದೆ.[61] ಹಸುಗೂಲಿಯಲ್ಲಿ ದೊರೆತಿರುವ ಶಾಸನ "ಹೊರೆತರದ ಕಲ್ಲುಗೆಲಸಕ್ಕೆ" ದಾನ ನೀಡಿದ ವಿವರವುಳ್ಳದ್ದಾಗಿದೆ.[62] ಗುಂಡ್ಲುಪೇಟೆಯ ಶಾಸನ ಒಂದು ದೇವರ ಅಭಿಷೇಕದ ನೀರಿಗಾಗಿ ಕೂಪ (ಬಾವಿ) ನಿರ್ಮಾಣ ಮಾಡಿಸಿ ಅದರ ಜೀರ್ಣೋದ್ಧಾರವನ್ನು ಮಾಡಿಸಿದ ವಿಚಾರವೊಂದು ತ್ರಿಯಂಬಕಪುರದ ಶಾಸನದಿಂದ ತಿಳಿಯುತ್ತದೆ.

ದೇವರ ಅಭಿಷೇಕ, ಅಲಂಕಾರ, ನೈವೇದ್ಯ ಮೊದಲಾದ ಅಂಗಭೋಗಗಳ ಸೇವೆಗೆ, ನರ್ತನಾದಿ ರಂಗಭೋಗಗಳ ಸೇವೆಗೆ ದಾನಗಳನ್ನು ನೀಡಿದ ಉಲ್ಲೇಖವಿರುವ ತೆರಕಣಾಂಬಿಯ ಶಾಸನವು ದೇವಾಸ್ಥಾನಗಳಲ್ಲಿ ನಡೆಯುವ ಅಂಗ ರಂಗಬೋಗ ತೇರುತಿರುನಾಳು 'ನಿತ್ಯೋತ್ಸವ' 'ಪಕ್ಷೋತ್ಸವ' 'ಮಾಸೋತ್ಸವ' 'ಸಂವತ್ಸೋರತ್ಸವ' ಪ್ರಸ್ತಾಪವನ್ನು ಮಾಡುತ್ತಾ ಇವುಗಳ ನಿರ್ವಹಣೆಗಾಗಿ ಗ್ರಾಮಗಳನ್ನು ದಾನವಾಗಿ ನೀಡಿದ ವಿವರಗಳನ್ನು ಒಳಗೊಂಡಿದೆ.[63] ದೇವಾಸ್ಥಾನದ ಬಹುತೇಕ ಧಾರ್ಮಿಕ ಚಟುವಟಿಕೆಗಳನ್ನು ಈ ಶಾಸನ ತಿಳಿಸುತ್ತದೆ ಗುಂಡ್ಲುಪೇಟೆಯ 14 ನೇ ಶತಮಾನಕ್ಕೆ ಸೇರಿದ ಶಾಸನ 'ನಂದಾದೀವಿಗೆ', 'ಎಳ್ಳುನೈವ್ಯದ್ಯೆ'ವನ್ನು ಪ್ರಸ್ತಾಪಿಸುತ್ತದೆ.[64] ಇದರಿಂದ ಹಗಲು ರಾತ್ರಿಗಳ ದೇವರ ಮುಂದೆ ದಿವೀಗೆ ಹಚ್ಚಿಡುವ ಪದ್ದಯಿತ್ತು ಎಂದು ತಿಳಿಯಬಹುದು. ಹಾಗೆಯೇ ಪೂಜೆ ನಡೆಸಲು ಮಾಡಿರುವ ವಿವರವನ್ನು ಈ ಶಾಸನ ವಿವರಿಸುತ್ತದೆ. ಪ್ರಮುಖ ವಿಚಾರವೆಂದರೆ ದೇವಾಲಯದ ಉಗ್ರಾಣದಿಂದ 150 ಗದ್ಯಾಣ ಹಣವನ್ನು ಸಾಲವಾಗಿ ನೀಡಿ ಅದರಲ್ಲಿ ಬಂದ ಬಡ್ಡಿಯಲ್ಲಿ ದೇವರಕಾರ್ಯ ಮಾಡಲು ಸೂಚಿಸಲಾಗಿತ್ತು. ಪ್ರಮುಖವಾಗಿ 'ರುದ್ರಾಭಿಷೇಕ' ಮಾಡಲು ಈ ಶಾಸನದಲ್ಲಿ ದೇವರಪೂಜೆಗೆ 3 ತೆಂಗಿನಕಾಯಿ, ಗಂಧ, ಅಕ್ಷತೆ, ಎಲೆಗಳು, ಹೂ, ಗಂಧದಕಡ್ಡಿ, ಪ್ರತಿನಿತ್ಯ ಉರಿಯುವ ದೀಪ, 7 ರೀತಿಯ ಧಾನ್ಯಗಳು, ತುಪ್ಪ, ಎರಡು ರೀತಿಯ ಫಲಗಳು, ಎಲೆ, ಅಡಿಕೆ, ಇತ್ಯಾದಿ ಬಳಸುತ್ತಿದ್ದರೆಂಬ ವಿವರಗಳಿವೆ. ಈ ಶಾಸನಗಳ ಜೊತೆಗೆ ಹಸುಗೂಲಿಯಶಾಸನ ಎರಡು ಹೊತ್ತಿನ ನಂದಿ ದೀವಿಗೆಯ ಪ್ರಸ್ತಾಪಮಾಡುತ್ತದೆ.[65] ಪ್ರಾಯಶಃ ಎರಡು ಹೊತ್ತು ಎಂದರೆ ಬೆಳಿಗ್ಗೆ ಮತ್ತು ಸಾಯಂಕಾಲಗಳಿರಬಹುದು. ಹಂಗಳದಲ್ಲಿ ದೊರೆತಿರುವ ತಮಿಳು ಶಾಸನ ಮೂರು ಕಾಲ ನಂದಿದೀವಿಗೆ[66] ಬೆಳಗಿಸಲು 2 ಗದ್ಯಾಣ ಹಣವನ್ನು ನೀಡಿರುವ ಉಲ್ಲೇಖವಿದೆ. ಇದರಿಂದ ಬೆಳಿಗ್ಗೆ ಮಧ್ಯಾಹ್ನ ಮತ್ತು ಸಾಯಂಕಾಲಗಳ ಸಮಯದಲ್ಲಿ ದೀವಿಗೆ ಬೆಳಗುವ (ತ್ರಿಕಾಲಪೂಜೆ) ಸಂಪ್ರಾದಾಯವಿತ್ತು ಎಂದು ತಿಳಿಯಬಹುದು.

ದಾನವಾಗಿ ನೀಡುತ್ತಿದ್ದು ವಸ್ತುಗಳ ಕಡೆಗಮನ ಹರಿಸಿದರೆ ಭೂಮಿ ದಾನವನ್ನು ಮಾಡಿದ ವಿವರಗಳನ್ನೊಳಗೊಂಡ ಶಾಸನಗಳು ಅಧಿಕ ಪ್ರಮಾಣದಲ್ಲಿವೆ. ಕೆಲವೊಮ್ಮೆ ಇಡಿ ಊರನ್ನೇ ದಾನವಾಗಿ ನೀಡಿರುವ ವಿವರಗಳು ದೊರೆಯುತ್ತವೆ. ಚಿಕ್ಕಕಾಟಿಯ ಕ್ರಿ.ಶ. 1049ರ ಶಾಸನ ರಾಜಾಧೀರಾಜದೇವನ 33ನೇ ವರ್ಷದ ಆಳ್ವಿಕೆಯಲ್ಲಿ ರಾಜನು

ರಾಜಕೇಸರಿವರ್ಮನೆಂದು ಪ್ರಸಿದ್ಧವಾಗಿದ್ದು ದೇವಾಲಯದ ನಿರ್ಮಾಣಕ್ಕೆ ಕಾರಣೀಭೂತನಾದ ಅಚ್ಚಯ್ಯನ ಮಗ ಕೇಶವ ಭಟ್ಟನಿಗೆ 100 ಭತ್ತ ಬೆಳೆಯುವಷ್ಟು ಜಾಗವನ್ನು ಜೊತೆಗೆ ಅರಸುಗಳ ದೇವಾಸ್ಥಾನಕ್ಕೆ ದಾನ ನೀಡಿದ್ದಾನೆ.[67] ಅಲ್ಲದೆ ಗುಂಡ್ಲುಪೇಟೆ ಶಾಸನಗಳ ಸಂಖ್ಯೆ ಬೊಮ್ಮಲಾಪುರ 174, ಹೊರೆಯಾಲ 171, ತೆರಕಣಾಂಬಿ 124, ಹಳ್ಳದಮಾದಹಳ್ಳಿ 82, ಎರಿಯೂರು 171, ಸೋಮಹಳ್ಳಿ 79, ಬಲ್ಲಿಹಳ್ಳಿ 74, ಹುಲ್ಗಾಣ 159, ಶಾಸನಗಳಲ್ಲೂ ದೇವಾಲಯಗಳಿಗೆ ದಾನ ನೀಡಿದ ಬಗ್ಗೆ ಮಾಹಿತಿ ದೊರೆಯುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 10ನೇ ಶತಮಾನಕ್ಕಿಂತಲೂ ಮೊದಲು ಜೈನಧರ್ಮ ಅಸ್ಥಿತ್ವದಲ್ಲಿತ್ತು ಎಂಬ ಅಂಶ ಶಾಸನಗಳಿಂದ ತಿಳಿಯುತ್ತದೆ. ಜೊತೆಗೆ ಈ ಭಾಗದಲ್ಲಿ ಜೈನರು ಪ್ರಾಬಲ್ಯ ಸ್ಥಾಪಿಸಿದ್ದರು ಎಂಬ ಅಂಶ ದೇವಚಂದ್ರನ ರಾಜಾವಳಿ ಕಥಗಳಿಂದಲೂ ಉಲ್ಲೇಖವಾಗಿರುವುದು ಪ್ರಮುಖ ಅಂಶ. ಕಿಲಸೂರು ಗ್ರಾಮದಲ್ಲಿ ತಮಿಳು ಶಾಸನವೊಂದು ದೊರೆತಿದೆ. ಇದು 12ನೇ ಶತಮಾನದ ಕುಡುಗುನಾಡಿನ ಕಿಲಸೂರು ಗ್ರಾಮದ ಕೋಳಗಂಗದೇವನೆಂದೂ ಕರೆಯಲ್ಪಡುವ ಚೋಳರ ಒಂದನೆಯ ರಾಜೇಂದ್ರಚೋಳನು ಆಳ್ವಿಕೆಯ ಕಾಲದಲ್ಲಿ ವಿಕ್ರಮ ಚೋಳ ಪೆರ್ಮಾಡಿ ಗಾವುಂಡನೆಂಬುವನು ಸರ್ವಾಲೋಕೇಶ್ವರ ಬಸದಿಗೆ ದತ್ತಿ ಬಿಟ್ಟ ವಿಚಾರವನ್ನು ಉಲ್ಲೇಖಿಸುತ್ತದೆ.[68]

ಹಂಗಳ ಗ್ರಾಮದ ಭೂಮಿಯಲ್ಲಿ ದೊರೆತ ನಾಲ್ಕು ದೀಪಸ್ತಂಭಗಳು ಮತ್ತು ಒಂದು ದೊಡ್ಡಗಂಟೆಯ ಮೇಲಿನ ಬರಹ ಶ್ರೀ ಮದ್ದಾಮಣನ್ದಿ ಭಟ್ಟಾರಕರ ಗುಡ್ಡಿ ಚಿಕ್ಕಜೋಗಟ್ಟಿ[69] ಮತ್ತು ಐದು ಸಣ್ಣ ಮುಕ್ಕಾಲು ಪೀಠ, ಐದು ಸಣ್ಣ ಗಿಂಡಿಗಳು ಮತ್ತು ಒಂದು ಸಣ್ಣ ಘಂಟೆಯ ಮೇಲಿನ ಬರಹ ಚಿಕ್ಕಜೋಗಟೆ[70] ಎಂಬ ಮಾಹಿತಿಗಳು ಈ ಭಾಗದಲ್ಲಿ ಜೈನ ಸಮಾಜದ ವಿಚಾರಗಳನ್ನು ತಿಳಿಸುತ್ತವೆ. ಹಾಗೆಯೇ ಚಿಕ್ಕಕಾಟಿಯ ಗ್ರಾಮ ಶಾಸನ ಕ್ರಿ ಶ 1049 ರಲ್ಲಿ ಬರೆಯಲಾಗಿದೆ. ಇದು ಜೈನಧರ್ಮಕ್ಕೆ ಸಂಬಂಧಪಟ್ಟಿದ್ದು ಬಹಳ ಮಹತ್ವದ ದಾಖಲಾತಿಗಳಾಗಿವೆ. ಚೋಳರಸ 1ನೇ ರಾಜಾಧಿರಾಜನ ಆಳ್ವಿಕೆಯ ಕಾಲಕ್ಕೆ ಸೇರಿದ್ದು ಕೇಶವ ಭಟ್ಟನೆಂಬಾತ ತನ್ನ ಪೂರ್ವಿಕರ ನೆನಪಿಗಾಗಿ ದೇವಾಲಯವೊಂದನ್ನು ನಿರ್ಮಿಸಿ ಮಾದೇವಾ ಹಾಗೂ ಎಕ್ಕಗೊಣ್ಣದೇವರ ನಂದಾ ದೀಪಕ್ಕೆ ಭೂಮಿ ಹಸುಗಳನ್ನು ದಾನವನ್ನಾಗಿ ನೀಡಿದ ಸಂಗತಿಯನ್ನು ತಿಳಿಸುತ್ತದೆ.[71]

ಗುಂಡ್ಲುಪೇಟೆಯ ಕ್ರಿ.ಶ. 1196ರ ಜೈನ ಶಾಸನವು ಜೈನ ಸಮಾಜದ ಅಚಾರ ವಿಚಾರಗಳ ಬಗ್ಗೆ ಮಹತ್ವದ ಮಾಹಿತಿ ನೀಡುತ್ತದೆ. ಹೊಯ್ಸಳರ ವೀರಬಲ್ಲಾಳ ದೇವನು ದ್ವಾರಸಮುದ್ರದಿಂದ ಆಡಳಿತ ನಡೆಸುವಾಗ ಆತನ ಅಧಿಕಾರಿಯಾದ

ಕುಮಾರ ಲಕ್ಷ್ಮಣ ದಣ್ಣಾಯಕನು ಕುಡುಗನಾಡು–300 ಪ್ರದೇಶವನ್ನು ಆಳುತ್ತಿದ್ದ ಬಗ್ಗೆ ತಿಳಿದುಬರುತ್ತದೆ. ಅಲ್ಲದೆ ತುಪ್ಪೂರು ಗ್ರಾಮದಲ್ಲಿ ಹೊರಲಾದಿ ಕುಲದ ಬಿಟ್ಟಿಗಾವುಂಡನೆಂಬುವನು ಕಟ್ಟಿಸಿದ ಜಿನಾಲಯಕ್ಕೆ ಮಡಹಳ್ಳಿ ಗ್ರಾಮವನ್ನು ಕುಡುಗನಾಡ ಸಮಸ್ತ ಪ್ರಭುಗಾವುಂಡಗಳು ಕನಕನಂದಿ ಪಂಡಿತರಿಗೆ ದಾನಪೂರ್ವಕವಾಗಿ ಕೊಟ್ಟಿರುವ ಬಗ್ಗೆ ತಿಳಿಸುತ್ತದೆ.

ಅಡಿಟಿಪ್ಪಣಿಗಳು :

1. ಡಾ. ಸೂರ್ಯನಾಥ್ ಯು. ಕಾಮತ್, 'ಕರ್ನಾಟಕದ ಸಂಕ್ಷಿಪ್ತ ಇತಿಹಾಸ', ಪು.426.
2. ಬಾ.ರಾ. ಗೋಪಾಲ್, 'ಎಪಿಗ್ರಾಫಿಯ ಕರ್ನಾಟಕ', ಸಂ.03, ಪು.638.
3. ಅದೇ, ಪು.588.
4. ಅದೇ, ಪು.583.
5. ಅದೇ.
6. ಅದೇ, ಪು.600.
7. ಅದೇ, ಪು.623.
8. ಡಾ. ಸೂರ್ಯನಾಥ್ ಯು. ಕಾಮತ್, ಪು.119.
9. ಬಾ.ರಾ. ಗೋಪಾಲ್, ಪು.580.
10. ಅದೇ, ಪು.587.
11. ಅದೇ, ಪು.595.
12. ಅದೇ, ಪು.637.
13. ಅದೇ, ಪು.564.
14. ಮಂಜುನಾಥ್, ಜಿ.ಜಿ., 'ಸ್ಕಂದಗಿರಿ', ಪು.24
15. ಅದೇ, ಪು.643
16. ಅದೇ, ಪು.576
17. ಅದೇ.
18. ಅದೇ, ಪು.571.
19. ಅದೇ ಪು.606.
20. ಅದೇ, ಪು.590.
21. ಡಾ. ಪಳನಿಸ್ವಾಮಿ, 'ಗುಂಡ್ಲುಪೇಟೆ ತಾಲ್ಲೂಕು ಒಂದು ಅಧ್ಯಯನ', ಪು.57
22. ಬಿ.ಎಸ್. ರೈಸ್, ಪು.625.
23. ಅದೇ, ಪು.606.

24. ಅದೇ, ಪು.640.

25. ಅದೇ, ಪು.605.

26. ಅದೇ, ಪು.620.

27. ಅದೇ, ಪು.640.

28. ಅದೇ, ಪು.637.

29. ಮಂಜುನಾಥ್, ಜಿ.ಜಿ., ಪು.41.

30. ಬಾ.ರಾ. ಗೋಪಾಲ್, ಪು.571.

31. ಅದೇ, ಪು.593.

32. ಅದೇ, ಪು.632.

33. ಅದೇ, ಪು.603.

34. ಅದೇ, ಪು.607.

35. ಅದೇ, ಪು.605.

36. ಅದೇ, ಪು.599.

37. ಅದೇ, ಪು.571.

38. ಅದೇ, ಪು.574.

39. ಅದೇ, ಪು.588.

40. ಅದೇ, ಪು.583.

41. ಅದೇ, ಪು.587.

42. ಅದೇ, ಪು.595.

43. ಅದೇ, ಪು.567.

44. ಅದೇ, ಪು.618.

45. ಅದೇ, ಪು.640.

46. ಅದೇ, ಪು.572.

47. ಅದೇ, ಪು.594.

48. ಅದೇ, ಪು.606.

49. ಅದೇ, ಪು.631.

50. ಅದೇ, ಪು.571.

51. ಅದೇ, ಪು.622.

52. ಅದೇ, ಪು.632.

53. ಅದೇ ಪು.566.

54. ಅದೇ, ಪು.599.

55. ಡಾ. ಪಳನಿಸ್ವಾಮಿ, ಪು.62.

56. ಅದೇ, ಪು.587.

57. ಅದೇ, ಪು.600.

58. ಅದೇ, ಪು.62.

59. ಬಾ.ರಾ. ಗೋಪಾಲ್, ಪು.564.

60. ಅದೇ, ಪು.589.

61. ಅದೇ, ಪು.583.

62. ಅದೇ, ಪು.606.

63. ಅದೇ, ಪು.568.

64. ಅದೇ, ಪು.574.

65. ಅದೇ, ಪು.637.

66. ಅದೇ, ಪು.583.

67. ಅದೇ, ಪು.600.

68. ಅದೇ, ಪು.638.

69. ಅದೇ, ಪು.638.

70. ಡಾ. ಪಳನಿಸ್ವಾಮಿ, ಪು.34.

71. ಬಾ.ರಾ. ಗೋಪಾಲ್, ಪು.564.

ಅಧ್ಯಾಯ–5

ಉಪಸಂಹಾರ

ಅಧ್ಯಾಯ–5

ಉಪಸಂಹಾರ

**"ಧರ್ಮಾರ್ಥಕಾಮ ಮೋಕ್ಷಾಣಾಂ ಉಪದೇಶ ಸದುನ್ವಿತಂ
ಪುರಾವೃತ್ತಂ ಕಥಾಯುಕ್ತಂ ಇತಿಹಾಸ ಪಚಕ್ಷತೇ"**

ಇತಿಹಾಸವೆಂದರೆ ಕೇವಲ ಘಟನೆಗಳ ಸರಮಾಲೆಯಾಗಿರದೆ, ಜೀವನ ಮೌಲ್ಯಗಳನ್ನು ಬಿಂಬಿಸಿ ಜನರು ಅವುಗಳನ್ನು ರೂಢಿಸಿಕೊಳ್ಳುವಂತೆ ಪ್ರೇರೇಪಿಸುವುದಾಗಿದೆ ಎಂಬ ವಿಷಯವನ್ನು ಗಮನದಲ್ಲಿ ಇರಿಸಿಕೊಂಡು ಪ್ರಸ್ತುತ ಅಧ್ಯಯನ ನಡೆಸಲಾಗಿದೆ. ಕರ್ನಾಟಕದ ದಕ್ಷಿಣ ಅಂಚಿನಲ್ಲಿರುವ ಗುಂಡ್ಲುಪೇಟೆ ತಾಲ್ಲೂಕಿನ ಇತಿಹಾಸ ಮಹತ್ವದ ಪರಂಪರೆಯನ್ನು ಹೊಂದಿದೆ. ರಾಜಕೀಯ ಇತಿಹಾಸವು ಗಂಗರ ಕಾಲದಿಂದ ಆರಂಭವಾಗಿ ಮೈಸೂರು ಒಡೆಯರ ಕಾಲದವರೆಗೆ ವಿಸ್ತರಿಸಿದೆ. ಕರ್ನಾಟಕ ಇತಿಹಾಸದಲ್ಲಿ ಮೇರು ಸಾಮ್ರಾಟರು ಎಂದು ಹೆಸರಾಗಿರುವ ಗಂಗರು ಹೊಯ್ಸಳರು, ವಿಜಯನಗರದ ಅರಸರು ನೇರವಾದ (ಪ್ರತ್ಯಕ್ಷ) ಆಡಳಿತ ಹೊಂದಿರಲಿಲ್ಲ, ಬದಲಾಗಿ ಸಾಮಂತರು ಪಾಳೇಗಾರರುಗಳ ಮುಖಾಂತರ ನಿಯಂತ್ರಣ ಹೊಂದಿದ್ದರು. ಈ ಪಾಳೇಗಾರರುಗಳಿಗೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಿಕ ಅಧಿಕಾರವನ್ನು ನೀಡಿದ್ದರು. ಏಕೆಂದರೆ ತಮಿಳುನಾಡಿನ ರಾಜಮಹಾರಾಜರುಗಳ ಗಡಿಭಾಗ ಇದಾಗಿದ್ದರಿಂದ ರಕ್ಷಣೆಯ ದೃಷ್ಟಿಯಿಂದ ಮತ್ತು ಸಾಮ್ರಾಜ್ಯದ ರಾಜಧಾನಿಯಿಂದ ಬಹು ದೂರದ ಪ್ರದೇಶವಾಗಿದ್ದರಿಂದ ಪಾಳೇಗಾರರಿಗೆ ಹೆಚ್ಚಿನ ಅಧಿಕಾರ ನೀಡಿದ್ದರು.

ಗಂಗ ರಾಜರ ಆಡಳಿತದ ನಂತರ ಚೋಳರ ಕಾಲದ ಆಡಳಿತದಲ್ಲಿ ಈ ಭಾಗದ ಆಡಳಿತ ಭಾಷೆ ತಮಿಳಾಗಿತ್ತು. ಇದಕ್ಕೆ ಸಾಕ್ಷಿಯಾಗಿ ಶಾಸನಗಳು ದೊರೆತಿವೆ. ಹೊಯ್ಸಳ ಕಾಲದ ಕೆಲವು ಶಾಸನಗಳು ತಮಿಳು ಭಾಷೆಯಲ್ಲಿಯೇ ಪ್ರಕಟವಾಗಿದೆ. ಇದರಿಂದ ಭಾಷೆಯು ಕೇವಲ ಸಂವಹಣೆಗೆ ಬಳಕೆಯಾಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಆಡಳಿತ ಭಾಷೆಯಲ್ಲಿ ಶಾಸನಗಳನ್ನು ಹೊರಡಿಸುವ ಹಾಗೆಯೇ ಬಳಕೆಯಲ್ಲಿರುವ ಅಥವಾ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿಯು ಶಾಸನಗಳನ್ನು ಬರೆಸುತ್ತಿದ್ದರು. ಹೊಯ್ಸಳರು ಸಹ ನೇರವಾದ ಆಡಳಿತ ನಡೆಸದೆ, ಪದಿನಾಡು ಅಥವಾ ತೆರಕಣಾಂಬಿಯ ಪಾಳೇಗಾರರ ಮುಖಾಂತರ

ಆಡಳಿತ ನಡೆಸುತ್ತಿದ್ದರು. ಆದರೂ ಸಹ ಹೊಯ್ಸಳರ ನರಸಿಂಹ, ವಿಷ್ಣುವರ್ಧನ ಅರಸರುಗಳನ್ನು ಸ್ವತಂತ್ರ ಅರಸರು ಎಂದೂ ಶಾಸನಗಳು ಬಿಂಬಿಸುತ್ತದೆ.

ವಿಜಯನಗರದ ಅರಸರುಗಳಲ್ಲಿ ಕೃಷ್ಣದೇವರಾಯನ ವಿಚಾರವನ್ನು ಹೇಳುವ ಹೆಚ್ಚು ಶಾಸನಗಳು ದೊರೆತಿವೆ. ಇವುಗಳು ಆತನ ವಿಜಯದ ಸಂಕೇತವಾಗಿ ದಾನ ನೀಡಿರುವ ವಿವರಗಳಾಗಿವೆ. ಆದರೆ ಗುಂಡ್ಲುಪೇಟೆ ವಿಜಯನಗರ ಸಾಮ್ರಾಜ್ಯದ ನೇರ ಆಡಳಿತಕ್ಕೂ ಒಳಪಡದೇ ಸಾಮಂತ ಅಧೀನಕ್ಕೆ ಒಳಪಡುತ್ತದೆ. ಉಮ್ಮತ್ತೂರಿನ ಪಾಳೇಗಾರರು, ಮೈಸೂರಿನ ಒಡೆಯರು, ತೆರಕಣಾಂಬಿಯ ಪಾಳೇಗಾರರ ಅಧಿಕಾರ ವ್ಯಾಪ್ತಿಗೆ ಈ ತಾಲ್ಲೂಕಿನ ಭಾಗಗಳು ಹಂಚಿಕೆಯಾಗಿದ್ದು ಇವರುಗಳು ತಮ್ಮ ಶಾಸನಗಳ ಆರಂಭದಲ್ಲಿ ಮೂಲವಾದ ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯ, ರಾಮರಾಯ, ಅಚ್ಚುತರಾಯರುಗಳ ಹೆಸರನ್ನು ನಮೂದಿಸಿದ್ದಾರೆ.

ಮೈಸೂರು ಒಡೆಯರ ರಾಜಧಾನಿಯಾಗಿದ್ದ ಮೈಸೂರಿನಿಂದ ಗುಂಡ್ಲುಪೇಟೆ ಪಟ್ಟಣ 60 ಕಿ.ಮೀ ದೂರದಲ್ಲಿದ್ದರೂ ಈ ಭಾಗ ಒಡೆಯರ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವುದು 17ನೇ ಶತಮಾನದ ನಂತರವೆಷ್ಟೆ. ಮೈಸೂರಿನ ಒಡೆಯರಾಗಿದ್ದ ರಣಧೀರ ಕಂಠೀರವ ನರಸಿಂಹರಾಜ ಒಡೆಯರ ಕಾಲದಲ್ಲಿ ಗುಂಡ್ಲುಪೇಟೆ ತಾಲ್ಲೂಕು ಮೈಸೂರು ಒಡೆಯರ ನೇರ ಆಡಳಿತಕ್ಕೆ ಒಳಪಟ್ಟಿದೆ. ತಾಲ್ಲೂಕು ಹಾಗೂ ಮೈಸೂರು ಒಡೆಯರ ಅರಸು ಮನೆತನಕ್ಕೂ ಇರುವ ನಿಕಟ ಸಂಪರ್ಕವೆಂದರೆ ಇಬ್ಬರು ಒಡೆಯರ ಬಾಲ್ಯ ಶಿಕ್ಷಣ, ಸೈನಿಕ ತರಬೇತಿ, ಆಡಳಿತ ತರಬೇತಿಗಳು ಈ ಭಾಗದಲ್ಲೇ ನೆಡೆದಿದೆ. ತೆರಕಣಾಂಬಿಯಲ್ಲಿ ರಣಧೀರ ಕಂಠೀರವ ನರಸಿಂಹರಾಜ ಒಡೆಯರಿಗೆ ತರಬೇತಿ ದೊರೆತಿದೆ. ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಹಂಗಳ ಗ್ರಾಮದಲ್ಲಿ ರಾಜಕೀಯ ತರಬೇತಿ ನಡೆಯುತ್ತಿತ್ತು. ಈ ಅಂಶಗಳನ್ನು ವಿಶ್ಲೇಷಿಸಿದರೆ ಈ ತಾಲ್ಲೂಕಿನ ಜನತೆ ಮತ್ತು ಶ್ರೀಮಂತರು, ಸಾಮಂತರುಗಳು ಒಡೆಯರ ಮೇಲೆ ಹೊಂದಿದ್ದ ನಂಬಿಕೆ ಮತ್ತು ನಿಷ್ಠೆಯನ್ನು ಸೂಚಿಸುತ್ತದೆ. ಜೊತೆಗೆ ತಾಲ್ಲೂಕು ಸಾಮ್ರಾಜ್ಯದ ಗಡಿಭಾಗವಾಗಿದ್ದರೂ ಅರಾಜುಕತೆ, ದಂಗೆ ನಡೆಯುವ ಅರಾಜಕತೆಯ ಸ್ಥಳವಾಗಿರದೆ ಸುರಕ್ಷತೆಯ ಮತ್ತು ಶಾಂತಿ ಸ್ಥಾಪನೆಯಾಗಿದ್ದ ಭಾಗವಾಗಿತ್ತು.

ಗುಂಡ್ಲುಪೇಟೆ ತಾಲ್ಲೂಕಿನ ಭಾಗದ ಮೇಲೆ ಐದು ಪ್ರಬಲ ಸಾಮ್ರಾಜ್ಯಗಳು ತಮ್ಮ ನಿಯಂತ್ರಣ ಹೊಂದಿದ್ದು ಅನೇಕ ಪಾಳೇಯಪಟ್ಟುಗಳು ಅಧಿಕಾರ ಹೊಂದಿದ್ದನ್ನು ಕಾಣಬಹುದಾಗಿದೆ. ಸ್ಥಳೀಯ ಆಡಳಿತ, ಸಂಪ್ರದಾಯ, ಆಚರಣೆಗಳು, ನ್ಯಾಯ ಮತ್ತು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಪಾಳೇಗಾರರೇ ಹೊಂದಿದ್ದರು.

ಸಾಮಾಜಿಕ ವಿಚಾರದ ಬಗ್ಗೆ ಶಾಸನಗಳು ಹೆಚ್ಚು ವಿಚಾರಗಳನ್ನು ದಾಖಲಿಸದ ಕಾರಣದಿಂದಾಗಿ ಶಾಸನಗಳ ಪ್ರಕಾರಗಳಾದ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳನ್ನು

ಪ್ರಸ್ತುತ ಅಧ್ಯಯನದಲ್ಲಿ ಬಳಸಲಾಗಿದೆ. ಅಗ್ರಹಾರಗಳ ನಿರ್ಮಾಣವು ಒಂದು ಪ್ರಮುಖವಾದ ಸಾಮಾಜಿಕ ಕಾರ್ಯವಾಗಿರುವುದು ಈ ಭಾಗದಲ್ಲೂ ಬ್ರಾಹ್ಮಣರ ಪ್ರಭಾವವು ಹೆಚ್ಚಿತ್ತೆಂದು ತಿಳಿಸುತ್ತದೆ. ಬಹುತೇಕ ಶಾಸನಗಳಲ್ಲಿ ಗಂಗಾ ನದಿಯ ಬಯಲಿನ ಗೋವುಗಳನ್ನು ಕೊಂದ ಪಾಪ, 60000 ವರ್ಷಗಳವರೆಗೆ ಹುಳುಗಾಳಾಗಿ ಜನಿಸುವಂತೆ ಶಾಪ, ಬ್ರಾಹ್ಮಣ ಹತ್ಯೆ ಮಹಾ ಪಾಪ ಎಂದು ವಿವರಿಸಿದೆ. ಇದು ಸಮಾಜದಲ್ಲಿ ವೈದಿಕ ಧರ್ಮದ ಮೇಲಿರುವ ನಂಬಿಕೆ ಮತ್ತು ಭಯದ ಪರಿಸರವನ್ನು ಹೇಳುತ್ತದೆ.

ರಾಜ್ಯದ ಮತ್ತು ಸಮಾಜದ ರಕ್ಷಣೆಗಾಗಿ ಹೋರಾಟ ನಡೆಸಿದ ವೀರರಿಗೆ ಸ್ವರ್ಗ ಪ್ರಾಪ್ತಿಯಾಗಲೆಂದು ನಿರ್ಮಿಸಿದ ವೀರರ ಗುಡಿಗಳನ್ನು ಹೆಚ್ಚಾಗಿ ಕಾಣಬಹುದು. ಬಹುಶಃ ತಾಲ್ಲೂಕಿನ ಅರ್ಧದಷ್ಟು ಗ್ರಾಮಗಳು ಕಾಡಂಚಿನಲ್ಲಿರುವುದರಿಂದ ಕೃಷಿ ಚಟುವಟಿಕೆ ನಡೆಸಲು ಪ್ರಾಣಿಗಳಿಂದ ರಕ್ಷಣೆ ಬೇಕಾಗುತ್ತದೆ. ವ್ಯವಸಾಯಕ್ಕಿರುವ ರಕ್ಷಣೆಯ ಸಮಸ್ಯೆಯಿಂದ, ಹೆಚ್ಚಿನ ಯುವಕರು ಸೈನ್ಯಕ್ಕೆ ಸೇರಿರಬಹುದು ಅಥವಾ ಈ ಭಾಗಗಳು ಕಾಡಿನ ಪ್ರದೇಶದಿಂದ ಕೂಡಿರುವುದರಿಂದ ಗುಡ್ಡಗಾಡಿನ ಜನರನ್ನು ಸೈನ್ಯಕ್ಕೆ ದಂಡಾಧಿಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಸೇರಿಸಿಕೊಂಡಿರಬೇಕು. ಇದರಿಂದಗಿಯೂ ಹೆಚ್ಚಿನ ವೀರಗಲ್ಲುಗಳು ದೊರೆತಿವೆ. ವೀರಗಲ್ಲುಗಳಷ್ಟು ಮಹತ್ವ ಹೊಂದಿರುವ ಮಹಾಸತಿಕಲ್ಲುಗಳು ಸಹ ಈ ಭಾಗದಲ್ಲಿ ದೊರೆತಿವೆ.

ಕರ್ನಾಟಕದ ಮಳೆ ನೆರಳಿನ ಪ್ರದೇಶಕ್ಕೆ ತಾಲ್ಲೂಕಿನ ಭಾಗವು ಒಳಪಡುತ್ತದೆ. ಮಳೆಯೇ ಕೃಷಿಗೆ ಮೂಲ ಆಧಾರವಾಗಿದೆ. ಈ ಅನಿರ್ಧಿಷ್ಟ ಮಳೆಯ ಅವಲಂಬನೆಯನ್ನು ಕಡಿಮೆ ಮಾಡಲು ಕೆರೆ ಮತ್ತು ಬಾವಿಗಳನ್ನು ತೆಗೆಸಿದ್ದಾರೆ ಮತ್ತು ಕೆರೆ ಹಾಗೂ ಬಾವಿಯನ್ನು ತೆಗೆಸುವುದರಿಂದ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ನಂಬಿದ್ದರು. ಪ್ರಮುಖವಾಗಿ ರಾಗಿ, ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ರೈತರು ಬೆಳೆದ ಆಹಾರ ಪದಾರ್ಥಗಳು ಮತ್ತು ಅರಣ್ಯದ ವಸ್ತುಗಳನ್ನು ಮಾರಾಟ ಮಾಡುವ ವರ್ತಕ ಸಂಘಗಳಿದ್ದವು, ಜೊತೆಗೆ ವ್ಯಾಪಾರಿ ಮಾರ್ಗಗಳನ್ನು ಸಹ ರೂಪಿಸಿಕೊಂಡಿದ್ದರು.

ಕರ್ನಾಟಕದ ಇತಿಹಾಸದಲ್ಲಿ ದಾಖಲಾಗಿರುವಂತೆ ವರ್ತಕರ ಸಂಘಗಳನ್ನು ಕಾಣಬಹುದಾಗಿದೆ. ಇವುಗಳು ವ್ಯಾಪಾರ ಮತ್ತು ಸಾರಿಗೆ ಸುಂಕಗಳನ್ನು ನೀಡಬೇಕಾಗಿತ್ತು. ಹಾಗೆಯೇ ಸಾಮಾಜಿಕ ಕಲ್ಯಾಣ ಕಾರ್ಯ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವು. ಹಾಗೂ ಬೇರೆ ಬೇರೆ ಜಾಗದಲ್ಲಿ ವಿಭಿನ್ನ ನಾಣ್ಯಗಳನ್ನು ಮುದ್ರಿಸಿದ್ದಾರೆ ಹಾಗೂ ಬೇರೆ ಬೇರೆ ಅಳತೆಗೋಲುಗಳನ್ನು ಬಳಸುತ್ತಿದ್ದರು. ವ್ಯಾಪಾರ ತೆರಿಗೆ ಪಾವತಿ ಮಾಡುವಾಗ ಹಾಗೂ ದಿನ ನಿತ್ಯದ ಜೀವನದಲ್ಲಿ ನಾಣ್ಯಗಳನ್ನು ಬಳಸುತ್ತಿದ್ದರು. ಹೆಚ್ಚಿನ ಶಾಸನಗಳಲ್ಲಿ ಗದ್ಯಾಣ ಮತ್ತು ಪಣಗಳ ಉಲ್ಲೇಖ

ಕಂಡುಬರುತ್ತದೆ. ಒಟ್ಟಾರೆ ದಾಖಲಾಗಿರುವ ವಿಚಾರಗಳನ್ನು ಗಮನಿಸಿದರೆ ವ್ಯವಹಾರಿಕವಾಗಿ ಮತ್ತು ನ್ಯಾಯಬದ್ಧ ಆರ್ಥಿಕ ವ್ಯವಸ್ಥೆ ಅಸ್ಥಿತ್ವದಲ್ಲಿತ್ತು.

ರಾಜ್ಯದ ಮೂಲ ಆದಾಯವೇ ತೆರಿಗೆಯಾಗಿದೆ. ತೆರಿಗೆ ಬಗ್ಗೆ ಶಾಸನಗಳಲ್ಲಿ ಕಟ್ಟು ನಿಟ್ಟಿನ ನಿರ್ಧಾರಗಳಿವೆ ಮತ್ತು ವಿಶೇಷವಾಗಿ ಕೆಲವು ಶಾಸನಗಳಲ್ಲಿ ರಿಯಾಯಿತಿಯನ್ನು ಕಾಣಬಹುದು. ಕೆಲವು ಶಾಸನಗಳಲ್ಲಿ ರಾಜರು ದಾನ ನೀಡುವಾಗ ತೆರಿಗೆ ರಿಯಾಯಿತಿ ನೀಡಿರುವುದನ್ನು ತಿಳಿಯಬಹುದು. ಜೊತೆಗೆ ದೇವಾಲಯಗಳಿಗೆ ದಾನ ನೀಡಿರುವ ವಿಚಾರಗಳು ಹಾಗೂ ನಿರ್ಧಿಷ್ಟ ವಿಚಾರಗಳಿಗೆ ಸಂಬಂಧಿಸಿದಂತೆ ರಿಯಾಯಿತಿ ನೀಡಲಾಗಿದೆ.

ಕರ್ನಾಟಕದಲ್ಲಿ ಕಂಡುಬರುವ ಎಲ್ಲಾ ಧರ್ಮ ಮತ್ತು ಜಾತಿಗಳನ್ನು ಗುಂಡ್ಲುಪೇಟೆ ತಾಲ್ಲೂಕಿನ ಭಾಗದಲ್ಲೂ ಕಾಣಬಹುದು. ಪ್ರಮುಖವಾಗಿ ವೈಷ್ಣವ, ಶೈವ ಧರ್ಮ, ಜೈನಧರ್ಮ, ವೀರಶೈವ ಧರ್ಮಗಳನ್ನು ಶಾಸನಗಳಲ್ಲಿ ಕಾಬಹುದಾಗಿದೆ. ಸದರಿ ಧರ್ಮಗಳ ಸಮುದಾಯದ ಸಂಸ್ಥೆಗಳಿಗೆ ದಾನಗಳನ್ನು ನೀಡಿದ್ದಾರೆ. ಗಂಗರ ಕಾಲದಲ್ಲಿ ವೈಷ್ಣವ ಧರ್ಮ ಪ್ರಬಲವಾಗಿದ್ದು ಎಲ್ಲಾ ಶಾಸನಗಳು ವೈಷ್ಣವರಿಗೆ ಆದ್ಯತೆ ನೀಡಿವೆ. ಹಾಗೂ ಹೊಯ್ಸಳರ ಆಡಳಿತದಲ್ಲೂ ವೈಷ್ಣವ ಧರ್ಮ ಪ್ರಬಲವಾಗಿತ್ತು. ಇವರ ಸಾಮಂತರಾದ ತೆರಕಣಾಂಬಿಯ ಪಾಳೆಗಾರರ ಆಡಳಿತ ಕಾಲದಲ್ಲಿ ವೈಷ್ಣವ ದೇವಾಲಯಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಕೃಷ್ಣನ ದೇವಾಲಯಗಳು ಹೆಚ್ಚು, ಆದರೆ ಚೋಳರ ಕಾಲದಲ್ಲಿ ಜೈನ ಧರ್ಮ ಮತ್ತು ಶೈವಧರ್ಮಕ್ಕೆ ಹೆಚ್ಚು ಆದ್ಯತೆ ನೀಡಿರುವುದನ್ನು ತಿಳಿಯಬಹುದು.

ವಿಜಯನಗರ ಕಾಲದಲ್ಲಿ ವೈಷ್ಣವರು ಈ ತಾಲ್ಲೂಕಿನ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇದ್ದರು, ಜೊತೆಗೆ ಶೈವ ಧರ್ಮದ ವೀರಶೈವ ಮಠಗಳ ಸ್ಥಾಪನೆ ಮತ್ತು ಬೆಳವಣಿಗೆಗೆ ದಾನ ದತ್ತಿ ನೀಡಿದ್ದಾರೆ. ಮೈಸೂರಿನ ಒಡೆಯರು ವೈಷ್ಣವ ದೇವಾಲಯಗಳಿಗೆ ಅಪಾರ ಪ್ರಮಾಣದಲ್ಲಿ ದಾನ ನೀಡಿದ್ದಾರೆ. ವೀರಶೈವ ಧರ್ಮದ ಮಠಗಳನ್ನು ಸ್ಥಾಪಿಸಲು ಸಹಾಯ ಮಾಡಿ ಧರ್ಮಸಹಿಷ್ಣುಗಳಾಗಿದ್ದು, ಜೈನಧರ್ಮಕ್ಕೆ ದಾನ ನೀಡಿರುವ ವಿಚಾರಗಳನ್ನು ತಿಳಿಯಬಹುದು.

ಧಾರ್ಮಿಕ ಇತಿಹಾಸವನ್ನು ಹೇಳುವಲ್ಲಿ ದಾನ ಶಾಸನಗಳು ಪ್ರಮುಖವಾದ ಪಾತ್ರ ವಹಿಸುತ್ತವೆ. ಇವುಗಳಲ್ಲಿ ಭೂಮಿ ದಾನ ನೀಡಿರುವ ವಿಚಾರ ಹೆಚ್ಚಾಗಿದೆ. ಪ್ರಮುಖವಾಗಿ ಕೆಲವು ಶಾಸನಗಳು ಇಡೀ ಊರನ್ನು ದಾನ ನೀಡಿರುವ ವಿಷಯವನ್ನು ವಿವರಿಸುತ್ತವೆ. ಹಾಗೆಯೇ ನಿರ್ದಿಷ್ಟವಾಗಿ ಉತ್ಸವಕ್ಕೆ ಮತ್ತು ಬೆಳಗಿನ ಪೂಜೆ, ಸಮಾರಾಧನೆಗೆ ದಾನ ನೀಡಿದ್ದಾರೆ. ಕೆಲವರು ವಿಗ್ರಹಗಳನ್ನು ದಾನ ನೀಡಿದ್ದಾರೆ, ಮುಖ್ಯವಾಗಿ ನಿತ್ಯ ಪೂಜೆಗಾಗಿ ದಾನ ನೀಡಲಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನ ಭಾಗದಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಶ್ರೀಮಂತವಾಗಿ

ರೂಪುಗೊಂಡಿತ್ತು. ಈ ಸಾಂಸ್ಕೃತಿಕ ವಿಚಾರಗಳನ್ನು ಶಾಸನಗಳಲ್ಲಿ ದಾಖಲಿಸಿರುವುದು ಪ್ರಸ್ತುತ ಅಧ್ಯಯನದಿಂದ ತಿಳಿದು ಬಂದಿದೆ.

ಪ್ರಸ್ತುತ ಅಧ್ಯಯನದಲ್ಲಿ ತಾಲ್ಲೂಕಿನ ರಾಜಕೀಯ ಇತಿಹಾಸವನ್ನು ರಾಜ-ಮಹಾರಾಜರುಗಳ ವಂಶಾವಳಿಯ ಶೀರ್ಷಿಕೆಯಂತೆ ಸಾಂಸ್ಕೃತಿಕ ದೃಷ್ಟಿಯಿಂದ ನೋಡಲಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ. ಧಾರ್ಮಿಕ ವಿಚಾರಗಳನ್ನು ಸಹ ವಿವರವಾಗಿ ಶಾಸನಗಳು ಮತ್ತು ಕ್ಷೇತ್ರಕಾರ್ಯದ ಸಹಾಯದಿಂದ ವಿಶ್ಲೇಷಿಸಲಾಗಿದೆ. ಸದರಿ ಅಧ್ಯಯನದಲ್ಲಿ ಸಾಂಸ್ಕೃತಿಕ ಇತಿಹಾಸವನ್ನು ವಿಶ್ಲೇಷಣಾತ್ಮಕ ದೃಷ್ಟಿಯಿಂದ ನೋಡುವ ಪ್ರಯತ್ನ ಮಾಡಲಾಗಿದೆ. ಈ ನಿಟ್ಟಿನಲ್ಲಿ ಇನ್ನು ಹೆಚ್ಚಿನ ಐತಿಹಾಸಿಕ ಸಂಶೋಧನೆಗಳು ನಡೆಸಬೇಕಾಗಿರುವುದು ಅಗತ್ಯವಾಗಿದೆ. ಒಟ್ಟಾರೆ ಈ ಸಂಶೋಧನಾ ಅಧ್ಯಯನದ ಮೂಲಕ ಗುಂಡ್ಲುಪೇಟೆ ತಾಲ್ಲೂಕಿನ ಸಾಂಸ್ಕೃತಿಕ ಇತಿಹಾಸದ ಮೇಲೆ ಸೀಮಿತ ವ್ಯಾಪ್ತಿಯಲ್ಲಿ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡಲಾಗಿದೆ.

ಪರಮಾರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ಆಂಗ್ಲ ಕೃತಿಗಳು :

1. Gopal, B.R., 'Epigraphy of Karnataka, Institute of Kannada Studies, Epicraphia Carnatica, Vol.III and IV, University of Mysore, 1974.
2. Francis Buchaman, 'A Journey from Madras through the conntics of Mysore Canara & Malabar, London, 1807.
3. Gururajachar, S. 'Some Aspects of Economic and Social life in Karnataka', Prasaranga, Universityof Mysore, 1974.
4. Nilakanta Shastri, K.A., 'A History of South India', Oxford Indian Paperbacks, 2006.
5. Rice, B.L. , 'History of Mysore', 1879.
6. Rice, B.L., 'Mysore Gazetter', Vol.I.
7. Shama Rao, 'Modren Mysore.'
8. Suryanath U. Kamath, 'Mysore Gazetter', Government Press, Bangalore, 1988.

ಕನ್ನಡ ಕೃತಿಗಳು :

1. ಅನಂತರಂಗಚಾರ್ಯ ಮತ್ತು ಡಿ.ವಿ.ಕೆ., 'ಕನ್ನಡ ಶಾಸನಗಳು', ಬೆಂಗಳೂರು.
2. ಉಷಾರಾಣಿ, ಹೆಚ್.ಎಸ್., 'ಶಾಸನಾಂತರಂಗ', ಶ್ರೀ ದುರ್ಗಾಪ್ರಕಾಶನ, ಮೈಸೂರು 2009.
3. ಕೃಷ್ಣರಾವ್ ಎಂ.ವಿ. ಮತ್ತು ಎಂ. ಕೇಶವಭಟ್ಟ, 'ಕರ್ನಾಟಕ ಇತಿಹಾಸ ದರ್ಶನ', ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ಆಗಸ್ಟ್ 1970.
4. ಗೀತಾದೇವಿ, ಸಿ.ಎಸ್., 'ಇತಿಹಾಸ-1', ಹಿಮಾಲಯ ಪಬ್ಲಿಷಿಂಗ್ ಹೌಸ್, 2004.
5. ಚೆಲುವರಾಜು, ಹೆಚ್.ಎಲ್., 'ಹಂಗಳ ದರ್ಶನ', ಶ್ರೀನಿವಾಸ ಪ್ರಕಾಶನ, ಹಂಗಳ, 2000.

6. ಚಿದಾನಂದಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು, 2002.

7. ರಂಗನಾಥ್ (ಪ್ರ.ಸಂ.), 'ಕರ್ನಾಟಕ ಒಂದು ಪರಿಚಯ', ಮೈಸೂರು ಬುಕ್ ಹೌಸ್, 2010.

8. ರಾಜಶೇಖರ ಪಡಗೂರು, ಪಿ.ಸಿ., 'ಗುಂಡ್ಲುಪೇಟೆ ತಾಲ್ಲೋಕಿನ ದಾನಿಗಳು', ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು.

9. ರಾಜಶೇಖರ ಪಡಗೂರು, ಪಿ.ಸಿ., 'ಬೇರಂಬಾಡಿ ಕೆರೆತಡಿ ಮಹದೇಶ್ವರರು', ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು, 2005.

10. ರಾಜಶೇಖರ ಪಡಗೂರು, ಪಿ.ಸಿ., 'ಮಹಾಮಹಿಮ ಶ್ರೀ ಕಬ್ಬಿಣ ಕೊಲೇಶ್ವರರು', ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು, 2004.

11. ರಾಜಶೇಖರ್, ಪಿ.ಸಿ., 'ಗುಂಡ್ಲುಪೇಟೆ ತಾಲ್ಲೂಕಿನ ವೀರಶೈವ ಮಠಗಳು', ರಾಜೇಶ್ವರಿ ಪ್ರಕಾಶನ, ಪಡಗೂರು, ಗುಂಡ್ಲುಪೇಟೆ ತಾಲ್ಲೂಕು, 2006.

12. ನಗೇಗಲ್ಲ, ಎಂ.ಎಸ್., 'ಉತ್ತರ ಗದಗ ಜಿಲ್ಲೆಯ ಶಾಸನಗಳು ಒಂದು ಅಧ್ಯಯನ', ರಶ್ಮಿ ಪ್ರಕಾಶನ, ಗದಗ, 2009.

13. ನರಸಿಂಹಮೂರ್ತಿ, ಎ.ವಿ., 'ಕರ್ನಾಟಕ ನಾಣ್ಯ ಪರಂಪರೆ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2003.

14. ನಾಯಕರ ಹಲುಗಪ್ಪ, 'ಶಾಸನಗಳ ಪ್ರಕಾರ ಮತ್ತು ಅವುಗಳ ಮಹತ್ವ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011.

15. ನಾರಾಯಣಸ್ವಾಮಿ, ಹೆಚ್.ವಿ., 'ವನಶ್ರೀ', ಮೈಸೂರು, 1982.

16. ಪರಮಶಿವಮೂರ್ತಿ, ಡಿ.ವಿ., 'ಕೃಷ್ಣದೇವರಾಯನ ಶಾಸನಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2010.

17. ಪರಮಶಿವಮೂರ್ತಿ, ಡಿ.ವಿ., 'ಪ್ರೌಢದೇವರಾಯನ ಶಾಸನಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.

18. ಪಳನಿಸ್ವಾಮಿ, 'ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ', ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.

19. ಭಟ್ಟ, ಜಿ.ಎನ್., 'ಗುಂಡ್ಲುಪೇಟೆ ತಾಲ್ಲೂಕು ದರ್ಶನ', ಎ.ಬಿ.ಹೆಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು, 1987.

20. ಮಂಜುನಾಥ್ ಜಿ.ಜಿ., 'ಸ್ಕಂದಗಿರಿ', ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು.

21. ಮಲೆಯೂರು ಗುರುಸ್ವಾಮಿ (ಪ್ರೊ.), 'ಹೊನ್ನುಹೊಳೆ', ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ.

22. ವಾಸು, ಎಂ.ವಿ., 'ದಕ್ಷಿಣ ಕರ್ನಾಟಕದ ಅರಸು ಮನೆಗಳು', ಪ್ರಸರಾಂಗ, ಹಂಪಿ, 2011.

23. ವೆಂಕಟೇಶ್ ಇಂದ್ವಾಡಿ, 'ದೇವಚಂದ್ರನ ರಾಜಾವಳೀ ಕಥೆ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003.

24. ಶೇಷಶಾಸ್ತ್ರಿ, ಆರ್., 'ಕರ್ನಾಟಕದ ವೀರಗಲ್ಲುಗಳು', ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, 2008.

25. ಶ್ರೀನಿವಾಸ್ ಪಾಡಿಗಾರ್, 'ಭಾರತೀಯ ಇತಿಹಾಸ ಶಾಸನ ಆಕಾರಗಳು', ರಾಮಾಶ್ರಯ ಪಬ್ಲಿಕೇಶನ್ಸ್, ಧಾರವಾಡ, 2004.

26. ಸೂರ್ಯನಾಥ ಯು. ಕಾಮತ್, 'ಕರ್ನಾಟಕ ಸಂಕ್ಷಿಪ್ತ ಇತಿಹಾಸ', ಎಂ.ಸಿ.ಸಿ. ಪಬ್ಲಿಕೇಷನ್ಸ್, 2005.

27. ಸಿ.ಪಿ.ಕೆ., 'ಶಾಸನಶಾಸ್ತ್ರ ಪ್ರವೇಶ', ಚೇತನ ಬುಕ್ ಹೌಸ್, ಮೈಸೂರು, 2001.

28. ಹಾ.ಮಾ. ನಾಯಕ್, ಪ್ರ.ಸಂ.ದ., 'ಕನ್ನಡ ವಿಷಯ ವಿಶ್ವಕೋಶ', ಮೈಸೂರು, 1979.

ಅನುಬಂಧ

1. ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳು
2. ಛಾಯಾಚಿತ್ರಗಳು
3. ಅಧ್ಯಯನದ ಸ್ಥಳವನ್ನು ಸೂಚಿಸುವ ನಕ್ಷೆ

ಅನುಬಂಧ

ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳು

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
01	ಗುಂಡ್ಲುಪೇಟೆ	26 ಅಕ್ಟೋಬರ್ 1517	ವಿಜಯನಗರ	ಕೃಷ್ಣದೇವರಾಯ	ಲೋಹ – ತಾಮ್ರ ಭಾಷೆ – ಸಂಸ್ಕೃತ ಧರ್ಮ – ವೈಷ್ಣವ
02	ಗುಂಡ್ಲುಪೇಟೆ	20 ನವೆಂಬರ್ 1704			ಭಾಷೆ – ನಾಗರಿ ಧರ್ಮ – ವೈಷ್ಣವಿ
03	ಗುಂಡ್ಲುಪೇಟೆ	1916	ಹೊಯ್ಸಳ	ವೀರಬಲ್ಲಾಳ ದೇವರು	ಕುಡುಗುನಾಡು 300 ತೆರಿಗೆ – ಬೇಲಿ ಧರ್ಮ – ಜೈನ
04	ಗುಂಡ್ಲುಪೇಟೆ	16ನೇ ಶತಮಾನ			ಅಳತೆ – ಕಂಬ 100
05	ಗುಂಡ್ಲುಪೇಟೆ	26 ಜುಲೈ 1543			ವಿಜಯನಾರಾಯಣ (ದೇವಾಲಯ) ಭಾಷೆ – ನಾಗರಿ
06	ಗುಂಡ್ಲುಪೇಟೆ	7 ಏಪ್ರಿಲ್ 1554			
07	ಗುಂಡ್ಲುಪೇಟೆ	17ನೇ ಶತಮಾನ			ಪರವಾಸು ದೇವಾಲಯ
0	ಗುಂಡ್ಲುಪೇಟೆ	17ನೇ ಶತಮಾನ		ದೊಡ್ಡದೇವರಾಜ ವರದ	
09	ಗುಂಡ್ಲುಪೇಟೆ	15ನೇ ಶತಮಾನ			ವೀರಶೈವ ಮಠ
10	ಗುಂಡ್ಲುಪೇಟೆ	16ನೇ ಶತಮಾನ		ಚಿಕ್ಕನಂಜಯ್ಯ ಅರಸು	ಮಹಾಧಿರಾಜೊಡೆಯನ ಮಗ ವಿಶ್ವನಾಥ ಒಡೆಯ

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
11	ಗುಂಡ್ಲುಪೇಟೆ	14ನೇ ಶತಮಾನ			ಭಾಷೆ – ಸಂಸ್ಕೃತ
12	ಗುಂಡ್ಲುಪೇಟೆ	7 ಮಾರ್ಚ್ 1372	ವಿಜಯನಗರ	ಚಿಕ್ಕಕಂಪಣ್ಣ ಒಡೆಯ ಬಿನ್ ವೀರಬುಕ್ಕಣ್ಣ ಒಡೆಯ	
13	ಗುಂಡ್ಲುಪೇಟೆ	14ನೇ ಶತಮಾನ		ಬುಕ್ಕಚಕ್ರೇಶ್ವರ	
14	ಗುಂಡ್ಲುಪೇಟೆ	14ನೇ ಶತಮಾನ			ಅಧಿಕಾರಿ – ನಾಗಣ್ಣದೇಶ
15	ಗುಂಡ್ಲುಪೇಟೆ	14ನೇ ಶತಮಾನ			
16	ಗುಂಡ್ಲುಪೇಟೆ	14ನೇ ಶತಮಾನ			
17	ಗುಂಡ್ಲುಪೇಟೆ	15 ಮಾರ್ಚ್ 1372			ಬಡಗಿ, ಅಕ್ಕಸಾಲಿಗ, ಕಂಚಗಾರ
18	ಮಡೆಹಳ್ಳಿ	24 ಡಿಸೆಂಬರ್ 1374	ವಿಜಯನಗರ	ಚಿಕ್ಕಕಂಪಣ್ಣ ಒಡೆಯ	ಕೊಡಗುನಾಡು
19	ಭೀಮನಬೀಡು	16ನೇ ಶತಮಾನ	ವಿಜಯನಗರ	ಕೃಷ್ಣರಾಯ	ಭಾಷೆ – ಕನ್ನಡ ಅಧಿಕಾರಿ – ಗೋವಿಂದರಾಜ
20	ಭೀಮನಬೀಡು	16ನೇ ಶತಮಾನ			
21	ಭೀಮನಬೀಡು	18ನೇ ಶತಮಾನ			
22	ಮೂಕಹಳ್ಳಿ	16ನೇ ಶತಮಾನ			
23	ಮಾಸಹಳ್ಳಿ	12 ಸೆಪ್ಟೆಂಬರ್ 1546	ವಿಜಯನಗರ	ಸದಾಶಿವರಾಯ	ತೆರಿಗೆ – ಬೇ(ಬೆ)ಡಿ(ಡು)ಗೆ ಅಧಿಕಾರಿ – ಹಂಗೆ ಒಡೆಯ
24	ಚನ್ನಮಲ್ಲಿಪುರ	1430	ತೆರಕಣಾಂಬಿ	ಚಿಕ್ಕಣ್ಣ ಒಡೆಯ ಬಿನ್ ಸೋಮಣ್ಣ ಒಡೆಯ	ಕುಡುಗುನಾಡು ಅಧಿಕಾರಿ – ನಂಜದೇವರಸ

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
25	ದೇಶೀಪುರ	10 ಏಪ್ರಿಲ್ 1665	ವಿಜಯನಗರ	ದೇವರಾಜ ಒಡೆಯ (ಮೈಸೂರು)	
26	ಹೊಣಕನಹಳ್ಳಿ	27 ಫೆಬ್ರವರಿ 1506	ವಿಜಯನಗರ	ನರಸಿಂಹ ಮಹಾರಾಯ	
27	ಮಳವಳ್ಳಿ	1559–60	ವಿಜಯನಗರ	ಸದಾಶಿವರಾಯ	
28	ಹಸುಗೂಲಿ	1029			ಕುಡುಗನಾಡು ಅಧಿಕಾರಿ – ಅದವಗಾವುಂಡ
29	ಹಸುಗೂಲಿ	1546			ನಂಜುಂಡೇಶ್ವರ ದೇವಸ್ಥಾನ
30	ಹಸುಗೂಲಿ	18ನೇ ಶತಮಾನ			ಅಧಿಕಾರಿ – ಅಣ್ಣಪ್ಪನಾಯಕ
31	ಹಸುಗೂಲಿ	17 ಅಕ್ಟೋಬರ್ 1287			
32	ಹಸುಗೂಲಿ				ಮಹಾರಾಜವಾಡಿ 7000
33	ಹೂಕುಂದ	30 ಮೇ 1668	ಮೈಸೂರು (ದೊಡ್ಡದೇವರಾಜ ಒಡೆಯ)	ವೀರವೆಂಕಟಪತಿರಾಯ	
34	ಆಲತ್ತೂರು		ಹೊಯ್ಸಳ	ವೀರಬಲ್ಲಾಳ ದೇವ	ತೆರಿಗೆ – ನಾಯಿಂದರ ತೆರಿಗೆ
35	ಆಲತ್ತೂರು	17ನೇ ಶತಮಾನ			ಹೊಸ ವೀರಸಿಂಗಯ್ಯ ಶೆಟ್ಟಿ
36	ಆಲತ್ತೂರು (ವೀರಗಲ್ಲು)	19ನೇ ಶತಮಾನ			ಚೋಳನಾಡು
37	ಆಲತ್ತೂರು (ವೀರಗಲ್ಲು)				
38	ಮಂಚಹಳ್ಳಿ	16ನೇ ಶತಮಾನ			
39	ರಾಘವಾಪುರ	17 ಏಪ್ರಿಲ್ 1507		ವೀರಚಿಕ್ಕರಾಯ ಒಡೆಯ	ತೆರಿಗೆ – ಬೋಗಾಡುದೇಣಿ ತೆರಿಗೆ – ಹೊರನಾಡು

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
40	ರಾಘವಾಪುರ	20 ಜುಲೈ 1320	ಹೊಯ್ಸಳ	3ನೇ ವೀರಬಲ್ಲಾಳ	ಶ್ರೀ ಭರತಜೀಯ ದಣ್ಣಾಯಕ ಬಿನ್ ಮಾದವ ದಣ್ಣಾಯಕ
41	ತಗ್ಗಲೂರು	9 ಡಿಸೆಂಬರ್ 1322	ಹೊಯ್ಸಳ	3ನೇ ವೀರಬಲ್ಲಾಳ	
42	ತಗ್ಗಲೂರು		ಗಂಗರು	ಶ್ರೀ ಪುರುಷ	ತೆರಿಗೆ – ಪಣಪುಲ್ಲು, ಅವುಕ್ಕ
43	ತಗ್ಗಲೂರು		ಗಂಗರು	ಶ್ರೀ ಪುರುಷ	
44	ಬೇಗೂರು	1663–64			
45	ಬೆಳಚವಾಡಿ	10ನೇ ಶತಮಾನ			
46	ಬೆಳಚವಾಡಿ	2 ಏಪ್ರಿಲ್ 1549	ವಿಜಯನಗರ	ಸದಾಶಿವರಾಯ	ಅಧಿಕಾರಿ–ಗೋವಿಂದರಾಯ ದೇವರು
47	ಬೆಳಚವಾಡಿ	4 ಜುಲೈ 1171	ಹೊಯ್ಸಳರು	ನರಸಿಂಹದೇವ	ಬೇಲಿ – ಅಳತೆ
48	ಬೆಳಚಲವಾಡಿ	24 ಡಿಸೆಂಬರ್ 1013		ನೀತಿಮಾರ್ಗ ಪೆರುಮಾಡಿ	
49	ಕೋಟೆಗೆರೆ	15 ಜುಲೈ 1548	ವಿಜಯನಗರ	ಸದಾಶಿವರಾಯ	ತೆರಿಗೆ – ಮಗ್ಗ (ಮೊಗ್ಗ) ತೆರಿಗೆ – ಮನೆದಣ
50	ಕೋಟೆಗೆರೆ (ವೀರಗಲ್ಲು)	10ನೇ ಶತಮಾನ			
51	ಹೊರೆಯಾಲ	9ನೇ ಶತಮಾನ			ತುಂಡುರಾಜ್ಯ ತೆರಿಗೆ – ಅಡಲು
52	ಹೊರೆಯಾಲ	9ನೇ ಶತಮಾನ			ತುಂಡುರಾಜ್ಯ
53	ಹೊರೆಯಾಲ	3 ನವೆಂಬರ್ 1546	ವಿಜಯನಗರ	ಅಚ್ಯುತರಾಯ	
54	ಅರೆಪುರ	16ನೇ ಶತಮಾನ			

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
55	ಹಿರೀಕಾಟಿ	7 ಫೆಬ್ರವರಿ 1533			
56	ಚಿಕ್ಕಕಾಟಿ	5 ಫೆಬ್ರವರಿ 1049	ಚೋಳರು	ರಾಜಾಧಿರಾಜ ಒಡೆಯ	ಅಳತೆ – 100 ಭತ್ತ
57	ಚಿಕ್ಕಕಾಟಿ	9ನೇ ಶತಮಾನ	ಗಂಗರು	ಸತ್ಯವಾಕ್ಯ ಪೆರ್ಮಡಿ	
58	ತೊರವಳ್ಳಿ	10ನೇ ಶತಮಾನ			ತುಂಡುರಾಜ್ಯ
59	ತೊಂಡವಾಡಿ(ವೀರಗಲ್ಲು)	975			
60	ತೊಂಡವಾಡಿ				
61	ತೊಂಡವಾಡಿ (ತಾಮ್ರಶಾಸನ)		ವಿಜಯನಗರ		ವೀರಶೈವ
62	ನಿಟ್ರೆ	24 ಡಿಸೆಂಬರ್ 1009			
63	ನಿಟ್ರೆ	13ನೇ ಶತಮಾನ			ಮಾರಯ್ಯ
64	ನಿಟ್ರೆ	1062–63	ಹೊಯ್ಸಳ	ವೀರನರಸಿಂಹ	ಮಲ್ಲಿಕಾರ್ಜುನ ದಣ್ಣಾಯಕ
65	ಕಮರಹಳ್ಳಿ	15ನೇ ಶತಮಾನ			
66	ಕಮರಹಳ್ಳಿ	15–16ನೇ ಶತಮಾನ			ತುಂಡುರಾಜ್ಯ
67	ಕಮರಹಳ್ಳಿ	8ನೇ ಶತಮಾನ	ಗಂಗರು	ಶ್ರೀ ಪುರುಷ	ಗುಣಸಾಗರ ತಮ್ಮಡಿಗೆ ದಾನ
68	ಕಮರಹಳ್ಳಿ	8ನೇ ಶತಮಾನ			ಗುಣಸಾಗರ ತಮ್ಮಡಿಗೆ ದಾನ
69	ಕಮರಹಳ್ಳಿ	16 ಜೂನ್ 1567			ಲಿಂಗದೇವ ಒಡೆಯ
70	ಸೀಗೋಡಿ	1244	ಹೊಯ್ಸಳರು	ವೀರಸೋಮೇಶ್ವರದೇವ	ತಮಿಳುಶಾಸನ
71	ಬಲ್ಲಹಳ್ಳಿ	16 ಜುಲೈ 1537 16ನೇ ಶತಮಾನ			

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
72	ಬಲ್ಲಹಳ್ಳಿ	25 ಡಿಸೆಂಬರ್ 1553			
73	ಬಲ್ಲಹಳ್ಳಿ	1244–45		ವೀರಸೋಮೇಶ್ವರ	ಭಾಷೆ – ತಮಿಳು ಅಧಿಕಾರಿ – ಪೆರಿಯ ಪರುಗಡದೇವ
74	ಬಲ್ಲಹಳ್ಳಿ	29 ಜುಲೈ 1338			
75	ಸೋಮಹಳ್ಳಿ	12 ಅಕ್ಟೋಬರ್ 1576	ವಿಜಯನಗರ	ಶ್ರೀರಂಗರಾಜ ಮಹಾರಾಯ	ತೆರಿಗೆ – ಜ್ವದೆರಿಗೆ ಅಧಿಕಾರಿ – ರಾಮರಾಯ
76	ಸೋಮಹಳ್ಳಿ	16ನೇ ಶತಮಾನ			ಅಧಿಕಾರಿ – ನಂಜಯ್ಯದೇವ
77	ಸೋಮಹಳ್ಳಿ	25 ಡಿಸೆಂಬರ್ 1476			ತೆರಕಣಾಂಬಿ
78	ಸೋಮಹಳ್ಳಿ (ತಾಮ್ರಶಾಸನ)	2 ಆಗಸ್ಟ್ 1422	ವಿಜಯನಗರ	ವೀರಹರಿಹರರಾಯ	
79	ಸೋಮಹಳ್ಳಿ	12ನೇ ಶತಮಾನ			ಅಳತೆಗೋಲು – ಗ್ವದ್ದೆ
80	ಮಾದಾಪಟ್ಟಣ (ತಾಮ್ರಶಾಸನ)	28 ಅಕ್ಟೋಬರ್ 1751		ಕೃಷ್ಣರಾಜ ಒಡೆಯ	ತೆರಿಗೆ – ಮಗಮೆ ತೆರಿಗೆ – ಪೊಂಮ್ಮು ಭಾಷೆ – ತಮಿಳು
81	ಚಿಕ್ಕಣಾಪುರ	18 ಫೆಬ್ರವರಿ 1482		ವೀರನಂಜರಾಯ ಒಡೆಯ	
82	ಹಳ್ಳದ ಮಾದಹಳ್ಳಿ	10ನೇ ಶತಮಾನ			ಅಧಿಕಾರಿ – ಕೇತಪ್ಪ ಗಾವುಂದ
83	ಹಳ್ಳದ ಮಾದಹಳ್ಳಿ	11ನೇ ಶತಮಾನ			
84	ಅವುತು ಗೊಂಡಹಳ್ಳಿ		ವಿಜಯನಗರ	ಸದಾಶಿವರಾಯ	

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
85	ಹಳ್ಳದ ಪುರ (ಬೇಚಿರಾಕ್)	1550–51	ವಿಜಯನಗರ	ಸದಾಶಿವರಾಯ	ಗದ್ಯಾನ–55. ವರಹ
86	ವೀರನಪುರ	16ನೇ ಶತಮಾನ		ಚಿಕ್ಕನಂಜರಾಯ	ತೆ – ಮನೆ (ಸುಂಕದೇಣಿ)
87	ವೀರನಪುರ	1860			ಬಾವಿಯನ್ನು ಕಟ್ಟಿಸಿರುವುದು (ಮಲ್ಲಪ್ಪ ಬಿನ್ ಮಾದಪ್ಪ)
88	ನಳೂರು (ವೀರಗಲ್ಲು)	8ನೇ ಶತಮಾನ			
89	ಕಲ್ಲಹಳ್ಳಿ	1221			
90	ಕಲ್ಲಹಳ್ಳಿ (ವೀರಗಲ್ಲು)	26 ಸೆಪ್ಟೆಂಬರ್ 1230			ಹುಲಿಯನ್ನು ಕೊಂದ ಬಗ್ಗೆ (ಹರದಗೌಡನ ಸುಪುತ್ರ)
91	ಸಂಪಿಗೆಪುರ	7 ಅಕ್ಟೋಬರ್ 1610		ತಿರುಮಲರಾಜಯ್ಯ	
92	ಸಂಪಿಗೆಪುರ	9ನೇ ಶತಮಾನ			ಧರ್ಮ – ಜೈನ
93	ಹೂರದಹಳ್ಳಿ	8 ಅಕ್ಟೋಬರ್ 1553	ವಿಜಯನಗರ	ಸದಾಶಿವರಾಯ ಮಹಾರಾಯ	
94	ಪಡಗೂರು	16ನೇ ಶತಮಾನ	ವಿಜಯನಗರ	ಸಾಳುವ ಗೋವಿಂದರಾಜು	ನಾಣ್ಯ – ಕಂಬ 50 ಸಾರಿಗೆ ಹೊಲ ತೆರಿಗೆ – ಸಾರಿಗೆ
95	ಪಡಗೂರು	986	ಗಂಗರು	4ನೇ ರಾಚಮಲ್ಲ	
96	ಪಂಚನಹಳ್ಳಿ	16ನೇ ಶತಮಾನ		ಸಾಳ್ವನರಸಿಂಗನಾಯಕ	

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
97	ಪಂಚನಹಳ್ಳಿ	16ನೇ ಶತಮಾನ			
98	ಪಂಚನಹಳ್ಳಿ	18ನೇ ಶತಮಾನ			ಸಾರಿಗೆ 3 ಮನೆ
99	ಪಂಚನಹಳ್ಳಿ	13ನೇ ಶತಮಾನ			ಅಧಿಕಾರಿ – ಪಂಬೆಯ ನಾಯಕ
100	ಕೆಲಸೂರು	12 ಜನವರಿ 1829	ಮೈಸೂರು	9ನೇ ಚಾಮರಾಜ ಒಡೆಯರು	ಭಾಷೆ – ಸಂಸ್ಕೃತ
101	ಕೆಲಸೂರು	1 ಮಾರ್ಚ್ 1229	ಹೊಯ್ಸಳರು	2ನೇ ವೀರನರಸಿಂಹದೇವ	ಧರ್ಮ – ಜೈನ
102	ಕೆಲಸೂರು	12ನೇ ಶತಮಾನ			ಧರ್ಮ – ಜೈನ ಭಾಷೆ – ತಮಿಳು
103	ಕೆಲಸೂರು	12ನೇ ಶತಮಾನ			ಧರ್ಮ – ಜೈನ
104	ಕೆಲಸೂರು	10ನೇ ಶತಮಾನ			
105	ಕೆಲಸೂರು	19ನೇ ಶತಮಾನ			
106	ಕೆಲಸೂರು				ಅಧಿಕಾರಿ – ಕೆಂಪದೇವಪ್ಪ
107	ಕೆಲಸೂರು	19ನೇ ಶತಮಾನ			
108	ಕೆಲಸೂರು (ವೀರಗಲ್ಲು)	10ನೇ ಶತಮಾನ			
109	ಬೆರಟಹಳ್ಳಿ	13ನೇ ಶತಮಾನ	ಹೊಯ್ಸಳರು	ವೀರಸೋಮೇಶ್ವರ	
110	ಬೆರಟಹಳ್ಳಿ	18ನೇ ಶತಮಾನ			
111	ಬೆರಟಹಳ್ಳಿ	24 ಡಿಸೆಂಬರ್ 1188	ಹೊಯ್ಸಳ	ವೀರಬಲ್ಲಾಳ	ಭಾಷೆ – ತಮಿಳು
112	ಲಕ್ಕೂರು	6 ಜನವರಿ 1665			

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
113	ತೆರಕಣಾಂಬಿ (ತಾಮ್ರಶಾಸನ)				
114	ತೆರಕಣಾಂಬಿ	1504	ಉಮ್ಮತ್ತೂರು	ನಂಜರಾಜ ಅರಸ	ತೆರಕಣಾಂಬಿ ನಾಡು–ವೀರನಂಜರಾಜ ಒಡೆಯ; ತೆರಿಗೆ – ತೇರಕಾಣಿಕ
115	ತೆರಕಣಾಂಬಿ	16ನೇ ಶತಮಾನ			
116	ತೆರಕಣಾಂಬಿ	19ನೇ ಶತಮಾನ			
117	ತೆರಕಣಾಂಬಿ	19ನೇ ಶತಮಾನ			
118	ತೆರಕಣಾಂಬಿ	19ನೇ ಶತಮಾನ	ಮೈಸೂರು	3ನೇ ಕೃಷ್ಣರಾಜ ಒಡೆಯರು	
119	ತೆರಕಣಾಂಬಿ	1521	ವಿಜಯನಗರ	ಕೃಷ್ಣರಾಯ	ತೆರಿಗೆ – ತೇರಕಾಣಿಕೆ
120	ತೆರಕಣಾಂಬಿ				
121	ತೆರಕಣಾಂಬಿ	7 ಡಿಸೆಂಬರ್ 1640	ವಿಜಯನಗರ	ವೆಂಕಟಪತಿದೇವ ಮಹಾರಾಯ	
122	ತೆರಕಣಾಂಬಿ	15 ಅಕ್ಟೋಬರ್ 1537			
123	ತೆರಕಣಾಂಬಿ	14ನೇ ಶತಮಾನ	ದೇಶಿಗಣ ವರ್ತಕ ಸಂಘ		ಮೂಲಸಂಗದೇಶಿಗಣ
124	ತೆರಕಣಾಂಬಿ	9 / 10ನೇ ಶತಮಾನ			ಭಾಷೆ – ಕನ್ನಡ
125	ತೆರಕಣಾಂಬಿ	16ನೇ ಶತಮಾನ		ವೀರದೇವ ಮಹಾ ಅರಸು (ಮಹಾಮಂಡಲೇಶ್ವರ)	

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
126	ತೆರಕಣಾಂಬಿ		ಕಾಲನಾಥ ದೇಸಾಯಿ		
127	ಕಗ್ಗಳ	1461	ವಿಜಯನಗರ	ಅಚ್ಯುತರಾಯ	
128	ದೊಡ್ಡತುಪ್ಪೂರು	8 ಅಕ್ಟೋಬರ್ 1305			ಬರಹ – ಗಂಗಣ್ಣ
129	ದೊಡ್ಡತುಪ್ಪೂರು	14ನೇ ಶತಮಾನ			
130	ಬೆಟ್ಟಹಳ್ಳಿ	16ನೇ ಶತಮಾನ		ತಿರುಮಲರಾಜ ರಾಜಯ್ಯದೇವ (ಮಾಂಡಲೀಕ)	ತುಂಡುರಾಜ್ಯ
131	ಬೆಟ್ಟಹಳ್ಳಿ	18ನೇ ಶತಮಾನ			ತುಂಡುರಾಜ್ಯ
132	ಬೆಟ್ಟಹಳ್ಳಿ	1368–69	ವಿಜಯನಗರ	ವೀರಬುಕ್ಕರಾಯ	
133	ಬೆಟ್ಟಹಳ್ಳಿ	1311			
134	28 ಡಿಸೆಂಬರ್ 1521	ವಿಜಯನಗರ	ಕೃಷ್ಣದೇವರಾಯ		ತೆರಿಗೆ – ದಾಸುಗಳ ತೆರಿಗೆ ತೆರಿಗೆ – ಬೆಟ್ಟದ ಕಾವಲು ತೆರಿಗೆ – ಸಲಯಾರ ವೆತ್ತನೆ
135	ತ್ರಿಯಂಬಕಪುರ	26 ಅಕ್ಟೋಬರ್ 1429	ಉಮ್ಮತ್ತೂರು	ವೀರನಂಜರಾಜ ಒಡೆಯ	ತೆರಿಗೆ – ಬಿನುಗು
136	ತ್ರಿಯಂಬಕಪುರ	4 ಅಕ್ಟೋಬರ್ 1513	ವಿಜಯನಗರ	ಕೃಷ್ಣದೇವರಾಯ	ತೆರಿಗೆ – ಸೆರಿಯಾರವರ್ತನೆ
137	ತ್ರಿಯಂಬಕಪುರ	9 ನವೆಂಬರ್ 1535			ತೆರಿಗೆ – ಆಡು
138	ತ್ರಿಯಂಬಕಪುರ	18ನೇ ಶತಮಾನ			
139	ತ್ರಿಯಂಬಕಪುರ				

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
140	ತ್ರಿಯಂಬಕಪುರ				
141	ತ್ರಿಯಂಬಕಪುರ				
142	ತ್ರಿಯಂಬಕಪುರ				
143	ತ್ರಿಯಂಬಕಪುರ				
144	ತ್ರಿಯಂಬಕಪುರ				
145	ತ್ರಿಯಂಬಕಪುರ				
146	ತ್ರಿಯಂಬಕಪುರ	21 ಏಪ್ರಿಲ್ 1654	ಮೈಸೂರು	ಕಂಠೀರವ ನರಸರಾಜಯ್ಯ ಬಿನ್ ಬೆಟ್ಟದ ಚಾಮರಾಜ	
147	ತ್ರಿಯಂಬಕಪುರ (ತಾಮ್ರಶಾಸನ)	2 ಫೆಬ್ರವರಿ 1448	ವಿಜಯನಗರ	ಮಲ್ಲಿಕಾರ್ಜುನ	ಭಾಷೆ – ನಾಗರಿ
148	ತ್ರಿಯಂಬಕಪುರ (ತಾಮ್ರಶಾಸನ)	17ನೇ ಶತಮಾನ			ಭಾಷೆ – ನಾಗರಿ
149	ತ್ರಿಯಂಬಕಪುರ (ತಾಮ್ರಶಾಸನ)	31 ಮೇ 1417	ವಿಜಯನಗರ	ಹರಿಹರ	
150	2 ಡಿಸೆಂಬರ್ 1521	ವಿಜಯನಗರ	ಕೃಷ್ಣದೇವರಾಯ		ತೆರಿಗೆ – ಬೆಲ್ಲಸುಂಕ ಯಾಲರಬೇಡಿಗೆ ಪಲರಬೇಡಿಗೆ ಭಾಷೆ – ಕನ್ನಡ ಮತ್ತು ಸಂಸ್ಕೃತ
151	ತ್ರಿಯಂಬಕಪುರ	15ನೇ ಶತಮಾನ			

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
	(ತಾಮ್ರಶಾಸನ)				
152	ತ್ರಿಯಂಬಕಪುರ	24 ಸೆಪ್ಟೆಂಬರ್ 1310			
153	ಕಂದಗಾಲ	12ನೇ ಶತಮಾನ			ಭಾಷೆ – ತಮಿಳು
154	ಕಂದಗಾಲ	11ನೇ ಶತಮಾನ			ವೀರನಾದೇಶಿ
155	ಕಂದಗಾಲ	6 ಡಿಸೆಂಬರ್ 1334			
156	ಕೋಡಿಹಳ್ಳಿ	28 ಡಿಸೆಂಬರ್ 1521			ತೆರಿಗೆ – ವೃಪ್ಪಿಗೆ ಕಾವಲಿ
157	ಪುತ್ತನಪುರ		ವಿಜಯನಗರ	ವೆಂಕಟಪತಿರಾಯ	ತೆರಿಗೆ – ಬಿಟ್ಟಿ
158	ಪುತ್ತನಪುರ	15ನೇ ಶತಮಾನ			
159	ಹುಲ್ಲಾಣ	17 ಮಾರ್ಚ್ 1613			
160	ಹುಲಿಗನಮರಡಿ	19ನೇ ಶತಮಾನ			
161	ಹುಲಿಗನಮರಡಿ				
162	ಹುಲಿಗನಮರಡಿ	17ನೇ ಶತಮಾನ			
163	ಹುಲಿಗನಮರಡಿ	19ನೇ ಶತಮಾನ			
164	ಹುಲಿಗನಮರಡಿ				
165	ಹುಲಿಗನಮರಡಿ				
166	ಹುಲಿಗನಮರಡಿ	18ನೇ ಶತಮಾನ			
167	ಹುಲಿಗನಮರಡಿ				
168	ಕರಕಲ ಮಾದಹಳ್ಳಿ	30ಅಕ್ಟೋಬರ್ 1497	ಉಮ್ಮತ್ತೂರು	ನಂಜರಾಯ ಒಡೆಯ	
169	ಬೊಮ್ಮನಹಳ್ಳಿ	1492–93	ಉಮ್ಮತ್ತೂರು	ನಂಜರಾಯ ಒಡೆಯ	

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
170	ಎರೆಯೂರು				
171	ಎರೆಯೂರು (ವೀರಗಲ್ಲು)	10ನೇ ಶತಮಾನ			
172	ಎರೆಯೂರು	1338	ಹೊಯ್ಸಳ	ವೀರಬಲ್ಲಾಳ ದೇವರು 3	
173	ಎರೆಯೂರು				
174	ಬೊಮ್ಮಾಪುರ	09 ಜೂನ್ 1318	ಹೊಯ್ಸಳ	ವೀರಬಲ್ಲಾಳ ದೇವರು 3	
175	ಬೊಮ್ಮಾಪುರ	9ನೇ ಶತಮಾನ	ಗಂಗರು	ಪೆರುಮಾಡಿ	
176	ಶಿವಪುರ	23ಅಕ್ಟೋಬರ್ 1469	ತೆರಕಣಾಂಬಿ	ಸೋಮರಾಯ	ತೆರಿಗೆ – ಶಿವಳನುರದೆರಿ
177	ಶಿವಪುರ	18ನೇ ಶತಮಾನ			
178	ಶೆಟ್ಟಿಹಳ್ಳಿ	6 ಅಕ್ಟೋಬರ್ 1488	ತೆರಕಣಾಂಬಿ	ವೀರಹನುಮಪ್ಪ ಒಡೆಯ ನಂಜರಾಜ ಒಡೆಯ	
179	ಹೆಗ್ಗವಾಡಿ	2 ಏಪ್ರಿಲ್ 1327	ತೆರಕಣಾಂಬಿ	ಕೇತಯ್ಯ ದಣ್ಣಾಯಕ	
180	ಒಡ್ಡಗೆರೆ	19ನೇ ಶತಮಾನ			
181	ಒಡ್ಡಗೆರೆ	2 ಡಿಸೆಂಬರ್ 1551			
182	ಚೀರಕನಹಳ್ಳಿ	16ನೇ ಶತಮಾನ			
183	ಬಾಚಹಳ್ಳಿ	1598			
184	ಬಾಚಹಳ್ಳಿ	16ನೇ ಶತಮಾನ			
185	ಬಾಚಹಳ್ಳಿ	16ನೇ ಶತಮಾನ			
186	ಲೊಕ್ಕೆರೆ	22 ಮಾರ್ಚ್ 1540			
187	ಬಂಡೀಪುರ	7 ಜನವರಿ 1249			ಭಾಷೆ – ತಮಿಳು

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
188	ಬಂಡೀಪುರ				
189	ಬಂಡೀಪುರ	17ನೇ ಶತಮಾನ	ಮೈಸೂರು	ಚಿಕ್ಕದೇವರಾಜ	
190	ಬಂಡೀಪುರ		ಮೈಸೂರು		
191	ಬಂಡೀಪುರ		ಮೈಸೂರು		
192	ಬಂಡೀಪುರ		ಮೈಸೂರು		
193	ಗೋಪಾಲಸ್ವಾಮಿ ಬೆಟ್ಟ	17ನೇ ಶತಮಾನ			ಹಂಸತೀರ್ಥ! ಕಾಗೆ ಬಿದ್ದು ಹಂಸವಾಯ್ತು
194	ಗೋಪಾಲಸ್ವಾಮಿ ಬೆಟ್ಟ	18ನೇ ಶತಮಾನ			
195	ಗೋಪಾಲಸ್ವಾಮಿ ಬೆಟ್ಟ				
196	ಗೋಪಾಲಸ್ವಾಮಿ ಬೆಟ್ಟ	19ನೇ ಶತಮಾನ	ಮೈಸೂರು	ದೇವರಾಜಮ್ಮ ಕೋಂ ಕೃಷ್ಣಅರಸು	
197	ಗೋಪಾಲಸ್ವಾಮಿ ಬೆಟ್ಟ				
198	ಹಂಗಳ	22 ಏಪ್ರಿಲ್ 1275	ಹೊಯ್ಸಳ	3ನೇ ನರಸಿಂಹ	
199	ಹಂಗಳ	17ನೇ ಶತಮಾನ			
200	ಹಂಗಳ				
201	ಹಂಗಳ				
202	ಹಂಗಳ	12 ಮೇ 1656	ವಿಜಯನಗರ	ಶ್ರೀರಂಗರಾಯ	
203	ಹಂಗಳ				ಭಾಷೆ – ಜೈನ

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
204	ಹಂಗಳ				
205	ಹಂಗಳ				
206	ಸಿದ್ದೈಯ್ಯನಪುರ (ವೀರಗಲ್ಲು)	9ನೇ ಶತಮಾನ			
207	ದೇವರಹಳ್ಳಿ	8ನೇ ಶತಮಾನ	ಗಂಗರು	ದುರ್ವಿನೀತ ಎರೆಯಪ್ಪ	
208	ದೇವರಹಳ್ಳಿ	17ನೇ ಶತಮಾನ			ನಾಣ್ಯ – ತುಂಡುರಾಜ್ಯ ವರಹ
209	ಕಳ್ಳಿಪುರ (ವೀರಗಲ್ಲು)	17ನೇ ಶತಮಾನ			ವೀರಗುಡಿ
210	ಕುಣಗಹಳ್ಳಿ	5 ಜೂನ್ 1439			
211	ಕುಣಗಹಳ್ಳಿ	19ನೇ ಶತಮಾನ			
212	ಗೋಪಾಲಪುರ	24 ಫೆಬ್ರವರಿ 1513			
213	ಗೋಪಾಲಪುರ	20 ಜನವರಿ 1537	ವಿಜಯನಗರ	ಅಚ್ಯುತರಾಯ	ಕುಡುಗುನಾಡು
214	ಗೋಪಾಲಪುರ	3 ಜೂನ್ 1380	ವಿಜಯನಗರ	ಚಿಕ್ಕಕಂಪಣ್ಣ ಒಡೆಯ	
215	ಗೋಪಾಲಪುರ	11 ಅಕ್ಟೋಬರ್ 1157			
216	ಬೇರಂಬಾಡಿ	20 ಜುಲೈ 1562	ವಿಜಯನಗರ	ರಾಮರಾಯ	ತೆರಿಗೆ – ಗಣಾಚಾರಿ
217	ಬೇರಂಬಾಡಿ	17ನೇ ಶತಮಾನ			ತುಂಡುರಾಜ್ಯ
218	ಬೇರಂಬಾಡಿ	14ನೇ ಶತಮಾನ			
219	ಬೇರಂಬಾಡಿ (ವೀರಗಲ್ಲು)	10ನೇ ಶತಮಾನ			
220	ಬೇರಂಬಾಡಿ	1090–92			
221	ಬೇರಂಬಾಡಿ	17ನೇ ಶತಮಾನ			

ಶಾಸನ ಸಂಖ್ಯೆ	ಶಾಸನ ದೊರೆತ ಸ್ಥಳ	ಕಾಲ	ರಾಜಮನೆತನದ ಹೆಸರು	ರಾಜನ ಹೆಸರು	ಇತರೆ
222	ಬೇರಂಬಾಡಿ	17ನೇ ಶತಮಾನ	ಮೈಸೂರು		
223	ಕಣ್ಣಾಗಾಲ	4 ಏಪ್ರಿಲ್ 1315	ತೆರಕಣಾಂಬಿ	ಮಾದವದಣ್ಣಾಯಕ	
224	ದೊಡ್ಡಕೂತನೂರು (ವೀರಗಲ್ಲು)	15ನೇ ಶತಮಾನ			



ಚಿತ್ರ–1 : ತ್ರಿಯಂಬಕೇಶ್ವರ ದೇವಾಲಯದ ಬಲಭಾಗದ ಶಾಸನ



ಚಿತ್ರ–2




ಚಿತ್ರ–3


ಚಿತ್ರ–2 ಮತ್ತು–3 : ತ್ರಿಯಂಬಕೇಶ್ವರ ದೇವಾಲಯ ಬಲಭಾಗದ ಶಾಸನ



ಚಿತ್ರ–4 : ಕಣ್ಣೇಗಾಲ ಗ್ರಾಮದ ಶಾಸನ
ದೇವ ಶಾಸನ



ಚಿತ್ರ–5 : ದೇವರಹಳ್ಳಿಯ ಶಾಸನ




ಚಿತ್ರ–6



ಚಿತ್ರ–7

ಚಿತ್ರ–6 ಮತ್ತು 7 : ಬೆರಂಬಾಡಿ ಗ್ರಾಮದ ಮಾಸ್ತಿ ಕಲ್ಲುಗಳು



ಚಿತ್ರ–8 : ಹಂಗಳದ ವೀರಗಲ್ಲು



ಚಿತ್ರ–9




ಚಿತ್ರ–10




ಚಿತ್ರ–11

ಚಿತ್ರ–9, 10 ಮತ್ತು 11 : ಬೆರಂಬಾಡಿ ಗ್ರಾಮದ ಮಾಸ್ತಿ ಕಲ್ಲುಗಳು




ಚಿತ್ರ–12 : ಕಣ್ಣೇಗಾಲ ಗ್ರಾಮದ ವೀರಗಲ್ಲು.



ಚಿತ್ರ–13 : ಬೆರಂಬಾಡಿ ಗ್ರಾಮದ ಮಾಸ್ತಿ ಕಲ್ಲು



ಚಿತ್ರ–14



ಚಿತ್ರ–15

ಚಿತ್ರ–14 ಮತ್ತು ಚಿತ್ರ–15 : ಗೋಪಾಲಪುರದ ವೀರಗಲ್ಲು



ಚಿತ್ರ–16 ಹಂಗಳದ ಶಾಸನ



ಚಿತ್ರ–17 : ಹಂಗಳದ ಕಲ್ಲುಮಠದ ಲಿಂಗ ಮುದ್ರೆ ಕಲ್ಲು



ಚಿತ್ರ–18 : ತ್ರಿಯಂಬಕೇಶ್ವರ ದೇವಾಲಯದ ಮುಂಭಾಗ



ಚಿತ್ರ–19 : ಹಂಗಳದ ಕಲ್ಲುಮಠದ ಮುಂಭಾಗ


ಅಧ್ಯಯನದ ಸ್ಥಳ :
ಗುಂಡ್ಲುಪೇಟೆ
ಚಾಮರಾಜನಗರ ಜಿಲ್ಲೆ
ಕೊಳ್ಳೆಗಾಲ
ಯಳಂದೂರು
ಚಾಮರಾಜನಗರ
ಗುಂಡ್ಲುಪೇಟೆ
ಭಾರತ
ಕರ್ನಾಟಕ

AKSHARA GRANTHALAYA
ACC.NO. 048791

048791